RNI.No.APKAN/2021/80589

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

SAPTHAGIRI(KANNADA)
SPIRITUAL ILLUSTRATED MONTHLY
Volume:06, Issue:1, Pages:56
August - 2026, Price Rs. 20/-

ಆಗಸ್ಟ್ 2026 ಬೆಲೆ ರೂ. 20/-





# ತಿರುಮಲೆ, ಶ್ರೀ ವೆಂಕಟೇಶ್ವರಸ್ವಾಮಿಯವರ ವಾರ್ಷಿಕ ಬ್ರಹ್ಮೋತ್ಸವಗಳು

## 14-09-2026 ರಿಂದ 23-09-2026 ರವರೆಗೆ

| ದಿನಾಂಕ | ವಾರ | ಹಗಲು ಉತ್ಸವ | ರಾತ್ರಿ ಉತ್ಸವ |
|---|---|---|---|
| 14-09-2026 | ಸೋಮವಾರ | ---------- | ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ |
| 15-09-2026 | ಮಂಗಳವಾರ | ತಿರುಚ್ಚಿ ಉತ್ಸವ,ಧ್ವಜಾರೋಹಣ | ದೊಡ್ಡಶೇಷವಾಹನ |
| 16-09-2026 | ಬುಧವಾರ | ಚಿಕ್ಕಶೇಷವಾಹನ | ಹಂಸವಾಹನ |
| 17-09-2026 | ಗುರುವಾರ | ಸಿಂಹವಾಹನ | ಮುತ್ತಿನಚಪ್ಪರವಾಹನ |
| 18-09-2026 | ಶುಕ್ರವಾರ | ಕಲ್ಪವೃಕ್ಷವಾಹನ | ಸರ್ವಭೂಪಾಲವಾಹನ |
| 19-09-2026 | ಶನಿವಾರ | ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ | ಗರುಡವಾಹನ |
| 20-09-2026 | ಭಾನುವಾರ | ಹನುಮದ್ವಾಹನ, ಸಾ॥ ವಸಂತೋತ್ಸವ | ಗಜವಾಹನ |
| 21-09-2026 | ಸೋಮವಾರ | ಸೂರ್ಯಪ್ರಭವಾಹನ | ಚಂದ್ರಪ್ರಭವಾಹನ |
| 22-09-2026 | ಮಂಗಳವಾರ | ರಥೋತ್ಸವ | ಅಶ್ವವಾಹನ |
| 23-09-2026 | ಬುಧವಾರ | ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ | ತಿರುಚ್ಚಿ ಉತ್ಸವ, ಧ್ವಜಾವರೋಹಣ |

ಯಾ ಮಿಹಮಾಂ ಪುಷ್ಪಿತಾಂ ವಾಚಂ ಪ್ರವದಂತ್ಯ ವಿಪಶ್ಚಿತಃ।
ವೇದವಾದರತಾಃ ಪಾರ್ಥ ನಾನ್ಯದಸ್ತೀತಿ ವಾದಿನಃ

ಅರ್ಜುನ, ದಡ್ಡರು ವೇದದ ಮೇಲು ನೋಟಕ್ಕೆ ಕಾಣುವ
ಹೂವಿನಂಥ ಮಾತಿಗೇ ಮರುಳಾಗುತ್ತಾರೆ. ಅದರಾಚೆಗಿರುವ
ಭಗವತ್ ತತ್ತ್ವವೆಂಬ ಹಣ್ಣು ಅವರಿಗೆ ಕಾಣಿಸದು.
ಅದಕ್ಕೆಂದೆ ಅವರು ಅದನ್ನು ನಿರಾಕರಿಸಿ ಬಿಡುತ್ತಾರೆ.

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -42)





ಸುಳಿದವನ್ಯಾರಮ್ಮ ಬೆಟ್ಟದ ಮೇಲೆ। ಹಳೂವದೊಳಿಹ ತಿಮ್ಮಣ್ಣ ॥ಪ॥

ವಾರೆದುರುಬಿಗೆ ಸಂಪಿಗೆಗೂಡಿ ವಿಹಗವ। ನೇರಿ ಬರುವನಕ್ಕ ॥
ವಾರಿಜಾನನ ವಜ್ರ ಮಣಿದಂಥಾನಗೆ ಸೊಬ। ಗೇರಿದ ಹರಿ ಕಾಣಕ್ಕ ॥1॥

ಅಡಿಗೊಮ್ಮೆ ಜೀಯಾ ಪರಾಕೆಂಬ ಸುರಮುನಿ। ಗಡಣದ ವೀರನಾರಮ್ಮ॥
ನುಡಿದರೆ ನುಡಿವ ನುಡಿಯದಿದ್ದರೊಲ್ಲದ! ಬೆಡಗಿನ ಮಹಿಮೆ ನೀರೆ॥2॥

ಮಕರ ಕುಂಡಲ ಶಂಖ ಚಕ್ರ ಕೌಸ್ತುಭ ಶರಿ। ಯುಕುತ ವಕ್ಷದವನಾವನೆ॥
ಅಖಿಳ ಜಗವ ಬಸುರಲಿ ಬಚ್ಚಿಟ್ಟ। ಸಖ ಶ್ರೀನಿವಾಸದೇವನೆ ॥3॥

ಸಾಮಗಾನವನಾದರಿಪ ಶ್ಯಾಮಲಾಂಗದ। ಕೋಮಲ ದಾರು ಹೇಳೆ॥
ವ್ಯೋಮಕಚಾ ಆದಿ ವಂದಿತಾನತಜನ। ಪ್ರೇಮವಾರಿಧಿ ನೋಡಲೆ ॥4॥

ಸಿರಿ ಅಂಜನಾದ್ರಿಯೊಳಾವಾಗ ಮಂಗಳ । ಚರಿತನು ದಾರೆ ತಂಗಿ॥
ಮರೆಹೊಕ್ಕವರ ಕಾವ ಪ್ರಸನ್ನವೆಂಕಟ । ವರದನ ನಂಬು ಬೇಗ ॥5॥

-ಶ್ರೀ ಪ್ರಸನ್ನ ವೆಂಕಟದಾಸರು



# ಈಶಾವಾಸ್ಯೋಪನಿಷತ್

## ಮಂತ್ರ - 8

- ಓಂ ಪ್ರಕಾಶ್ ಭಟ್
99640 25922

**ಸ ಪರ್ಯಗಾಚ್ಛು ಕ್ರಮಕಾಯಮವ್ರಣ-**
**ಮಸ್ನಾವಿರಂ ಶುದ್ಧಮಪಾಪವಿದ್ಧಮ್।**
**ಕವಿರ್ಮನೀಷೀ ಪರಿಭೂಃ ಸ್ವಯಾಂಭೂ-**
**ರ್ಯಾಥಾತಥ್ಯತೋರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ॥**

ಸತ್ಯವನ್ನು ತಿಳಿದುಕೊಂಡವನಿಗೆ, ಜ್ಞಾನಿಗೆ ಭಯ-ಶೋಕ-ಮೋಹಗಳು ಇರುವುದಿಲ್ಲ. ಭಗವಂತನ ಬಗ್ಗೆ ತಿಳುವಳಿಕೆ, ಅವನ ಗುಣಗಳ ತಿಳುವಳಿಕೆ ಅತ್ಯಂತ ಶ್ರೇಷ್ಠವಾದದ್ದು. ಆ ಭಗವಂತನಿಗೆ ಯಾವುದೆಲ್ಲ, ವಿಶೇಷ ಗುಣಗಳು ಇವೆ ಎನ್ನುವುದನ್ನು ಆರು ವಿಶೇಷಣಗಳ ಮೂಲಕ ಈ ಮಂತ್ರದಲ್ಲಿ ತಿಳಿಸುತ್ತಾರೆ.

**1. ಶುಕ್ರಮ್ :** ಶೋಕರಹಿತವಾದದ್ದು. ಶುಕ್ರ ಅಂದರೆ ಶುಕ್ ರಹಿತ. ಶುಕ್ ಅಂದರೆ ದುಃಖ ದುಃಖರಹಿತವಾದದ್ದು. ಶುಕ್ರ ಅಂದರೆ ಬೆಳ್ಳಗಿರುವಂಥದ್ದು ಎಂದೂ ಅರ್ಥ ಇದೆ. ಸ್ವಚ್ಛವಾದದ್ದು ನಿರ್ಮಲವಾದದ್ದು. ಯಾವುದು ಸ್ವಚ್ಛ? ಯಾವುದು ನಿರ್ಮಲ? ಯಾವುದು ಬೆಳ್ಳಗಿರುವುದು? ಎಂದರೆ ಯಾವುದು ಕೇವಲ ಸುಖವುಳ್ಳದ್ದೋ ಅದು ನಿರ್ಮಲ ಸ್ವಚ್ಛ ಹಾಗೂ ಬೆಳ್ಳಗೆ. ದುಃಖ ಅಂದರೆ ಕಲೆ, ಕಲೆರಹಿತ ದುಃಖವೇ ಇಲ್ಲದ್ದು, ದುಃಖದ ಸ್ಪರ್ಶವೇ ಇಲ್ಲದ್ದು ಕೇವಲ ಆನಂದ ರೂಪವನ್ನು ಹೊಂದಿರುವ ಭಗವಂತನನ್ನು ಶುಕ್ರ ಎಂದು ಹೇಳುತ್ತಾರೆ. ಶೋಕರಹಿತ ಸ್ಥಿತಿ ಕೂಡ ಹೌದು. ಜೀವ ದುಃಖದಲ್ಲಿ ಬದುಕುತ್ತಾ ಇದ್ದಾನೆ. ಶೋಕರಹಿತ ತತ್ವವನ್ನು ಉಪಾಸನೆ ಮಾಡಿದಾಗ ತಿಳಿದು ಕೊಂಡಾಗ ಆತನೂ ಶೋಕರಹಿತ ಸ್ಥಿತಿಗೆ ಹೋಗಬಹುದು, ಹೋಗಬೇಕು.

**2. ಅಕಾಯಂ :** ದೇಹರಹಿತವಾದದ್ದು, ಸ್ಥೂಲದೇಹ-ಸೂಕ್ಷ್ಮ ದೇಹ ಎಂದು ಎರಡು ದೇಹಗಳು. ಸೂಕ್ಷ್ಮದೇಹದಲ್ಲಿ ಜೀವಕ್ಕೆ ಅಂಟಿಕೊಂಡೇ ಇರುವ ಕಳಚಲು ಬಾರದ ಅಂಗದೇಹ ಇದೆ. ಆದರೆ ಭಗವಂತನಿಗೆ ಅದಿಲ್ಲ. ಶರೀರದ ಬಂಧನವೇ ಅವನಿಗಿಲ್ಲ. ಹಾಗಾಗಿ ಅವನಲ್ಲಿ ಪಾಪ-ದೋಷಗಳೂ ಇಲ್ಲ. ಈ ರೀತಿ ಉಪಾಸನೆ ಮಾಡಿದರೆ ನಾವೂ ಪಾಪರಹಿತ-ದೋಷರಹಿತರಾಗುತ್ತೇವೆ.

**3. ಅವ್ರಣಮ್ :** ವ್ರಣ ಅಂದರೆ ತುಂಡು-ತುಣುಕು-ಅಲ್ಪ ಸಣ್ಣದು ಯಾವುದು ಸಣ್ಣತನವನ್ನು ಪಡೆಯಬಲ್ಲದೋ ಅದು ವ್ರಣ. ಯಾವುದು ಸಣ್ಣತನವನ್ನು ಎಂದೂ ಪಡೆಯಲಾರದೋ ಅದು ಅವ್ರಣ. ಅಪೂರ್ಣವಾದದ್ದು ವ್ರಣ. ಪೂರ್ಣವಾದದ್ದು ಅದು ಅವ್ರಣ. ಹೀಗೆ ಉಪಾಸನೆ ಮಾಡಿದಾಗ ಜೀವ ತನ್ನ ಅಲ್ಪಬುದ್ಧಿಯನ್ನು ಕಳಚಿ ಪೂರ್ಣನಾಗುತ್ತಾನೆ.

**4. ಅಸ್ನಾವಿರಂ :** ಸ್ನಾವಿರ ಎಂದರೆ ಸ್ನಾಯುಗಳಿಂದ ಕೂಡಿದ ಭೌತಿಕ ದೇಹ ಸ್ಥೂಲದೇಹ, ಸ್ಥೂಲಭೌತಿಕ ದೇಹರಹಿತನಾದವನು ಭಗವಂತ. ಅಂದರೆ ನಮಗಿರುವಂತೆ ಪಾಂಚಭೌತಿಕ ದೇಹ ಅವನಿಗಿಲ್ಲ. ಪ್ರಾಕೃತ ಶರೀರ ಅವನಿಗಿಲ್ಲ. ಹೀಗೆ ಉಪಾಸನೆ ಮಾಡಿದರೆ ನಮ್ಮ ಪಾಂಚಭೌತಿಕ ದೇಹದ ಬಂಧವನ್ನು ಆತ ಕಳಚುತ್ತಾನೆ.

**5. ಶುದ್ಧಮ್ :** ದೋಷದ ಸ್ಪರ್ಶವೇ ಇರದ ನಿತ್ಯ ಶುದ್ಧ ಪರಮಪಾವನ ತತ್ವ. ಶುದ್ಧ ತತ್ವವನ್ನು ತಿಳಿದುಕೊಂಡರೆ ಜೀವನೂ ಶುದ್ಧವಾಗಿ ದೋಷರಹಿತನಾಗಬಲ್ಲ.

**6. ಅಪಾಪವಿದ್ಧಮ್ :** ಭಗವಂತ ಅತ್ಯಂತ ಶುದ್ಧ ಯಾಕೆಂದರೆ ಆತ ಅಪಾಪವಿದ್ಧಮ್ ಅಂದರೆ ಯಾವ ಪಾಪದ ಸ್ಪರ್ಶವೂ ಇರದವನು. ಈ ಉಪಾಸನೆಯಿಂದ ನಾವೂ ದೋಷ-ಪಾಪರಹಿತರಾಗಿ ಬದುಕಬೇಕು. ಅಷ್ಟೇ ಅಲ್ಲ ಆತ ಎಲ್ಲವನ್ನೂ ಬಲ್ಲ ಕವಿ-ಸರ್ವಜ್ಞ. ಎಲ್ಲರ ಮನಸ್ಸನ್ನೂ ನಿಯಂತ್ರಿಸುವ ಮನೀಷೀ ಎಲ್ಲಾ ಕಡೆ ತುಂಬಿರುವ ಪರಿಭೂಃ ಯಾರ ಅಂಕೆಗೂ ಸಿಲುಕದ ತಾನೇತಾನಾಗಿರುವ ಸ್ವಯಂಭೂಃ ಸದಾ ಸರ್ವ ಸ್ವತಂತ್ರನು. ಒಟ್ಟಿನಲ್ಲಿ ಈ ನಾಲ್ಕು ವಿಶೇಷಣಗಳ ಅರ್ಥ ಏನೆಂದರೆ, ಅವನನ್ನು ಯಾರೂ ಸೃಷ್ಟಿಸಿದವರಿಲ್ಲ. ಅನಾದಿ ಕಾಲದಿಂದ ಅನಂತಕಾಲದವರೆಗೆ 'ಅರ್ಥಾನ್' ಪದಾರ್ಥಗಳನ್ನು ಶಾಶ್ವತವಾಗಿ ಸೃಷ್ಟಿ ಮಾಡುತ್ತಾ ಇರುತ್ತಾನೆ.

ಇಲ್ಲಿಗೆ 8 ಮಂತ್ರಗಳ ಒಂದು ಖಂಡ ಮುಕ್ತಾಯವಾಗುತ್ತದೆ. ಭಗವಂತನ ಅಸಾಧಾರಣ ಗುಣಗಳನ್ನು ಕಡೆಯ ಎಂಟನೆಯ ಮಂತ್ರದಲ್ಲಿ ನೋಡಿದೆವು. ಮುಂದೆ ವಿದ್ಯೆ-ಅವಿದ್ಯೆಗಳ ಬಗ್ಗೆ ತಿಳಿದುಕೊಳ್ಳೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

# ಸಪ್ತಗಿರಿ

ಶ್ರೀ ಪರಾಭವ ನಾಮ ಸಂವತ್ಸರ ಆಷಾಢ - ಶ್ರಾವಣ ಮಾಸ ಸಂಚಿಕೆ

ಸಂಪುಟ:06 ಆಗಸ್ಟ್ - 2026 ಸಂಚಿಕೆ:1



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಶ್ರೀ ಎಂ.ರವಿಚಂದ್ರ, IAS,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

**ಪ್ರಕಾಶಕರು,ಸಂಪಾದಕರು,**
**ಪ್ರಧಾನ ಸಂಪಾದಕರು** (FAC)
ಡಾ।ವಿ.ಜಿ.ಜೊಕ್ಖಲಿಂಗಂ, M.A.,Ph.d.,PG.Dip.inJMC

**ಮುದ್ರಣ**
ಶ್ರೀ ಆರ್.ವಿ. ವಿಜಯ್‌ಕುಮಾರ್, B.A.B.Ed
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

**ಡಿ.ಐ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಾಗ್ರಹಣ**
ಶ್ರೀ ಪಿ.ಎನ್.ಶೇಖರ್, ಪ್ರಧಾನಛಾಯಾಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯಛಾಯಾಗ್ರಹಣ ತಿ.ತಿ.ದೇ.

**ಲೇಖನ/ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್, 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363
ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
**1800-425-4141**
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
24x7 ಕರೆ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸ ಪತ್ರಿಕೆಯನ್ನು ವೀಕ್ಷಿಸಲು
**www.tirumala.org**
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ - ಪ್ರಧಾನ ಸಂಪಾದಕರು

## ವಿಷಯಸೂಚಿಕೆ


| | | | |
|---|---|---|---|
| ಸಂಪಾದಕೀಯ | | | 06 |
| ಶ್ರಾವಣದ ಶೋಭೆ ವರಮಹಾಲಕ್ಷ್ಮಿ ವ್ರತದ ಮಹಿಮೆ ಹಿನ್ನೆಲೆ ಮತ್ತು ವೈಶಿಷ್ಟ್ಯ | - | ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 07 |
| ಜ್ಯೋತಿರ್ಭಿಮೇಶ್ವರ ಅಮಾವಾಸ್ಯೆ | - | ಶ್ರೀಮತಿ ಗಿರಿಜಾ ಎಸ್.ದೇಶಪಾಂಡೆ | 09 |
| ಸರ್ವಜ್ಞಕಲ್ಪರು ಶ್ರೀ ಜಯತೀರ್ಥರು | - | ಶ್ರೀಧರರಾಯಸಂ | 10 |
| ಭ್ರಾತೃತ್ವ ಬೆಸೆಯುವ ಶ್ರಾವಣ ಹುಣ್ಣಿಮೆ | - | ಶ್ರೀಮತಿ ವಾರುಣಿ ಹೊನ್ನಾಳಿ | 12 |
| ಸಿರಿಯಾಳ ಷಷ್ಠಿ | - | ಡಾ॥ ರೂಪಶ್ರೀ ಶಶಿಕಾಂತ್ | 14 |
| ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ | - | ದಿ॥ಜಿ.ಎನ್. ಶ್ರೀನಿವಾಸನ್ | 16 |
| ಜ್ಯೋತಿಷ್ಯಾಮೃತಧಾರಾ-ಗ್ರಂಥ ಪರಿಚಯ | - | ಡಾ॥ ಭಾರತೀ ರವೀಂದ್ರ | 17 |
| ಉಪಾಕರ್ಮ ಮತ್ತು ಉತ್ಸರ್ಜನ | - | ವೇ. ವಿ. ಶಿವರಾಮಜೋಗಳೇಕರ | 18 |
| ಹರಿಕಥಾಮೃತಸಾರ ಮಹಿಮೆ ಅಪಾರ | - | ಶ್ರೀಮತಿ ಪ್ರಿಯಪ್ರಾಣೇಶ ಹರಿದಾಸ | 20 |
| ಶ್ರೀ ರಾಘವೇಂದ್ರ ಸ್ವಾಮಿಗಳ ಮಹಿಮೆ | - | ಡಾ॥ ರವೀಂದ್ರ ಅ.ಕುಷ್ಟಗಿ | 22 |
| ಆಳ್ವಾರರು ದರ್ಶಿಸಿದ ತಿರುಮಲೆಯ ಶ್ರೀ ಶ್ರೀನಿವಾಸ | - | ಪ್ರೊ। ಎಸ್. ಜಿಳಿಗಿರಿವಾಸನ್ | 24 |
| ಶ್ರೀ ವರಲಕ್ಷ್ಮೀ ವ್ರತ ವಿಧಾನ | - | ಎಸ್. ವಾದಿರಾಜ | 27 |
| ಕಾಡನೂರಿನ ಚೆನ್ನಕೇಶವ ದೇವಾಲಯ | - | ಕೆಂಗೇರಿ ಚಕ್ರಪಾಣಿ | 36 |
| ತಿರುಕ್ಕುಳಂದೈ-ನವತಿರುಪತಿಗಳು - 4 | - | ಸೂರ್ಯವಂಶಿ | 38 |
| ಆಳ್ವಾರುಗಳು ಕಂಡ ತಿರುವೇಂಗಡ | - | ಎಂ.ಆರ್. ನರಸಿಂಹನ್ | 40 |
| ತಿರುಮಲೆ ಕಾಲಮಾನಾಚರಣೆಗಳು | - | ಶ್ರೀಮತಿ | 42 |
| ಶ್ರೀವೆಂಕಟಾಚಲ ಮಹಾತ್ಮೆ | - | ಶ್ರೀಮತಿ ಎನ್. ಪಾರ್ವತಿ | 44 |
| ರಾಶಿಫಲಗಳು | - | ಶ್ರೀಮಾತಾ ಅನುಗ್ರಹ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - | ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ- ಗಜೇಂದ್ರನ ಭಕ್ತಿಗೆ ಒಲಿದು ಮೋಕ್ಷ ನೀಡಿದ ಶ್ರೀಹರಿ | - | ಎ.ಆರ್. ರಘುರಾಮ | 48 |
| ಚಿತ್ರಕಥೆ- ಶತ್ರುಗಳೊಂದಿಗೆ ಸ್ನೇಹ ಮಿತಿಯಲ್ಲಿರಬೇಕು | - | ಆರ್.ಕೆ.ವಿ | 52 |


**ಮುಖಚಿತ್ರ -** ತಿರುಚಾನೂರಿನಲ್ಲಿ ವರಲಕ್ಷ್ಮೀ ವ್ರತದ ಸಂದರ್ಭವಾಗಿ ಶ್ರೀ ಪದ್ಮಾವತಿ ಅಮ್ಮನವರು.
**ಹಿಂಬದಿಚಿತ್ರ-** ಶ್ರೀ ವಲ್ಲಿ ದೇವಸೇನಾ ಸಮೇತ ಶ್ರೀ ಷಣ್ಮುಖ ಸ್ವಾಮಿಯವರು.



# ಸೃಷ್ಟಿಯಲ್ಲಿ ಮಧುರವಾದುದು!

ಯಾರನ್ನು ನೋಡುವುದರಿಂದ,ಯಾರನ್ನು ಸ್ಪರ್ಶಿಸುವುದರಿಂದ, ಯಾರ ಮಾತುಗಳನ್ನು ಕೇಳುವುದರಿಂದ ಮನಸ್ಸು ದ್ರವಿಸಿಹೋಗುತ್ತದೋ ಅದೇ ಅತ್ಯಂತ ಶ್ರೇಷ್ಠವಾದ ಸ್ನೇಹವೆಂದು ರಾಮಾಯಣವು ಹೇಳುತ್ತದೆ. ಕಿಷ್ಕಿಂದಾ ಕಾಂಡದಲ್ಲಿ ಸ್ನೇಹಕ್ಕೆ ಸಂಬಂಧಿಸಿದ ಅಪುರೂಪಕರವಾದ ಕೆಲವು ವಿಷಯಗಳು ಬೆಳಕಿಗೆ ಬಂದವು. ಹನುಮಂತನು ರಾಮಲಕ್ಷ್ಮಣರನ್ನು ಸುಗ್ರೀವನ ಬಳಗೆ ಕರೆದುಕೊಂಡು ಬಂದು ಅವರಿಬ್ಬರನ್ನೂ ಸುಗ್ರೀವನಿಗೆ ಪರಿಚಯ ಮಾಡಿಕೊಟ್ಟ. ತನ್ನ ಅಣ್ಣ ವಾಲಿಯ ಕಾರಣದಿಂದ ಭಯದಿಂದ ಕಾಲವನ್ನು ತಳ್ಳುತ್ತಿದ್ದ ಸುಗ್ರೀವನು, ರಾಮಲಕ್ಷ್ಮಣರ ಮೈತ್ರಿ ಲಭಿಸಿದ್ದಕ್ಕೆ ಆನಂದಿಸಿದ. 'ರಾಮಾ! ನನ್ನೊಂದಿಗೆ ಸ್ನೇಹವನ್ನು ಬೆಳೆಸುವುದು ನಿನಗೆ ಒಪ್ಪಿಗೆಯಾದರೆ ಇದೋ ನನ್ನ ಕೈ ಚಾಚುತ್ತಿದ್ದೇನೆ. ನೀವು ನಿಮ್ಮ ಕೈಯನ್ನು ಸೇರಿಸು. ಈಗಲೇ ಶಾಶ್ವತವಾದ ಬಂಧವನ್ನು ವಿರ್ಪಡಿಸಿಕೊಳ್ಳೋಣ' ಎಂದ. ಶ್ರೀರಾಮನೂ ಸಂತೋಷದಿಂದ ಅವನೊಂದಿಗೆ ಕೈಜೋಡಿಸಿದ. ಹನುಮಂತನು ಸ್ವತಃ ಅಗ್ನಿಯನ್ನು ಪ್ರತಿಷ್ಠಾಪನೆ ಮಾಡಿ, ಆ ಅಗ್ನಿಸಾಕ್ಷಿಯಾಗಿ ರಾಮಸುಗ್ರೀವರ ಮೈತ್ರೀ ಪ್ರತಿಜ್ಞೆಯನ್ನು ಮಾಡಿಸಿದ್ದು ಒಂದು ವಿಶೇಷ! ಸುಗ್ರೀವನು 'ರಾಮಾ! ಇನ್ನು ನೀನು ನನ್ನ ಸ್ನೇಹಿತನಾದೆ. ಇನ್ನು ಸುಖವಾಗಲೀ, ದುಃಖವಾಗಲೀ ಇಬ್ಬರಿಗೂ ಒಂದೇ! ಎಂದ. ಒಬ್ಬರ ಸಮಸ್ಯೆಯನ್ನು ಒಬ್ಬರು ಹೇಳಿಕೊಂಡರು. ರಾಮನ ಸೀತೆಯ ಬಗೆಗೆ ತಿಳಿಸಿ ನೊಂದುಕೊಂಡ, ಸುಗ್ರೀವನು ನಮ್ಮ ಸ್ನೇಹವನ್ನು ಪುರಸ್ಕರಿಸಿಕೊಂಡು ನಿನಗೆ ಹಿತಬೋಧೆಯನ್ನು ಮಾಡುತ್ತಿದ್ದೇನಾಗಲೀ ಉಪದೇಶವಲ್ಲ. ನನ್ನೊಂದಿಗಿನ ಮೈತ್ರಿಯನ್ನು ಒಪ್ಪಿಕೊಂಡಿರುವುದರಿಂದ ಈ ನೋವನ್ನು ಬಿಡು' ಎಂದ. ಸಹಾನುಭೂತಿಯಿಂದ ಹಿತವಾಕ್ಯವನ್ನು ತಿಳಿಸುವ ಸ್ನೇಹಿತರನ್ನು ಇಲ್ಲಿ ನಾವು ಕಾಣಬಹುದು.

ವಾಲಿ ರಾಮನ ಶರಾಘಾತಕ್ಕೆ ಬಲಿಯಾದ. ವಾಲಿಯ ವಧೆಯನ್ನು ತಾನೇ ಬಯಸಿದ್ದರೂ ಅದು ನಡೆದುಹೋದಾಗ ಸುಗ್ರೀವನಲ್ಲಿ ಒಂದು ರೀತಿಯ ವಿಚಿತ್ರವಾದ ಅಪರಾಧ ಭಾವನೆ ವಿರ್ಪಟ್ಟಿತು. ಆಗ ಅವನು ರಾಮನೊಂದಿಗೆ ತನಗಾದ ದುಃಖವನ್ನು ಹಂಚಿಕೊಂಡ. ತನ್ನ ಅಣ್ಣನ ಮರಣಕ್ಕೆ ತಾನೇ ಕಾರಣನಾದ್ದರಿಂದ ಅಗ್ನಿ ಪ್ರವೇಶವನ್ನು ಮಾಡುತ್ತೇನೆಂದ. ಸಾಮಾನ್ಯರಾದರೆ ಈ ವಿಷಯದಲ್ಲಿ ಅಸಹನೆಯನ್ನು ವ್ಯಕ್ತಪಡಿಸುತ್ತಿದ್ದರು. ಆದರೆ ಅವನ ಮಾನಸಿಕ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಮಿತ್ರನಾಗಿ ರಾಮ ಅವನಿಗೆ ಒಂದು ಮಾತನ್ನೂ ಹೇಳದೇ, ಕಣ್ಣೀರು ಸುರಿಸಿ ನೊಂದುಕೊಂಡ ಇಲ್ಲಿ ಮಿತ್ರನ ಮೇಲೆ ರಾಮನ ಸಹನಶೀಲತೆಯನ್ನು ಗಮನಿಸಬೇಕು. ಲೋಕದಲ್ಲಿ ಅನೇಕ ಮಿತ್ರರಿದ್ದಾರೆ, ಎಷ್ಟೋ ಸಂದರ್ಭದಲ್ಲಿ 'ನನ್ನನ್ನು ಅರ್ಥ ಮಾಡಿಕೋ! ನನ್ನನ್ನು ಅರ್ಥಮಾಡಿಕೋ' ಎನ್ನುತ್ತಲೇ ಒಬ್ಬರನೊಬ್ಬರು ಅರ್ಥಮಾಡಿಕೊಳ್ಳುವುದಿಲ್ಲ. ನಿಜವಾಗಿ ಅರ್ಥ ಮಾಡಿಕೊಂಡರೆ ಸಮಯೋಚಿತವಾಗಿ ಸಹನೆಯನ್ನು ತಮ್ಮದಾಗಿಸಿಕೊಳ್ಳಬೇಕು. ಮತ್ತೊಬ್ಬರ ಬಲಹೀನತೆಯನ್ನು ಕ್ಷಮಿಸುವಂತೆ ಇರಬೇಕು. ಐಶ್ವರ್ಯವಂತನಾದರೂ, ದಾರಿದ್ರ್ಯವನ್ನು ಅನುಭವಿಸುತ್ತಿದ್ದರೂ, ದುಃಖದಲ್ಲಿದ್ದರೂ, ಸುಖದಲ್ಲಿ ತೇಲಾಡುತ್ತಿದ್ದರೂ, ನಿರ್ದೋಷಿಯಾದರೂ, ದೋಷಿಯಾದರೂ ಸ್ನೇಹಿತನನ್ನು ಬಿಡಬಾರದೆಂದು ರಾಮಾಯಣವು ತಿಳಿಸುತ್ತಿದೆ.

ಸುಗ್ರೀವನು ಪಟ್ಟಾಭಿಷಿಕ್ತನಾದ ಮೇಲೆ ರಾಜ್ಯ ಭೋಗಗಳನ್ನು ಅನುಭವಿಸುತ್ತಾ ರಾಮನ ಕೆಲಸವನ್ನು ಮರೆತಾಗ, ರಾಮನು ಅವನ ಬಳಗೆ ಲಕ್ಷ್ಮಣನನ್ನು ಕಳುಹಿಸುತ್ತಾ ಸುಗ್ರೀವನನ್ನು ಕಠಿಣವಾಗಿ ಮಾತನಾಡಿ ಅವನ ಮನಸ್ಸನ್ನು ನೋಯಿಸಬೇಡ ಎಂದು ಹೇಳಿದ. ಇದು ರಾಮನು ಸ್ನೇಹಕ್ಕೆ ನೀಡಿದ ಮರ್ಯಾದೆ! ಯಾರೊಂದಿಗಾದರೂ ಸ್ನೇಹವನ್ನು ಬೆಳೆಸುವುದು ಸುಲಭವೇ! ಆದರೆ ಕೊನೆಯವರೆಗೂ ಅದನ್ನು ಉಳಿಸಿಕೊಳ್ಳುವುದು ಕಷ್ಟವಾದ ಕೆಲಸ! ಮನಸ್ಸು ಚಂಚಲವಾದರೆ ಚಿಕ್ಕ ಪುಟ್ಟ ಕಾರಣಗಳಿಗೂ ಸ್ನೇಹವು ಒಡೆಯುತ್ತದೆ. ಆದ್ದರಿಂದ ಮೈತ್ರೀ ಬಂಧವು ಬಹಳ ಪವಿತ್ರವಾದುದು ಹಾಗೆ ಅಪರೂಪವಾಗಿ ಭದ್ರಪಡಿಸಿ ಕೊಳ್ಳಬೇಕಾದ ಸಂಪತ್ತು !



# ಶ್ರಾವಣದ ಶೋಭೆ ವರಮಹಾಲಕ್ಷ್ಮಿ ವ್ರತದ ಮಹಿಮೆ ಹಿನ್ನೆಲೆ ಮತ್ತು ವೈಶಿಷ್ಟ್ಯ

– ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621

### ಮಂಗಳಕರ ಶ್ರಾವಣ ಮತ್ತು ಮಹಾಲಕ್ಷ್ಮಿ ಆರಾಧನೆ

ಭಾರತೀಯ ಸಂಸ್ಕೃತಿಯಲ್ಲಿ ಶ್ರಾವಣ ಮಾಸವು ಅತ್ಯಂತ ಪವಿತ್ರ ಮತ್ತು ಪುಣ್ಯಮಯವಾದ ಮಾಸವೆಂದು ಪರಿಗಣಿಸಲಾಗಿದೆ. ಮಳೆಗಾಲದ ಹಸಿರು ಸೊಬಗು ಭಕ್ತಿ ವಾತಾವರಣ, ಹಬ್ಬಗಳ ಸಂಭ್ರಮ ಮತ್ತು ದೇವತಾ ಆರಾಧನೆಯ ವೈಭವದಿಂದ ಶ್ರಾವಣಮಾಸವು ವಿಶೇಷ ಮಹತ್ವ ಪಡೆದಿದೆ. ಈ ಮಾಸದಲ್ಲಿ ಆಚರಿಸಲ್ಪಡುವ ಅನೇಕ ವ್ರತ -ಉತ್ಸವಗಳಲ್ಲಿ ವರಲಕ್ಷ್ಮಿ ವ್ರತವು ಅತ್ಯಂತ ಜನಪ್ರಿಯ ಮತ್ತು ಶ್ರದ್ಧಾ ಭಕ್ತಿಯಿಂದ ಆಚರಿಸಲ್ಪಡುವ ಹಬ್ಬವಾಗಿದೆ.

ವರಗಳನ್ನು ನೀಡುವ ಮಹಾಲಕ್ಷ್ಮಿ ಎಂಬ ಅರ್ಥವನ್ನು ಹೊಂದಿರುವ ಈ ವ್ರತವು ಸೌಭಾಗ್ಯ ಐಶ್ವರ್ಯ, ಆರೋಗ್ಯ, ಸಂತಾನ, ಸುಖ-ಶಾಂತಿ ಹಾಗೂ ಸಮೃದ್ಧಿಗಾಗಿ ಆಚರಿಸಲಾಗುತ್ತದೆ. ವಿಶೇಷವಾಗಿ ಮಹಿಳೆಯರು ಕುಟುಂಬದ ಒಳಿತಿಗಾಗಿ ಭಕ್ತಿಯಿಂದ ಈ ವ್ರತವನ್ನು ಆಚರಿಸುತ್ತಾರೆ.

### ವರಲಕ್ಷ್ಮೀ ವ್ರತದ ಪೌರಾಣಿಕ ಹಿನ್ನೆಲೆ

ಪುರಾಣಗಳಲ್ಲಿ ವಿವರಿಸಿರುವ ಕಥೆಯ ಪ್ರಕಾರ ಮಗಧ ದೇಶದ ಕುಂಡಿನಪುರ ಎಂಬ ನಗರದಲ್ಲಿ ಚಾರುಮತಿ ಎಂಬ ಸತ್ಪವೃತ್ತಿಯ ಮಹಿಳೆ ವಾಸಿಸುತ್ತಿದ್ದಳು. ಅವಳು ತನ್ನ ಪತಿ ಮತ್ತು ಕುಟುಂಬದವರಿಗೆ ಪ್ರೀತಿ, ಗೌರವ ಮತ್ತು ಭಕ್ತಿಯಿಂದ ಸೇವೆ ಸಲ್ಲಿಸುತ್ತಿದ್ದಳು.ಒಂದು ರಾತ್ರಿ ಅವಳ ಕನಸಿನಲ್ಲಿ ಮಹಾಲಕ್ಷ್ಮೀದೇವಿಯ ಪ್ರತ್ಯಕ್ಷವಾಗಿ ಶ್ರಾವಣ ಮಾಸದ ಶುಕ್ರವಾರದಂದು ತನ್ನ ವ್ರತವನ್ನು ಆಚರಿಸುವಂತೆ ತಿಳಿಸಿದಳು. ದೇವಿಯ ಆದೇಶದಂತೆ ಚಾರುಮತಿ ವ್ರತವನ್ನು ಆಚರಿಸಿದಾಗ ಆಕೆಯ ಜೀವನದಲ್ಲಿ ಅಪಾರ ಐಶ್ವರ್ಯ, ಸುಖ ಮತ್ತು ಸಮೃದ್ಧಿ ದೊರೆಯಿತು. ಈ ವಿಷಯ ತಿಳಿದ ಇತರ ಮಹಿಳೆಯರೂ ವ್ರತವನ್ನು ಆಚರಿಸಿ ದೇವಿಯ ಕೃಪೆಗೆ ಪಾತ್ರರಾದರು. ಅಂದಿನಿಂದ ಈ ವ್ರತವು ಜನಪ್ರಿಯವಾಯಿತು ಎಂದು ಸ್ಕಂದ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಹೀಗಾಗಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ತಾಯಿಯನ್ನು ವರಮಹಾಲಕ್ಷ್ಮಿ ಎಂದು ಕರೆಯಲಾಗುತ್ತದೆ.

### ಅಷ್ಟಲಕ್ಷ್ಮಿಯ ಆರಾಧನೆ

ವರಮಹಾಲಕ್ಷ್ಮಿ ವ್ರತವು ಕೇವಲ ಧನಸಂಪತ್ತಿಗಾಗಿ ಮಾತ್ರವಲ್ಲ. ಮಹಾಲಕ್ಷ್ಮಿಯ ಎಂಟು ರೂಪಗಳಾದ ಅಷ್ಟಲಕ್ಷ್ಮಿಗಳ ಆರಾಧನೆಯೂ ಇದರಲ್ಲಿ ಅಡಕವಾಗಿದೆ.


*ಆದಿಲಕ್ಷ್ಮಿ - ಆಧ್ಯಾತ್ಮಿಕ ಸಮೃದ್ಧಿ*
*ಧನಲಕ್ಷ್ಮಿ - ಧನ ಮತ್ತು ಐಶ್ವರ್ಯ*
*ಧಾನ್ಯಲಕ್ಷ್ಮಿ - ಅನ್ನ ಮತ್ತು ಆಹಾರ ಸಮೃದ್ಧಿ*
*ಗಜಲಕ್ಷ್ಮಿ - ರಾಜವೈಭವ ಮತ್ತು ಗೌರವ*
*ಸಂತಾನಲಕ್ಷ್ಮಿ - ಉತ್ತಮ ಸಂತಾನ*
*ವಿಜಯಲಕ್ಷ್ಮಿ - ಜಯ ಮತ್ತು ಯಶಸ್ಸು*
*ವಿದ್ಯಾಲಕ್ಷ್ಮಿ - ಜ್ಞಾನ ಮತ್ತು ಶಿಕ್ಷಣ*
*ಧೈರ್ಯಲಕ್ಷ್ಮಿ - ಶಕ್ತಿ ಮತ್ತು ಧೈರ್ಯ*

ಈ ಎಂಟು ರೂಪಗಳ ಅನುಗ್ರಹವೇ ಜೀವನದ ಸಂಪೂರ್ಣ ಸಮೃದ್ಧಿಗೆ ಕಾರಣವಾಗುತ್ತದೆ ಎಂಬುದು ಭಾರತೀಯ ನಂಬಿಕೆಯಾಗಿದೆ.

### ವ್ರತ ಆಚರಣೆ

ವರಮಹಾಲಕ್ಷ್ಮಿ ವ್ರತವನ್ನು ಸಾಮಾನ್ಯವಾಗಿ ಶ್ರಾವಣ ಮಾಸದ ಹುಣ್ಣಿಮೆಗೆ ಮುಂಚಿನ ಶುಕ್ರವಾರ ಆಚರಿಸಲಾಗುತ್ತದೆ.

ಅಂದು ಬೆಳಿಗ್ಗೆ ಮನೆ ಸ್ವಚ್ಛಗೊಳಿಸಿ ರಂಗೋಲಿ ಹಾಕಲಾಗುತ್ತದೆ. ಕಲಶವನ್ನು ಸ್ಥಾಪಿಸಿ ಅದರ ಮೇಲೆ ತೆಂಗಿನಕಾಯಿ ಮತ್ತು ಮಾವಿನ



ಎಲೆಗಳನ್ನು ಇಟ್ಟು ಲಕ್ಷ್ಮೀ ಸ್ವರೂಪವಾಗಿ ಪೂಜಿಸಲಾಗುತ್ತದೆ. ವ್ರತದ ಸಂದರ್ಭದಲ್ಲಿ ಮಹಿಳೆಯರು ಒಂಬತ್ತು ಗಂಟುಗಳ ದಾರವನ್ನು ಕೈಗೆ ಕಟ್ಟಿಕೊಳ್ಳುತ್ತಾರೆ. ಇದು ನವಶಕ್ತಿಗಳ ಸಂಕೇತವೆಂದು ಪರಿಗಣಿಸಲಾಗಿದೆ.

### ಲಕ್ಷ್ಮೀ ಉಪಾಸನೆಯ ತಾತ್ವಿಕ ಅರ್ಥ

ಭಾರತೀಯ ಸಂಸ್ಕೃತಿಯಲ್ಲಿ ಲಕ್ಷ್ಮಿಯನ್ನು ಕೇವಲ ಹಣ ದೇವತೆಯಾಗಿ ಕಾಣುವುದಿಲ್ಲ. ಅವಳು ಶುಭ, ಸೌಂದರ್ಯ, ಶುದ್ಧತೆ, ಧರ್ಮ, ದಯೆ, ಜ್ಞಾನ, ಸಮೃದ್ಧಿ ಮತ್ತು ಮಂಗಳ ಸಂಕೇತ. ಸಮುದ್ರಮಂಥನದ ಸಂದರ್ಭದಲ್ಲಿ ಲಕ್ಷ್ಮೀ ದೇವಿಯು ಕ್ಷೀರಸಾಗರದಿಂದ ಉದ್ಭವಿಸಿದಳು ಎಂದು ಪುರಾಣಗಳು ಹೇಳುತ್ತವೆ. ಅವಳು ಶ್ರೀಮಹಾವಿಷ್ಣುವಿನ ವಕ್ಷ ಸ್ಥಳದಲ್ಲಿ ನೆಲೆಸಿರುವುದರಿಂದ ಧರ್ಮವಿರುವಲ್ಲಿ ಲಕ್ಷ್ಮಿಯು ನೆಲೆಸುತ್ತಾಳೆ ಎಂಬ ಸಂದೇಶವನ್ನು ಇದು ನೀಡುತ್ತದೆ.

ಧರ್ಮವಿಲ್ಲದ ಸಂಪತ್ತು ನಾಶಕ್ಕೆ ಕಾರಣವಾಗಬಹುದು. ಆದ್ದರಿಂದ ಲಕ್ಷ್ಮೀ ಉಪಾಸನೆಯು ಸಂಪತ್ತಿನ ಜೊತೆಗೆ ಸದ್ಗುಣಗಳ ಆರಾಧನೆಯೂ ಆಗಿದೆ.

### ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ

ವರಮಹಾಲಕ್ಷ್ಮಿ ವ್ರತವು ಕೇವಲ ಧಾರ್ಮಿಕ ಆಚರಣೆಯಲ್ಲಿ ಇದು ಕುಟುಂಬ ಮತ್ತು ಸಮಾಜವನ್ನು ಒಗ್ಗೂಡಿಸುವ ಸಾಂಸ್ಕೃತಿಕ ಉತ್ಸವವೂ ಹೌದು.

ಮಹಿಳೆಯರು ಪರಸ್ಪರ ಮನೆಗಳಿಗೆ ತೆರಳಿ ಅರಿಶಿನ, ಕುಂಕುಮ ವಿನಿಮಯ ಮಾಡಿಕೊಳ್ಳುತ್ತಾರೆ. ಹಿರಿಯರ ಆಶೀರ್ವಾದ ಪಡೆಯುತ್ತಾರೆ. ಕುಟುಂಬದ ಸದಸ್ಯರೆಲ್ಲರೂ ಪೂಜೆಯಲ್ಲಿ ಪಾಲ್ಗೊಂಡು ಭಕ್ತಿ ಮತ್ತು ಸಂಸ್ಕಾರದ ವಾತಾವರಣವನ್ನು ನಿರ್ಮಿಸುತ್ತಾರೆ.

ಇಂದು ಸಂಪತ್ತಿನ ಹಿಂದೆ ಓಡುವ ಮಾನವನು ಶಾಂತಿ, ಸಂತೃಪ್ತಿ ಮತ್ತು ಕುಟುಂಬದ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದು ಕಂಡು ಬರುತ್ತದೆ. ವರಮಹಾಲಕ್ಷ್ಮಿ ವ್ರತವು ನಿಜವಾದ ಐಶ್ವರ್ಯ ವೆಂದರೆ ಕೇವಲ ಹಣವಲ್ಲ. ಆರೋಗ್ಯ, ಜ್ಞಾನ, ಸಂತಾನ, ಧರ್ಮ, ಪ್ರೀತಿ, ನೆಮ್ಮದಿ ಮತ್ತು ಸದುಪಯೋಗದ ಜೀವನವೇ ನಿಜವಾದ ಲಕ್ಷ್ಮಿ ಎಂಬುದನ್ನು ನೆನಪಿಸುತ್ತದೆ.

ವರಮಹಾಲಕ್ಷ್ಮಿ ವ್ರತವು ಭಾರತೀಯ ಸ್ತ್ರೀ ಶಕ್ತಿಯ ಭಕ್ತಿ, ಶ್ರದ್ಧೆ ಮತ್ತು ಕುಟುಂಬಕೇಂದ್ರಿತ ಜೀವನ ಮೌಲ್ಯಗಳ ಪ್ರತೀಕವಾಗಿದೆ. ಶ್ರಾವಣದ ಪವಿತ್ರ ವಾತಾವರಣದಲ್ಲಿ ಮಹಾಲಕ್ಷ್ಮಿಯ ಆರಾಧನೆಯ ಮೂಲಕ ಭಕ್ತರು ಐಶ್ವರ್ಯಕ್ಕಿಂತಲೂ ಹೆಚ್ಚಿನದಾದ ಆತ್ಮಶಾಂತಿ ಸಂತೃಪ್ತಿ ಮತ್ತು ದೈವಿಕ ಅನುಗ್ರಹವನ್ನು ಕೋರುತ್ತಾರೆ.

**"ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ"** ಎಂಬ ಶಾಸ್ತ್ರವಾಕ್ಯದಂತೆ ಮಹಿಳೆಯರ ಭಕ್ತಿ ಶುದ್ಧತೆ ಮತ್ತು ಸೌಭಾಗ್ಯದ ಆರಾಧನೆಯಾಗಿ ವರಮಹಾಲಕ್ಷ್ಮಿ ವ್ರತವು ಭಾರತೀಯ ಸಂಸ್ಕೃತಿಯಲ್ಲಿ ಚಿರಂತನ ಸ್ಥಾನವನ್ನು ಪಡೆದಿದೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ,ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**





# ಜ್ಯೋತಿರ್ಭಿಮೇಶ್ವರ ಅಮಾವಾಸ್ಯೆ

ಶ್ರೀಮತಿ ಗಿರಿಜಾ ಎಸ್. ದೇಶಪಾಂಡೆ
97393 88300





ಆಷಾಢಮಾಸದ ಕೊನೆಯ ದಿನ ಎಂದರೆ ಅಮಾವಾಸ್ಯೆಯಂದು ಜ್ಯೋತಿರ್ಭಿಮೇಶ್ವರ ವ್ರತವನ್ನು ಆಚರಿಸುತ್ತಾರೆ. ಮಡದಿಯು ತನ್ನ ಪತಿಯ ಆಯಸ್ಸು ವೃದ್ಧಿಸಲೆಂದು ಈ ವ್ರತ ಆಚರಿಸಿದರೆ ವಿವಾಹಿತ ಮಹಿಳೆಯರು ತಮಗೆ ಒಳ್ಳೆಯ ಪತಿ ದೊರೆಯಲೆಂದು ಕೈಗೆ ಕಂಕಣ ತೊಟ್ಟು ಈ ವ್ರತ ಆಚರಿಸುತ್ತಾರೆ. ಇದೊಂದು ಮಹಿಳೆಯರ ಪಾಲಿಗೆ ಪವಿತ್ರ ಹಬ್ಬ.

**ಪೌರಾಣಿಕ ಹಿನ್ನೆಲೆ:**

ಪುರಾಣಗಳ ಪ್ರಕಾರ ಮರಣ ಹೊಂದಿದ ಪತಿಯ ಪ್ರಾಣ ಉಳಿಸಿಕೊಳ್ಳಲು ಸತಿಯೊಬ್ಬಳು ಪಾರ್ವತಿ ಪರಶಿವರನ್ನು ಪ್ರಾರ್ಥಿಸುತ್ತಾಳೆ. ಆಕೆಯ ಭಕ್ತಿಗೆ ಮೆಚ್ಚಿ ಶಿವನು ಆಕೆಯ ಪತಿಯನ್ನು ಬದುಕಿಸಿ ಸತಿಪತಿಯರಿಗೆ ದೀರ್ಘಾಯುಷ್ಯವನ್ನು ನೀಡಿ ಆಶೀರ್ವಾದ ನೀಡುತ್ತಾನೆ. ಅವಳು ಮಾಡಿದ ಪೂಜೆ ಆಷಾಢ ಬಹುಳ (ಕೃಷ್ಣಪಕ್ಷ) ಅಮಾವಾಸ್ಯೆಯಂದು ಕಠಿಣ ವ್ರತ ಆಚರಿಸಿದ್ದಕ್ಕಾಗಿ ಹಿಂದೂ ಸ್ತ್ರೀಯರು ಪಾಲಿಗೆ ಪತಿಯ ಆಯುಷ್ಯ ವೃದ್ಧಿ ವ್ರತ ದಿನಾಚರಣೆಯೂ ಆಗಿದೆ.

ಶಿವ ಪಾರ್ವತಿಯವರು ವಿವಾಹವಾದದ್ದು ಇಂದೇ ಎನ್ನುವ ಪ್ರತೀತಿಯೂ ಇದೆ. ಸಂತಾನ ಮತ್ತು ಶಕ್ತಿಯ ಪ್ರತೀಕ ವಾಗಿ ಪಾರ್ವತಿಯನ್ನು ಪೂಜಿಸಿ ಹೆಂಗಳೆಯರು ತಮಗೂ ಶಕ್ತಿ ನೀಡೆಂದು ಬೇಡುತ್ತಾರೆ.

**ಸಂಜೀವಿನಿ ವ್ರತ:**

ಪತಿಗೆ ದೀರ್ಘಾಯುಷ್ಯ ನೀಡಿದ ಕಾರಣ ಈ ವ್ರತಕ್ಕೆ ಸಂಜೀವಿನಿ ವ್ರತವೆಂದು ಕರೆಯುತ್ತಾರೆ. ಒಮ್ಮೆ ವ್ರತ ಆಚರಿಸಿದರೆ 5 ವರ್ಷ 9 ವರ್ಷ, ಅಥವಾ 16 ವರ್ಷ ವ್ರತಾಚರಣೆ ಮಾಡಿ ವ್ರತ ಮುಗಿದ ನಂತರ ಜನರಿಗೆ ಅನ್ನದಾನ ಮಾಡುವ ಕ್ರಮ ನಮ್ಮಲ್ಲಿದೆ.

**ಮರಳಿ ಪತಿಯ ಮನೆಗೆ:**

ಆಷಾಢದಲ್ಲಿ ತವರು ಮನೆಗೆ ಹೋದ ಹೊಸದಾಗಿ ಮದುವೆಯಾದ ಪತ್ನಿ ಪತಿಯ ಪೂಜೆಗಾಗಿ ತನ್ನ ಅತ್ತೆಯ ಮನೆಗೆ ಹಿಂತಿರುಗಿ ಬರುವಳು. ಮುಂದೆ ಶ್ರಾವಣದ ಹಬ್ಬಗಳು ಪ್ರಾರಂಭವಾಗುವವು.

**ಭೀಮೇಶ್ವರನ ಪೂಜೆ:**

ಮೊದಲು ಗಣಪತಿಯ ಪೂಜೆ ಮಾಡಿ ಭೀಮೇಶ್ವರ ಎಂದರೆ ಶಿವನಿಗೆ ಪೂಜೆ ಮಾಡಿ ದೀಪಗಳಿಗೆ ಪೂಜಿಸಬೇಕು. ಗಣೇಶ ಅಷ್ಟೋತ್ತರ, ಶಿವನ, ಅಷ್ಟೋತ್ತರ ಪಠಿಸಬೇಕು. ಗೋದಿಹಿಟ್ಟಿನಿಂದ ಭಕ್ಷ್ಯ ಮಾಡಿ ನೈವೇದ್ಯ ಮಾಡಬೇಕು. ಅಂದಿನ ದಿನ ಹೊಸಿಲನ್ನು ಪೂಜಿಸಿ ಕಡಬಿನಲ್ಲಿ ಕಾಸನ್ನು ಇಟ್ಟು ಮನೆಯ ಮಗನ ಹತ್ತಿರ ಅದನ್ನು ಒಡೆಸಿ ಮನೆಯ ಹೆಣ್ಣು ಮಕ್ಕಳಿಗೆ ನೀಡಬೇಕು. ನಂತರ ಅಣ್ಣನ ಆಶೀರ್ವಾದ ಬೇಡುವ ಸೋದರಿ ಅಣ್ಣನಿಗೆ ಫಲ ತಾಂಬೂಲ ನೀಡುತ್ತಾರೆ. ಈ ವ್ರತಾಚರಣೆ ಮಾಡಿ ಬರುವ ಶ್ರಾವಣ ಮಾಸವನ್ನು ಆದರಿಸಿ ಸಂಭ್ರಮಿಸೋಣ.



# ಸರ್ವಜ್ಞ ಕಲ್ಪರು ಶ್ರೀ ಜಯತೀರ್ಥರು

– ಶ್ರೀಧರರಾಯಸಂ

ಆಷ್ಟಮದಗಳಿಗೆ ಕಾರಣಗಳಾದ ಅಭಿಜಾತ್ಯ, ಯೌವ್ವನ, ವಿದ್ಯೇ, ಐಶ್ವರ್ಯ ಸಂತಾನ, ಶಿಷ್ಯ ಸಂಪತ್ತು, ಪುರಜನ, ಪರಿ ಜನದ ಪುರಸ್ಕಾರ ಇತ್ಯಾದಿ ಸುಖಗಳಿಂದ ಮೆರೆಯುವ ಮಾನವರು ಶ್ರೀಮಂತರೆಂದು ರೂಢಿಯಲ್ಲಿದೆ.

ಇಂತಹ ಶ್ರೀಮಂತರು ಕಾಲಚಕ್ರದಲ್ಲಿ ಎಷ್ಟೋ ಮಂದಿ ಬಂದರು ಹೋದರು ಶಿವಾಜಿ ಮಹಾರಾಜರ ತರುವಾಯ ಮಹಾರಾಷ್ಟ್ರವನ್ನು ಆಳಿದ ಬ್ರಾಹ್ಮಣ ಪಂಡಿತರು ಬಾಲಾಜಿ ವಿಶ್ವನಾಥ ಬಾಜಿರಾವ್ ಇತ್ಯಾದಿ ಪುಣೆ ನಗರದಲ್ಲಿ ಪೇಷ್ವೆಗಳು ಶ್ರೀಮಂತರೆಂದು ಕರೆಯುತ್ತಿದ್ದರು. ಅವರಲ್ಲಿ ಬ್ರಾಹ್ಮಣ, ಕ್ಷತ್ರಿಯ ಧರ್ಮಗಳೆರಡು ನೆಲೆಗೊಂಡಿದ್ದವು. ಈ ಶ್ರೀಮಂತಗಿರಿ ಬಹಳ ಕಾಲದಲ್ಲಿ ಸಹ ಉಳಿಯಲಿಲ್ಲ! ಮ್ಲೇಂಛರ, ಪಾಶ್ಚಾತ್ಯರ ಸಂಗಡ ಯುದ್ಧಗಳಲ್ಲಿ ಪೇಪ್ವೆಗಳ ಆಡಳಿತ ನಾಶವಾಯಿತು. ಅದರ ಹಿಂದೆ ಶ್ರೀಮಂತಗಿರಿ ಮರೆಯಾಯಿತು.

ಆದಿತ್ಯ ಪುರಾಣ ಶ್ರೀವೆಂಕಟೇಶ ಮಹಾತ್ಮೆಯಲ್ಲಿ ಶ್ರೀಮಾನ್ ಎಂಬ ಶಬ್ದಕ್ಕೆ ಟಿಪ್ಪಣಿಕಾರರು ಜ್ಞಾನ, ಭಕ್ತಿ, ವೈರಾಗ್ಯಗಳಿಂದ ತುಂಬಿ ತುಳುಕುತ್ತಿರುವಂತೆ ಸಜ್ಜನರೇ ಶ್ರೀಮಂತರೆಂದು ಅರ್ಥೈಸಿದ್ದಾರೆ. ಇದೇ ಅರ್ಥವನ್ನು ಸೂಚಿಸುವ ಶ್ರೀಮದ್ವಿಜಯಧ್ವಜತೀರ್ಥರು ತಮ್ಮ ಭಾಗವತ ಟಿಪ್ಪಣಾಖ್ಯ ಪದರತ್ನಾವಳಿ ಮೂಲಕ ತಿಳಿಸಿದ್ದಾರೆ. ಇಂತಹ ಶ್ರೀಮಂತಗಿರಿಯೇ ಶಾಶ್ವತವಾದದ್ದು. ಇದಕ್ಕೆ ಚ್ಯುತಿಯಿಲ್ಲ. ಇಂತಹ ಶ್ರೀಮಂತರು ಯಾರು? ಎಂದು ಪ್ರಶ್ನಿಸಿದರೇ ಇದಕ್ಕೆ ಉತ್ತರ ರೂಪವಾಗಿ ಮಳಖೇಡಕ್ಷೇತ್ರದಲ್ಲಿ ಬೃಂದಾವನಸ್ಥರಾದ ಯತಿಗಳಾದ ಸರ್ವಜ್ಞಕಲ್ಪರು "ಟೀಕಾಚಾರ್ಯರು. ಶ್ರೀಜಯತೀರ್ಥರೆಂಬ ಮೂರು ಹೆಸರುಗಳಿಂದ ಮೂರುಲೋಕಗಳಲ್ಲಿ ಪ್ರಖ್ಯಾತರಾದವರೇ ಎಂದು ಮೂರು ಬಾರಿ ಸತ್ಯವಂತ ಶಪಥದಿಂದ ಭುಜಗಳೆತ್ತಿ ಹೇಳಿದರೇ ಅತಿಶಯೋಕ್ತಿಯಲ್ಲ ಶ್ರೀ ಜಯತೀರ್ಥರಲ್ಲಿ ಪ್ರಚಂಡ ವೈರಾಗ್ಯ, ಅವಿಚ್ಛಿನ್ನ ಭಕ್ತಿ, ವಿನಯದಿಂದ ಕೂಡಿದ ಉನ್ನತ ಮಟ್ಟದ ಯಥಾರ್ಥ ಜ್ಞಾನ ಈ ಮೂರೂ ಕೂಡಿದ್ದವು.

ಆಗರ್ಭ ಶ್ರೀಮಂತನಾಗಿ ಜನಿಸಿ, ಏಕಪುತ್ರನೆಂದು ರಾಜ ಮರ್ಯಾದೆ ಪಡೆದ ಜನಕರಿಂದ ಪೋಷಿಸಲ್ಪಟ್ಟು, ವರ್ಣೋಪ್ರೀತ ದೇಹದ ಕಾಂತಿ, ಬ್ರಹ್ಮ ತೇಜಸ್ಸು, ಕ್ಷತ್ರಿಯ ವೀರ್ಯ, ದೇಹ ಪಟ್ಟುತ್ವ ಮೇಧಾವಂತಿಕೆಯಿಂದ ಆಜಾನು ಬಾಹು ತಾರುಣ್ಯ ಪುರ ಜನರ ಪರಿಜನರಿಂದ ಇಂತಹ ಮೊದಲಾದವುಗಳ ಗುಣಗಳಿಂದ ಗೌರವಿಸಲ್ಪಟ್ಟ ಧೋಂಡೋ ರಘುನಾಥರು ವಿದ್ಯಾ, ವಿನಯ, ಪರಿವಾರದ ಸಂಗಡ ವೈಶಾಖಿಮಾಸದ ಮಟ ಮಟ ಮಧ್ಯಾಹ್ನದ ಬಿಸಿಲಿಗೆ ತಪ್ತರಾಗಿ ಭೀಮಾ ನದಿಯಲ್ಲಿ ಬಾಯಾರಿಕೆಯ ಆತುರದಿಂದ ಸವಾರಿಯನ್ನು ಮಾಡುವ ನೀರಡಿಸಿದ ಸಾಂಗ್ಲಿ ಜಾತಿಯ ದೊಡ್ಡ ಕುದುರೆಯನ್ನು ಏರಿ ಪಶುಗಳು ನೀರು ಕುಡಿದಂತೆ ಕುದುರೆ ಮೇಲಿನಿಂದಲೇ ನೀರಿಗೆ ಬಾಯಿಹಚ್ಚಿ ತಮ್ಮ ದಾಹ ಶಾಂತಿ ಮಾಡಿಕೊಂಡನು. ಆಚೆ ದಂಡಗೆ ಸ್ವಪ್ನ ಸೂಚಿತ ಪುರುಷರ ನಿರೀಕ್ಷಣೆಯಲ್ಲಿದ್ದ ಶ್ರೀ ಅಕ್ಷೋಭ್ಯತೀರ್ಥರು "ಕಿಂ ಪಶು ಪೂರ್ವ ದೇಹ" ಎಂದರು. ಇದು ಕುದುರೆ ಸವಾರರಾದ ರಘುನಾಥರಿಗೆ ಕೇಳಿಸಿತು. ಇದು ಶ್ರೀವ್ಯಾಸರಾಜರು ಕನಕನಿಗೆ ಕೋಣನ ಮಂತ್ರವೆಂಬಂತೆ ಇದೇ ಗುರುಗಳ ಮಂತ್ರೋಪದೇಶವಾಗಿ ಪರಿಣಮಿಸಿತು. ರಾಹುತನ ಜ್ಞಾನ ಸಮುದ್ರದಲ್ಲಿ ಪೂರ್ವ ಜನ್ಮಗಳ ಸಂಸ್ಕರಣಗಳು ವಾನರರಾಟ್‌ವಾಲಿಯಾಗಿದ್ದು ಆಗ ಶ್ರೀರಾಮಚಂದ್ರನ ಸೇವೆ ದೊರೆಯಲಿಲ್ಲ! ನರರಾಟ್ ಪಾರ್ಥನಾಗಿ ಜನಿಸಿ ಅಗ್ರಜನಾದ ಭೀಮಸೇನನನ್ನು ಗುರುವರ್ಯನೆಂದು ಭಾವಿಸಲಿಲ್ಲ ಮತ್ತು ಗೋರಾಟ್‌ನಾಗಿ ಶ್ರೀಹರಿ ಗುರುಗಳ ಸೇವೆ ದೊರಕಿದರೂ ದುರ್ಲಭವಾದ ಮನುಷ್ಯ ಜನ್ಮಸಿಗಲಿಲ್ಲ. ಇಂದು ಶ್ರೀಹರಿ ಗುರುಗಳ ಸೇವೆ ಮಾಡಿ ಧನ್ಯನಾಗುವ ವೈಷ್ಣವ ಪುರುಷ ಜನ್ಮ ದೊರೆತಿದೆ. ಸಾಧನ



ಶರೀರವಿದು ಮತ್ತು ದಯೆಯಿಂದ ಕೊಟ್ಟಿದ್ದು. ಇದೇ ಮೊದಲಾದ ಪೂರ್ವ ಜನ್ಮದ ವಿಚಾರಗಳು ತರಂಗಗಳ ಮೇಲೆ ತರಂಗಗಳು ಬಂದಂತೆ ಉಕ್ಕೇರಿ ರಘುನಾಥನಿಗೆ ಬಂದವು. ಆಚೆದಂಡಗೆ ಬಂದು ಶ್ರೀಗಳವರನ್ನು ಕಂಡು ಧೋಂಡೋ ರಘುನಾಥನು ಸಾಷ್ಟಾಂಗ ನಮಸ್ಕರಿಸಿದ. ಆತ ಕಂಡಿದ್ದು ಗುರುಗಳ ಪಂಚ ಭೌತಿಕ ದೇಹವಲ್ಲ ಮುಂಗಾರು ಮಿಂಚಿನಂತೆ ಹೊಳೆಯುವ ತೇಜೋರಾಶಿ ಇವರು ರುದ್ರಾಂಶರು. ಇಂದ್ರಾಂಶರಾದ ನರನಿಗೆ ನಿಯತ ಗುರುಗಳಾಗಿದ್ದರು. ಶ್ರೀಮೂಲ ಸೀತಾರಾಮ ದೇವತಾರ್ಚನೆ ಮಾಡಿದ ಅಮೃತ ಹಸ್ತದಿಂದ ತೀರ್ಥಪ್ರಾಶನವಾಯಿತು. ನಿರ್ಮಾಲ್ಯ ತುಳಸಿಪುಷ್ಪಗಳಿಂದ ಅನುಗ್ರಹವನ್ನು ಪಡೆದನು. ಶ್ರೀಗಳವರ ಸಮ್ಮುಖದಲ್ಲಿ ದೇವರಿಗೆ ನಿವೇದಿಸಲ್ಪಟ್ಟ ಚಿಕ್ಕದಾದ ನೈವೇದ್ಯದ ಭೋಜನವಾಯಿತು. ಈ ವಾತಾವರಣದಿಂದ ಧೋಂಡೋ ರಘುನಾಥನ ಮನಸ್ಸು ಪರಿಪೂರ್ಣವಾಯಿತು ಪರಿಪಕ್ವವಾಯಿತು. ಭೋಜನದ ನಂತರ ಶ್ರೀಗಳವರು ಯುವರಾಜರೇ ನಿಮ್ಮ ಪಿತ್ರಾರ್ಜಿತ ಸಾದಿ ಭೂಪಾಲನ ಯುವ ರಾಜ್ಯಕ್ಕೆ ಪ್ರತಿಯಾಗಿ ನಮ್ಮ ವೇದಾಂತ ನಿಜರಾಜ್ಯ ಪರಿಪಾಲನಾತ್ಮಕ ಯುವರಾಜ ಪದವಿಯನ್ನು ನಮ್ಮ ಉಪಾಸನಾ ಮೂರ್ತಿ ಶ್ರೀಮೂಲರಾಮ ಚಂದ್ರನು ಬಯಸಿದ್ದಾನೆ. ಇದು ಸ್ವಪ್ನದ ಶ್ರೀಹರಿಯ ಆಜ್ಞೆ. ಇದನ್ನು ಮಾತ್ರ ಉಲ್ಲಂಘಿಸಲು ಬ್ರಹ್ಮಾದಿಗಳಿಗೆ ಅಸಾಧ್ಯ. ಇದಕ್ಕೆ ನೀನು ಅನುಮತಿ ಕೊಡಬೇಕಪ್ಪಾ ಎಂದು ಗುರುಗಳು ಕೇಳಿದರು. ಈ ಮಾತು ಕೇಳಿದ ಕೂಡಲೇ ಧೋಂಡೋ ರಘುನಾಥನು ಆಶ್ಚರ್ಯಚಕಿತನಾಗಿ ಸ್ವಾಮಿನ್ ಕೇವಲ ವಿಷಯ ಲಂಪಟನಾದ ಸಂಸಾರ ಸುಖವನ್ನು ಈ ತಾರುಣ್ಯದಲ್ಲಿ ಆತ್ಯಾಪೇಕ್ಷೆಯಿಂದ ಬಯಸಿ ದಿನಗಳನ್ನು ಎಣಿಸುವ ಮುಗ್ಧನಾದ ಯುವಕನೆಲ್ಲಿ? ಬ್ರಹ್ಮ ಕರಾರ್ಚಿತ ಪ್ರತಿಮೆಗಳ ಪೂಜೆ ಮಾಡುವ ಶಮದಮಾದಿ ಸಂಪತ್ತು ಇರುವ ಪರಮಹಂಸ ಪರಿವ್ರಾಜಾಕಾಚಾರ್ಯರ ಪದವಿ ಎಲ್ಲಿ? ಇದು ಅಸಂಗತ ಮಹಾಸ್ವಾಮಿ. ವಿರಾಟ ರಾಜನ ಪುತ್ರ ಉತ್ತರಕುಮಾರನು ಉತ್ತರ ಗೋಗ್ರಹಣಕ್ಕೆ ಹೊರಟಂತೆ ಆದೀತು ಎಂದು ಬಿನ್ನವಿಸಿಕೊಂಡನು.

ತ್ರಿಕಾಲಜ್ಞರಾದ ಶ್ರೀಗಳವರು ಉತ್ತರಗೋಗ್ರಹಣ ಮಾಡಿದ ಧೀರೋದಾತ್ತರಾದ ಧನಂಜಯ ಕೀರ್ತಿಸಂಪಾದಿಸಿದಂತೆ ನಿನಗೂ ಬರುವುದು. ಸ್ವಪ್ನವಾದರೇ ತುರಿಯಾಶ್ರಮ ಅಂಗೀಕರಿಸು ಎಂದರು. ಆ ರಾತ್ರಿ ಅಲ್ಲಿಯೇ ಧೋಂಡೋ ರಘುನಾಥನ ಬಿಡಾರ ಆಯಿತು. ಸ್ವಪ್ನದಲ್ಲಿ ಶ್ರೀರಾಮಚಂದ್ರನಿಂದ ನಿನ್ನಿಂದ ಪೂಜೆಯನ್ನು ಬಯಸಿದ್ದೇನೆ ಎಂಬ ನುಡಿ ಬಂದಿತು. ಆಚಾರ್ಯಮಧ್ವರ ಅಮೃತವಾಣಿ ಜ್ಞಾಪಕಕ್ಕೆ ಬಂದಿತು. ಸ್ಮರಣೆಗೆ ಬಂದಿದ್ದು ಅನುಭವಕ್ಕೆ ಬಂದಿತು. ತಕ್ಷಣ ಉದಯ ಕಾಲದಲ್ಲಿ ಸ್ನಾನಾಹ್ನಿಕಗಳನ್ನು ಪೂರೈಸಿಕೊಂಡು ಭಯ ಭಕ್ತಿಯಿಂದ ಶ್ರೀಗಳವರ ಸಂದರ್ಶನ ಮಾಡಿದನು. ಶ್ರೀಗಳವರು ಮುಗುಳ್ನಗೆ ಸೂಸುತ್ತಾ ಶ್ರೀರಾಮಚಂದ್ರ ನಿನ್ನ ವಶನಾಗಿದ್ದಾನೆ ಎಂದು ಸಂತೋಷದಿಂದ ಅನುಗ್ರಹ ಮಾಡಿದರು.

ನಂತರ ಶಾಸ್ತ್ರೋಕ್ತವಾಗಿ ತುರಿಯಾಶ್ರಮವನ್ನು ಧೋಂಡೋ ರಘುನಾಥನು ಸ್ವೀಕರಿಸಿದನು. ಇವರ ತಂದೆ ಪರಿವಾರ ಸಮೇತವಾಗಿ ಬಂದು ತಮ್ಮ ಪುತ್ರ ಆಶ್ರಮ ಸ್ವೀಕರಿಸಿದನೆಂದು ತಿಳಿದು ಕೋಪದಿಂದ ಶ್ರೀಗಳವರನ್ನು ನಿಂದಿಸಿ ವಾಪಸ್ ಕರೆದುಕೊಂಡು ಹೋದನು. ಇದು ದುಷ್ಪರಿಣಾಮವಾಗಿ ಪಶ್ಚಾತ್ತಾಪಪಟ್ಟು ಪುನಃಪುತ್ರನನ್ನು ಶ್ರೀಗಳವರಿಗೆ ಒಪ್ಪಿಸಿ ಕ್ಷಮಾಪಣೆ ಕೇಳಿ ಬೇಡಿಕೊಂಡನು ಸನ್ಯಾಸಾಶ್ರಮ ಸ್ವೀಕರಿಸಿ, ಶ್ರೀಅಕ್ಷೋಭ್ಯತೀರ್ಥರಿಂದ ''ಜಯತೀರ್ಥ'' ನಾಮಾಂಕಿತರಾಗಿ ಮೂಲರಾಮರ ಪೂಜೆಗೆ ನಿರತರಾದರು ರಾಜದಂಡ ಹಿಡಿದು ಸಿಂಹಾಸನ ಏರುವ ಧೋಂಡೋ ರಘುನಾಥರು ಇಂದು ಸನ್ಯಾಸಾಶ್ರಮ ಸ್ವೀಕರಿಸಿ ದಂಡಕಾಷ್ಠಕ ಹಿಡಿದು ಕೂರ್ಮಾಸನದಲ್ಲಿ ಕುಳಿತು ಕೋದಂಡರಾಮನ ಪೂಜೆ ಮಾಡಬೇಕಾಯಿತು.

ಜಯತೀರ್ಥರು ಕೆಲವು ಸಮಯದ ನಂತರ ತಮ್ಮ ಗುರುಗಳ ಮಹಾಸಮಾರಾಧನೆ ಮಾಡಿ, ಅವರ ವೃಂದಾವನ ಮಳಖೇಡ ಕ್ಷೇತ್ರದಲ್ಲಿ ಪ್ರತಿಷ್ಠೆ ಮಾಡಿದರು. ಶ್ರೀಮಧ್ವರ ಭಾಷ್ಯಗಳಿಗೆ ಟೀಕೆ ಬರೆಯುವ ಅವಶ್ಯಕತೆ ಬಂದಿತು. ತತ್ವಪ್ರಕಾಶ, ತತ್ವೋದ್ಯೋತ ನ್ಯಾಯದೀಪಿಕಾ,ತತ್ವ ಸಂಖ್ಯಾನ, ತತ್ವವಿವೇಕ ವಿಷ್ಣುತತ್ವ ನಿರ್ಣಯ ಖಂಡನ ತ್ರಯಗಳ ಟೀಕಾಕೃತಿಗಳನ್ನು ರಚಿಸಿ ಭೂಸುರರಿಗೆ ವೈಷ್ಣವ ಸಿದ್ಧಾಂತದ ರಸ ದೌತಣ ನೀಡಿದ ಮಹಾನ್ ಗುರುಗಳು ಶ್ರೀಮನ್ನ್ಯಾಯ ಸುಧಾ ಅದ್ಭುತ ಟೀಕಾ ಗ್ರಂಥ ರಚಿಸಿ ಶ್ರೀಜಯತೀರ್ಥರು ಭಕ್ತರಿಗೆ ನೀಡಿದ ಮಹಾನ್ ಗುರುಸಾರ್ವಭೌಮರು. ಮಳಖೇಡದಲ್ಲಿ ಆಷಾಢ ಕೃಷ್ಣ ಪಂಚಮಿ ತಿಥಿಯಂದು ಕಾಗಿಣಿ ನದೀ ತೀರದಲ್ಲಿ ಕ್ರಿ.ಶ. 1388 ರಂದು ಬೃಂದಾವನಸ್ಥರಾದರು.ಇವರ ಶಿಷ್ಯರು ವಿದ್ಯಾದಿರಾಜ ತೀರ್ಥರು ಮತ್ತು ವ್ಯಾಸತೀರ್ಥರು, ಶ್ರೀಜಯತೀರ್ಥರ ಆರಾಧನೆ ಮಳಖೇಡ ಕ್ಷೇತ್ರದಲ್ಲಿ ಮತ್ತು ಇನ್ನಿತರ ಸ್ಥಳಗಳಲ್ಲಿ ಪ್ರತಿ ವರ್ಷ ಜರುಗುತ್ತದೆ.

# ಭ್ರಾತೃತ್ವ ಬೆಸೆಯುವ ಶ್ರಾವಣ ಹುಣ್ಣಿಮೆ

-ಶ್ರೀಮತಿ ವಾರುಣಿ ಹೊನ್ನಾಳಿ
99160 22982

ಶ್ರಾವಣ ಎಂದರೆ ಎಲ್ಲೆಲ್ಲೂ ಮಳೆಯೋ ಮಳೆ. ಮಾಸ ಪೂರ್ಣ ಹಬ್ಬವೋ ಹಬ್ಬ. ಇದು ಹಿಂದೂ ಪಂಚಾಂಗದ 5 ನೇ ತಿಂಗಳು. ಈ ಮಾಸದಲ್ಲಿ ಬರುವ ಹುಣ್ಣಿಮೆ ಅತ್ಯಂತ ಪವಿತ್ರ ಮತ್ತು ಪಾವನ ವಾದ ಕಾಲಘಟ್ಟವಾಗಿದೆ. ಪ್ರಮುಖ ವಾಗಿ ಶ್ರಾವಣ ಮಾಸ ಎಂದರೆ ಇದು ಶಿವನ ಆರಾಧನೆ, ಪಾರ್ವತೀ, ಮಂಗಳ ಗೌರೀ, ಲಕ್ಷ್ಮೀ, ವರಮಹಾ ಲಕುಮಿ ಪೂಜೆಗೆ ಹೇಳಿ ಮಾಡಿಸಿದ ತಿಂಗಳು. ಇವುಗಳ ಜೊತೆಗೆ ಹುಣ್ಣಿ ಮೆಗೂ ಪ್ರಧಾನ ಸ್ಥಾನವಿದೆ.

**ನೂಲಿನ ನಂಟೇ ಪ್ರಧಾನ :**

ಶ್ರಾವಣ ಮಾಸದ ಹುಣ್ಣಿಮೆ ಒಂದು ವಿಶೇಷ ಆಚರಣೆ ಮೂಲಕ ಗಮನಸೆಳೆಯಲಿದೆ. ಇದಕ್ಕೊಂದು ಸಾಮಾಜಿಕ ಆಯಾಮವೂ ದೊರ ಕಿದೆ. ಗೋವಾ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕರ್ನಾಟಕ ಮತ್ತು ಒಡಿಶಾ ಸೇರಿದಂತೆ ಹಲವು ರಾಜ್ಯಗಳಲ್ಲಿ ಅಂದು ಉಪಾಕರ್ಮದ (ನೂತನ ಜನಿವಾರ ಧಾರಣೆ) ಆಚರಣೆ ನಡೆಯ ಲಿದೆ.




ಜನಿವಾರ ಎಂಬುದು ಜ್ಞಾನ ಶುದ್ಧಿ, ವೇದಾಧ್ಯಯನ ಮಾಡುವ, ಕಲಿತ ವಿದ್ಯೆಯನ್ನು ಋಷಿಗಳಿಗೆ ಸಮರ್ಪಿಸುವ ಪ್ರತೀಕವಾದರೆ ರಾಖಿ ಹಬ್ಬವು ಸಹೋದರತೆ, ಭಾವ ಸಂಬಂಧ ಬೆಸೆಯುವ ದ್ಯೋತಕವಾಗಿದೆ. ರಕ್ಷೆ ಕಟ್ಟುವುದು, ಯಜ್ಞೋಪವೀತ - ಧರಿಸು ವುದು. ಎರಡೂ ನೂಲಿನ ನಂಟೇ ಆಗಿದೆ. ಈ ಮೂಲಕ ಹೃದಯ-ಜ್ಞಾನೇಂದ್ರಿಯ ಪ್ರೇರೇಪಣೆಗೆ ಈ ಹಬ್ಬವು ಮನ್ನಣೆ ನೀಡಿದೆ. ವಿಶ್ವದ ಯಾವುದೇ ಭಾಗದಲ್ಲಿ ಆಚರಿಸ ಬಹುದಾದ ಹಬ್ಬವಿದು.

**ರಕ್ಷಾಬಂಧನ - ಭಾತೃತ್ವದ ಸಂಕೇತ :**

ಶ್ರಾವಣ ಮಾಸದ ಹುಣ್ಣಿಮೆ ಒಂದು ಸಾರ್ವತ್ರಿಕ ಆಚರಣೆ ಮೂಲಕ ಗಮನ ಸೆಳೆ ಯಲಿದೆ. ಅದುವೇ ರಕ್ಷಾಬಂಧನ. ಭಾರತ ಮತ್ತು ನೇಪಾಳದಲ್ಲಿ ಈ ಆಚರಣೆ ಸಹೋದ ರತ್ವದ, ಬಂಧುತ್ವದ ಬಹು ದೊಡ್ಡ ಸಂಕೇತವಾಗಿದೆ. ಇದಕ್ಕೆ ತನ್ನದೇ ಆದ ಇತಿಹಾಸವೂ ಇದೆ. ಹಾಗಾಗಿ ಇದಕ್ಕೊಂದು ಸಾಮಾಜಿಕ ಆಯಾಮವೂ ದೊರಕಿದೆ. ಮಹಾರಾಷ್ಟ್ರ, ಗೋವಾ, ಆಂಧ್ರ, ತಮಿಳುನಾಡು, ಕರ್ನಾಟಕ ಮತು ಒಡಿಶಾ ಸೇರಿದಂತೆ ಹಲವು ರಾಜ್ಯ ಗಳಲ್ಲಿ ಅಂದು ಉಪಾಕರ್ಮದ (ನೂತನ ಜನಿವಾರ ಧಾರಣೆ) ಆಚರಣೆ ನಡೆಯಲಿದೆ.

ಕೇರಳದ ಪ್ರಾಂತ್ಯದಲ್ಲಿ ಇದನ್ನು "ಅವನಿ ಅವಿಟ್ಟಂ" ಎನ್ನುತ್ತಾರೆ. ಉಪಾಕರ್ಮ-ರಕ್ಷಾಬಂಧನ ಒಂದೇ ದಿನವಾದರೂ ಎರಡರ ನಡುವೆ ಸಾಮ್ಯತೆ-ಭಿನ್ನತೆ ಕಂಡು ಬರು ತ್ತದೆ. ಒಂದು ಜ್ಞಾನ ಶುದ್ಧಿ (ವೇದಾಧ್ಯಯನಕ್ಕೆ ಉಪಕ್ರಮಿಸುವುದು) ಇನ್ನೊಂದು ಭಾವ ಸಂಬಂಧಿ-ರಾಖಿ ಕಟ್ಟುವುದು,ಯಜ್ಞೋಪವೀತ-ಧರಿಸುವುದು. ಎರಡೂ ನೂಲಿನ ನಂಟಿನ ಮೂಲಕ ಹೃದಯ-ಜ್ಞಾನೇಂದ್ರಿಯ ಪ್ರೇರೇಪಣೆಗೆ ಮಹತ್ವ ನೀಡಿದೆ ಎಂಬುದೇ ಬಹು ವಿಶೇಷ. ವಿಶ್ವದ ಯಾವುದೇ ದೇಶದ ಮೂಲ ಸಂಪ್ರ ದಾಯದಲ್ಲಿ ಈ ಆಚರಣೆ ಕಂಡು ಬರಲಾರದು. ಅದಕ್ಕಾಗಿಯೇ ಭರತ ಭೂಮಿ ವಿಶಿಷ್ಠ ಎನಿಸಿದೆ.




**ಕರಾವಳಿಯಲ್ಲಿ ನಾರಿಯಲ್ ಪೂರ್ಣಿಮಾ:**

ಭಾರತದ ಕರಾವಳಿ ತೀರಗಳಲ್ಲಿ ರಾಖಿ ಹಬ್ಬದ ಆಚರಣೆ ಭಿನ್ನವಾಗಿದೆ. ಹೆಚ್ಚಾಗಿ ಮೀನುಗಾರರೇ ವಾಸಿ ಸುವ ಪ್ರದೇಶದಲ್ಲಿ ರಕ್ಷಾ ಬಂಧನ ಹಬ್ಬವು "ನಾರಿಯಲ್ ಪೂರ್ಣಿಮೆ" ಹೆಸರಿನಿಂದ ಖ್ಯಾತವಾಗಿದೆ. ಮಹಾರಾಷ್ಟ್ರ, ಕರ್ನಾಟಕ, ಗುಜರಾತ್, ಕೊಂಕಣ ಮತ್ತು ಗೋವಾ ಮೊದಲಾದ ರಾಜ್ಯದ ತೀರ ಪ್ರದೇಶದ ಜನರು ಜೀವನ ನಿರ್ವಹಣೆಗಾಗಿ ಸಮುದ್ರ (ಮೀನುಗಾರಿಕೆ)ಯನ್ನೇ ಅವಲಂಬಿಸಿದ್ದಾರೆ.



ಸಾಗರದಲ್ಲಿ ತಮ್ಮ ಮನೆಯ ಜನರಿಗೆ ಯಾವುದೇ ಅಪಾಯ ಬಾರದಿರಲಿ. ಪ್ರಕೃತಿಯು ಕಾರ್ಮಿಕರ ಮೇಲೆ ಕರುಣೆ ತೋರಲಿ. ವರುಣ ದೇವರ ಕೃಪೆಯಿಂದ ಮೀನಿನ ಸಂತತಿ ಹೆಚ್ಚಾಗಲಿ ಎಂದು ಶ್ರಾವಣ ಹುಣ್ಣಿಮೆ ದಿನ "ನಾರಿಯಲ್ ಪೂರ್ಣಿಮೆ" ಹಬ್ಬ ಮಾಡುತ್ತಾರೆ. ಬಲರಾಮ ಜಯಂತಿ, ಶ್ರಾವಣ ಪೂರ್ಣಿಮೆ ದಿನವನ್ನು ಬಲರಾಮನ ಜನ್ಮ ಸಮಾರಂಭವಾಗಿಯೂ ಆಚರಿಸಲಾಗುತ್ತದೆ. ಕೃಷ್ಣನ ಅಣ್ಣ ಬಲರಾಮನು ಈ ಪೂರ್ಣಿಮೆಯಂದು ಜನಿಸಿದನು.

**ಗಮ್ಹಪೂರ್ಣಿಮಾ:**

ಒಡಿಶಾದಲ್ಲಿ ಗಮ್ಹ ಪೂರ್ಣಿಮೆಯನ್ನು ಆಚರಿಸಲಾಗುತ್ತದೆ. ಈ ದಿನದಂದು ಎಲ್ಲಾ ಸಾಕು ಹಸುಗಳು ಮತ್ತು ಎತ್ತುಗಳನ್ನು ಅಲಂಕರಿಸಿ ಪೂಜಿಸಲಾಗುತ್ತದೆ. ಪೀಠ ಮತ್ತು ಸಿಹಿ ತಿಂಡಿಗಳು, ಖಿಠಾ ಎಂದು ಕರೆಯಲ್ಪಡುವ ವಿವಿಧ ರೀತಿಯ ದೇಶೀಯ ಕೇಕ್‌ಗಳನ್ನು ತಯಾರಿಸಿ ಕುಟುಂಬಗಳು, ಸಂಬಂಧಿಕರು ಮತ್ತು ಸ್ನೇಹಿತರಲ್ಲಿ ವಿತರಿಸಲಾಗುತ್ತದೆ.

ಒರಿಯಾ ಜಗನ್ನಾಥ ಸಂಸ್ಕೃತಿಯಲ್ಲಿ, ಕೃಷ್ಣ ಮತ್ತು ರಾಧೆಯು ಶುಕ್ಲ ಪಕ್ಷ ಏಕಾದಶಿಯಿಂದ (ಸಾಮಾನ್ಯವಾಗಿ ಪೂರ್ಣಿಮೆಗೆ ನಾಲ್ಕು ದಿನಗಳ ಮೊದಲು) ಪ್ರಾರಂಭವಾಗಿ ರಾಖಿ ಪೂರ್ಣಿಮೆಯಂದು ಜೂಲನ್ ಯಾತ್ರೆ ಎಂಬ ಹಬ್ಬದೊಂದಿಗೆ ಕೊನೆಗೊಳ್ಳುವ ಶ್ರಾವಣದ ಮಳೆಗಾಲವನ್ನು ಆನಂದಿಸುತ್ತಾರೆ. ರಾಧಾ-ಕೃಷ್ಣರ ವಿಗ್ರಹಗಳನ್ನು ಜೂಲನ್ ಎಂಬ ಉಯ್ಯಾಲೆಯ ಮೇಲೆ ಸುಂದರವಾಗಿ ಅಲಂಕರಿಸಲಾಗುತ್ತದೆ. ಆದ್ದರಿಂದ ಇದನ್ನು ಜೂಲನ್ ಯಾತ್ರೆ ಎಂದೇ ಕರೆಯಲಾಗುತ್ತದೆ.

**ಕಜರಿ ಪೂರ್ಣಿಮಾ:**

ಮಧ್ಯಪ್ರದೇಶ, ಛತ್ತೀಸ್‌ಗಢ ಮತ್ತು ಜಾರ್ಖಂಡ್‌ನಂತಹ ಭಾರತದ ಮಧ್ಯ ಭಾಗಗಳಲ್ಲಿ ಶ್ರಾವಣ ಪೂರ್ಣಿಮೆ ದಿನವನ್ನು ಕಜರಿ ಪೂರ್ಣಿಮೆ ಎಂದು ಆಚರಿಸಲಾಗುತ್ತದೆ. ಇದು ರೈತರು ಮತ್ತು ಗಂಡು ಮಕ್ಕಳನ್ನು ಹೊಂದಿರುವ ಮಹಿಳೆಯರಿಗೆ ಪ್ರಮುಖ ದಿನವಾಗಿದೆ.

ಗುಜರಾತ್‌ನಲ್ಲಿ ಪೂರ್ಣಿಮೆ ದಿನಕ್ಕೆ 'ಪವಿತ್ರೋಪನ' ಶಿವನ ಆರಾಧನೆ ನಡೆಯಲಿದೆ. ಜಾರ್ಖಂಡ್‌ನ ದಿಯೋಘರ್‌ನಲ್ಲಿ ಶ್ರಾವಣಿ ಮೇಳ ಒಂದು ಪ್ರಮುಖ ಉತ್ಸವ. ಬಿಹಾರದ ಸುಲ್ತಾನ್ ಗಂಜಿನಲ್ಲಿ ಗಂಗಾ ನದಿಯಿಂದ 100 ಕಿ.ಮೀ.ಕಾಲ್ನಡಿಗೆಯಲ್ಲಿ ಪವಿತ್ರ ಜಲ ತರುವ ಸಾವಿರಾರು ಕೇಸರಿ ವಸ್ತ್ರಧಾರಿಗಳು ಧನ್ಯತೆ ಮೆರೆಯುತ್ತಾರೆ.

ಶ್ರಾವಣವು ವಾರ್ಷಿಕ 'ಕನ್ವರ್' ಯಾತ್ರೆ ಸಮಯವೂ ಆಗಿದೆ. ಕನ್ವಾರಿಯಾ(ಶಿವ ಭಕ್ತರು) ಹರಿದ್ವಾರ, ಗೋಮುಖ ಮತ್ತು ಗಂಗೋತ್ರಿಯಿಂದ ಗಂಗಾ ನೀರನ್ನು ತರಲು ಮಾಡುವ ವಾರ್ಷಿಕ ತೀರ್ಥ ಯಾತ್ರೆಯಾಗಿದೆ.

ಶ್ರವಣ ನಕ್ಷತ್ರ ವಿಷ್ಣುವಿನ ಜನ್ಮ ನಕ್ಷತ್ರ. ಶ್ರಾವಣ ಹುಣ್ಣಿಮೆ ದಿನ ಶ್ರವಣ ನಕ್ಷತ್ರ ಬರುವುದರಿಂದ ಇಡೀ ಮಾಸಕ್ಕೆ ಪವಿತ್ರತೆ ಬಂತು ಎನ್ನುತ್ತಾರೆ ಶಾಸ್ತ್ರಕಾರರು. ಕೇರಳದಲ್ಲಿ 'ಶ್ರ' ಮೌನವಾಗಿ 'ವಣಂ' ಮಾತ್ರ ಉಳಿಯಿತು. ಅದು ಅನಂತ ಶಯನನಾದ ಶ್ರೀವಿಷ್ಣುವಿನ ನಕ್ಷತ್ರವಾಗಿ 'ತಿರುಓಣಂ' ರೂಪ ಪಡೆಯಿತು. ಬಲಿ ಚಕ್ರವರ್ತಿ ಮತ್ತು ವಿಷ್ಣುವಿನ ವಾಮನಾವತಾರದ ಕತೆಯೂ ಇದರೊಂದಿಗೆ ಬೆಸೆದುಕೊಂಡಿದೆ ಎಂಬುದು ಗಮನಾರ್ಹ. ಒಟ್ಟಾರೆ ಶ್ರಾವಣ ಹುಣ್ಣಿಮೆ ಎಂಬುದು ಸಮಸ್ತ ಭಾರತೀಯರಿಗೆ ವಿವಿಧ ಕಲ್ಪನೆ, ಕಟ್ಟಣೆ, ಹೆಸರು, ಆಚರಣೆಗಳ ಮೂಲಕ ದೇವತಾರಾಧನೆ ಮಾಡುವ,ಸಾರ್ಥಕ್ಯ ಮೆರೆಯುವ ಪರ್ವ ಕಾಲವಾಗಿದೆ. ಇದು ಭಕ್ತಿ, ಆಧ್ಯಾತ್ಮಿಕತೆ,ಆತ್ಮಶಕ್ತಿ ಮತ್ತು ಸ್ವಾವಲಂಬನೆಯ ಸಂಕೇತವಾಗಿದೆ. ದೋಷ ರಾಶಿಗಳನ್ನು ಶುದ್ಧಿ ಗೊಳಿಸಲು ಮತ್ತು ಆತ್ಮಿಕ ಶಕ್ತಿಯನ್ನು ವೃದ್ಧಿಸಲು ಪ್ರೇರಕವಾಗಿದೆ.

# ಸಿರಿಯಾಳ ಷಷ್ಠಿ

– ಡಾ ॥ರೂಪಶ್ರೀ ಶಶಿಕಾಂತ್
89041 26661

ಸಿರಿಯಾಳ ಷಷ್ಠಿ ಎಂಬುವುದು ಶ್ರಾವಣ ಮಾಸದಲ್ಲಿ ನಾಗರ ಚೌತಿ, ನಾಗರ ಪಂಚಮಿಯ ನಂತರದ ದಿನ. ಪ್ರತಿ ಷಷ್ಠಿಯೂ ಹೇಗೆ ಸುಬ್ರಹ್ಮಣ್ಯನಿಗೆ ಶ್ರೇಷ್ಠವಾಗಿರುತ್ತದೆಯೋ, ಹಾಗೆ ಸಿರಿಯಾಳನ ಷಷ್ಠಿಯ ದಿನ ಸುಬ್ರಹ್ಮಣ್ಯನನ್ನು ಪೂಜಿಸುತ್ತಾರೆ. ಐದು ಬಗೆಯ ಅನ್ನ ಎಂದರೆ ಸಾದಾ ಅನ್ನ, ಚಿತ್ರಾನ್ನ, ಸೀ ಅನ್ನ, ತುಪ್ಪನ್ನ, ಮೊಸರನ್ನ, ಮಾಡಿ ಭಗವಂತನಿಗೆ ನೈವೇದ್ಯ ಮಾಡುತ್ತಾರೆ. ಅಂದು ಮಕ್ಕಳಿರುವ ಮನೆಗೆ ಬುತ್ತಿ ಮೊಸರನ್ನ ಮತ್ತು ಕೊಬ್ಬರಿ ಸಕ್ಕರೆ ಹೂರಣದ ಕಡುಬನ್ನು ಬೀರುವ ಸಂಪ್ರದಾಯವಿದೆ.

**ಸಿರಿಯಾಳ ಷಷ್ಠಿ ವ್ರತಾಚರಣೆ :**

ಈ ವ್ರತವನ್ನು ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಗಾಗಿ 5 ವರ್ಷ ಆಚರಿಸುವ ಸಂಪ್ರದಾಯವಿದೆ. ಈ ವ್ರತದ ಹಿನ್ನೆಲೆಯಲ್ಲಿ ಕೆಲವು ಜಾನಪದ ಕಥೆಗಳಿವೆ. ಎಲ್ಲಾ ಕಥೆಗಳಲ್ಲೂ ಸಣ್ಣ ಮಗು ಗಂಗಾದೇವಿಗೆ ಅಹುತಿಯಾಗುತ್ತದೆ. ತಾಯಿ ಭಕ್ತಿಯಿಂದ ಪೂಜೆ ಮಾಡಿದಾಗ ಗಂಗಾದೇವಿ ಪ್ರಸಾದ ರೂಪದಲ್ಲಿ ಮಗುವನ್ನು ಬದುಕಿಸಿ ಕೊಡುತ್ತಾಳೆ.

**1. ತಮ್ಮನ ಉಳಿಸಿಕೊಂಡ ಕಥೆ :**

ಮೊದಲನೆಯ ಕಥೆಯ ಪ್ರಕಾರ,ತವರಿಗೆ ಬಂದಂತಹ ಹೆಣ್ಣು ಮಗಳು, ತನ್ನ ತಮ್ಮ ಮತ್ತು ತನ್ನ ಮಗುವಿನ ಜೊತೆ ತನ್ನ ಅತ್ತೆ ಮನೆಗೆ ಹಿಂದಿರುಗುತ್ತಿರುತ್ತಾಳೆ. ಆಗ ಗಂಗಾದೇವಿ ಅಡ್ಡ ಲಾಗಿ ಬಂದು (ಎಂದರೆ ಪ್ರವಾಹ) ನಿನ್ನ ಮಗು ಅಥವಾ ನಿನ್ನ ತಮ್ಮ ಇಬ್ಬರಲ್ಲಿ ಒಬ್ಬರನ್ನು ನನಗೆ ಅಹುತಿಯಾಗಿ ಕೊಡು ಎಂದು ಕೇಳುತ್ತಾಳೆ.

ಹೆಣ್ಣು ಮಗಳು ಮುಂದೆ ನೋಡುತ್ತಾಳೆ ತನ್ನ ಹೊಟ್ಟೆ ಕಾಣುತ್ತದೆ ಆದರೆ ಹಿಂದೆ ನೋಡಿದಾಗ ಬೆನ್ನು ಕಾಣುವುದಿಲ್ಲ. ಮುಂದೆ ತನಗೆ ಮಕ್ಕಳಾಗಬಹುದು, ಆದರೆ ತಮ್ಮ ಹುಟ್ಟುವುದು ಕಷ್ಟ ಎಂದು, ತನ್ನ ಮಗುವನ್ನು ಗಂಗಾದೇವಿಗೆ ಕೊಟ್ಟು ತಮ್ಮನನ್ನು ಉಳಿಸಿಕೊಳ್ಳುತ್ತಾಳೆ. ಅವಳ ತಮ್ಮನ ಮೇಲಿನ ಪ್ರೀತಿ, ವಾತ್ಸಲ್ಯಕ್ಕೆ ಗಂಗಾದೇವಿಯು ಮೆಚ್ಚಿ ಅವಳ ಮಗುವನ್ನು ಬದುಕಿಸಿ ಕೊಡುತ್ತಾಳೆ.

ಆದ್ದರಿಂದ ಸಿರಿಯಾಳ ಷಷ್ಠಿಯ ದಿನ ತೊಟ್ಟಿಲು ಅದರೊಳಗೆ ಒಂದು ಮಗು, ಗಂಗಾದೇವಿ ಅವಳಿಗೆ ಒಂದು ಕೋಲು, ಅಕ್ಕ ಮತ್ತು ತಮ್ಮರ ಮೂರ್ತಿಯನ್ನು ಮಣ್ಣಿನಲ್ಲಿ ಮಾಡಿ ಪೂಜಿಸುವ ಸಂಪ್ರದಾಯವಿದೆ. ಜೊತೆಗೆ ಐದು ಗಂಡು ಮಕ್ಕಳಿರುವ ಮನೆಗಳಿಗೆ ಹೋಗಿ ಮೊಸರನ್ನ ಮತ್ತು ಕಡುಬನ್ನು ಬೀರುವ ಸಂಪ್ರದಾಯವಿದೆ.

**2. ಎರಡು ಮಕ್ಕಳನ್ನು ಪಡೆದ ಕಥೆ :**

ಈ ಕಥೆಯ ಪ್ರಕಾರ ನಾಗಮ್ಮ ಎಂಬುವ ಸೊಸೆಯು, ತನ್ನ ತವರು ಮನೆಗೆ ಹೋಗಿರುತ್ತಾಳೆ. ಅವಳು ಇಲ್ಲದ ಸಂದರ್ಭದಲ್ಲಿ ಊರಲ್ಲಿ ಕಟ್ಟಿದ್ದ ಕೆರೆಗೆ ನೀರೇ ಬರುವುದಿಲ್ಲ. ಆಗ ಸಣ್ಣ ಮಗುವನ್ನು ಕೆರೆಗೆ ದಾನವಾಗಿ ಕೊಟ್ಟರೆ ನೀರು ಬರುವುದು ಎಂದು ಅವಳ ಮಾವನವರು ಅವಳ ಮಗುವನ್ನು ಕೆರೆಗೆ ಕೊಡುತ್ತಾರೆ. ತವರಿನಿಂದ ಹಿಂದಿರುಗಿದ ನಾಗಮ್ಮ ಮಗನನ್ನು ಕಾಣದೆ ದುಃಖ ತಪ್ತಳಾಗಿ ಮೊಸರನ್ನ ಕಲಿಸಿ ತನ್ನ ಮಗನಿಗೆ ತಿನ್ನಿಸ ಬೇಕೆಂದು ಕೆರೆಯ ಬಳಿ ಬಂದು ಅಲ್ಲಿದ್ದ ಮಕ್ಕಳಿಗೆಲ್ಲಾ ಮೊಸರನ್ನ ಮತ್ತು ಕಡುಬನ್ನು ಹಂಚುತ್ತಾಳೆ.

ಭಗವಂತನಲ್ಲಿ ಭಕ್ತಿಯಿಂದ ತನ್ನ ಮಗುವನ್ನು ಹಿಂದಿರುಗಿಸಲು ಬೇಡಿಕೊಳ್ಳುತ್ತಾಳೆ. ಅವಳ ಭಕ್ತಿಗೆ ಒಲಿದು ಗಂಗಾದೇವಿಯು ಒಂದು ತೆಪ್ಪದಲ್ಲಿ ಎರಡು ಮಕ್ಕಳನ್ನು ಕಳಿಸಿ ಕೊಡುತ್ತಾಳೆ. ಆ ಎರಡು ಮಕ್ಕಳನ್ನು ಕೂಡ ನಾಗಮ್ಮ ಸಾಕಿ ಬೆಳೆಸುತ್ತಾಳೆ.

ಭಗವಂತ ನಾವು ಒಂದನ್ನು ಕೊಟ್ಟರೆ ನಮಗೆ ಹಿಂದಿರುಗಿ ಎರಡನ್ನು ಕೊಡುತ್ತಾನೆ ಎಂಬ ನಂಬಿಕೆಗೆ ಅನುಗುಣವಾಗಿ ಸಿರಿಯಾಳ ಷಷ್ಠಿಯ ದಿನ ಮಣ್ಣಿನಿಂದ ತೊಟ್ಟಿಲಲ್ಲಿ ಎರಡು ಮಕ್ಕಳು ವಿರುದ್ಧ ದಿಕ್ಕಿನಲ್ಲಿ ಮಲಗಿರುವಂತೆ ಗೊಂಬೆಗಳನ್ನು ಮಾಡಿ, ಪೂಜಿಸಲಾಗುತ್ತದೆ.

ಮದುವೆಯಾದ ಹೆಣ್ಣು ಮಕ್ಕಳು ಮೊದಲ ವರ್ಷ ಐದು ಮಕ್ಕಳಿಗೆ, ಎರಡನೇ ವರ್ಷ 10 ಮಕ್ಕಳಿಗೆ, ಮೂರನೇ ವರ್ಷ 15, ನಾಲ್ಕನೆ ವರ್ಷ 20, ಐದನೇ ವರ್ಷ 25 ಮಕ್ಕಳಿಗೆ ಮೊಸರನ್ನ ಮತ್ತು ಕಡುಬನ್ನು ಹಂಚುತ್ತಾರೆ.

ಇದೇ ಕಥೆಯು ಮತ್ತೊಂದು ರೀತಿಯಲ್ಲಿ ಕೆರೆಯಲ್ಲಿ ಪ್ರವಾಹ ಬಂದಾಗ ಮಾವನಿಗೆ ಚೊಚ್ಚಲ ಮಗುವನ್ನು ಕೊಟ್ಟರೆ ಪ್ರವಾಹ ನಿಲ್ಲುತ್ತದೆ ಎಂಬ ಕನಸಾಗುತ್ತದೆ. ಆಗ ಅವನು

ಸೊಸೆಗೆ ಹೇಳದೆ, ಸಣ್ಣ ಮಗುವನ್ನು ಕೆರೆಗೆ ಕೊಟ್ಟಿರುತ್ತಾನೆ. ಆದರೆ ಸೊಸೆಯು ಮೊಸರನ್ನವನ್ನು ಕಲಿಸಿ ತನ್ನ ಮಗನನ್ನು ಪ್ರೀತಿಯಿಂದ ಕರೆದಾಗ ಭಗವಂತನ ಕೃಪೆಯಿಂದ ಮಗುವು ಓಡೋಡಿ ಬರುತ್ತದೆ.

ಮಕ್ಕಳಿಗೆ ಇಷ್ಟವಾದ ಮೊಸರನ್ನ ಮತ್ತು ಕಡುಬನ್ನು ಮಾಡುವ ಈ ಹಬ್ಬ ಮಕ್ಕಳ ಹಬ್ಬವಾಗಿದೆ. ನಮ್ಮ ಸಂಸ್ಕೃತಿಯಲ್ಲಿ ನಾಗರಚೌತಿ, ನಾಗರಪಂಚಮಿ ಅಕ್ಕ ತಮ್ಮ, ಅಣ್ಣ ತಂಗಿಯರ ಹಬ್ಬವಾದರೆ ಸಿರಿಯಾಳ ಷಷ್ಠಿ ಮನೆಯ ಮಕ್ಕಳ ಹಬ್ಬವಾಗಿದೆ.

**ಸಿರಿಯಾಳನ ಕಥೆ :**

ಈ ಕಥೆಯ ಪ್ರಕಾರ ಭಕ್ತ ಸಿರಿಯಾಳ ಎಂಬ ಶಿವಭಕ್ತನಿರುತ್ತಾನೆ. ಅವನು ಜಂಗಮರಿಗೆ ಅವರು ಕೇಳಿದ್ದನ್ನು ಅಡಿಗೆ ಮಾಡಿ ಬಡಿಸಿದ ನಂತರವೇ ತಾನು ಊಟ ಮಾಡುವುದಾಗಿ ಸಂಕಲ್ಪ ಮಾಡಿರುತ್ತಾನೆ ಅವನ ಹೆಂಡತಿಯೂ ಇದೇ ವ್ರತವನ್ನು ಆಚರಿಸುತ್ತಿರುತ್ತಾಳೆ. ಅವರಿಗೆ ಬಹಳ ವರ್ಷಗಳ ನಂತರ ಒಬ್ಬನೇ ಒಬ್ಬ ಮಗ " ಚಿಲಾಲಾ" ಎಂಬುವವನು ಹುಟ್ಟಿರುತ್ತಾನೆ. ಬಹಳ ಮುಗ್ಧ ದೈವ ಭಕ್ತ ಶುದ್ಧ ಮನಸ್ಸಿನ ಮಗು.

ಶಿವ ಪಾರ್ವತಿಯರು ಸಿರಿಯಾಳನನ್ನು ಪರೀಕ್ಷಿಸಲು ಜಂಗಮ ರೂಪದಲ್ಲಿ ಬಂದು, ತಾವು ನರಭಕ್ಷಕರು ಎಂದು ಹೇಳಿ ತಮಗೆ ನಾಲ್ಕೈದು ವರ್ಷದ ಮಗುವನ್ನೇ ಊಟವಾಗಿ ಕೂಡ ಬೇಕೆಂದು ಕೇಳುತ್ತಾರೆ. ಬೇರೆಯವರ ಮಕ್ಕಳನ್ನು ಕೊಲ್ಲಲು ನಮಗೆ ಅಧಿಕಾರವಿಲ್ಲ ಎಂದು ಭಾವಿಸಿದ ಸಿರಿಯಾಳ ಮತ್ತು ಅವನ ಹೆಂಡತಿ ತಮ್ಮ ಮಗನನ್ನೇ ಅರ್ಪಿಸುವುದಾಗಿ ತೀರ್ಮಾನಿಸುತ್ತಾರೆ. ಮಗುವನ್ನು ಕರೆತರಲು ಹೋದ ಸೇವಕ ಮಗುವಿಗೆ ಈ ವಿಷಯವನ್ನು ತಿಳಿಸಿ ಓಡಿ ಹೋಗಲು ಹೇಳುತ್ತಾನೆ.

ಆದರೆ ಭಕ್ತಾಗ್ರೇಸರನಾದ ಮಗು, ಎಲ್ಲರೂ ಒಂದಾನೊಂದು ದಿನ ಹೋಗಲೇಬೇಕು ನನ್ನ ದೇಹವು ಈ ಸತ್ಕಾರ್ಯಕ್ಕಾಗಿ ವಿನಿಯೋಗವಾಗಲಿ ಎಂದು ಹೇಳಿ ತನ್ನ ತಂದೆ ತಾಯಿಗೆ ತನ್ನನ್ನು ಕೊಂದು ಅಡಿಗೆ ಮಾಡಲು ಹೇಳುತ್ತದೆ. ಅಡಿಗೆಯನ್ನು ಬಡಿಸಿದಾಗ ಮತ್ತೆ ಪರೀಕ್ಷಿಸಲು ನಿಮ್ಮ ಮಗನನ್ನು ಕರೆದರೆ ಮಾತ್ರ ನಾವು ಊಟ ಮಾಡುತ್ತೇವೆ ಎಂದು ಹೇಳುತ್ತಾನೆ ಶಿವ. ದುಃಖ ನೋವು ತಡೆಯಲಾರದೆ ಇರುವ ವಿಷಯವನ್ನು ಹೇಳಲು ಸಾಧ್ಯವಾಗದೆ, ಚೆಂಗಳಾದೇವಿ ಬಾಗಿಲಿನಿಂದ ಹೊರಗೆ ಮುಖ ಮಾಡಿ "ಚಿಲಾಲಾ ಚಿಲಾಲಾ ನನ್ನ ಮಗು ಬೇಗ ಬಾ" ಎಂದು ಕೂಗುತ್ತಾರೆ. ಭಕ್ತವತ್ಸಲನಾದ ಶಿವನ ಕೃಪೆಯಿಂದ ಚಿಲಾಲನು ಓಡಿ ತನ್ನ ತಾಯಿಯ ಬಳಿಗೆ ಬರುತ್ತಾನೆ.



ಈ ಕಡೆ ಶಿವ ಪಾರ್ವತಿಯರು ತಮ್ಮ ನಿಜರೂಪದಿಂದ ದರ್ಶನ ಕೊಡುತ್ತಾರೆ.

ಹೀಗೆ ಶಿವ ಭಕ್ತಿಯಿಂದ ಶಿವನ ಸಾನ್ನಿಧ್ಯ ಪಡೆದುಕೊಂಡ ಸಿರಿಯಾಳನನ್ನು ನೆನಪಿಸಿಕೊಳ್ಳುತ್ತಾ ಸಿರಿಯಾಳ ಷಷ್ಠಿಯಂದು ಈಶ್ವರನ ಮತ್ತು ಷಣ್ಮುಖನ ಪೂಜೆಯನ್ನು ಮಾಡುತ್ತಾರೆ.

ಭಕ್ತರು ತಮ್ಮ ಆರಾಧ್ಯ ದೈವನಿಗಾಗಿ, ಸಂಕಲ್ಪವನ್ನು ಮಾಡಿದರೆ ಎಷ್ಟೇ ಕಷ್ಟ ಬಂದರೂ ಹಿಡಿದ ಮಾರ್ಗವನ್ನು ಬಿಡದೆ ಮುನ್ನಡೆದಾಗ ಭಗವಂತನು ಮೆಚ್ಚುತ್ತಾನೆ ಎಂಬುದನ್ನು ಈ ಕಥೆ ತೋರಿಸುತ್ತದೆ. ಅಷ್ಟೇ ಅಲ್ಲ ನಮ್ಮ ಜೀವನದಲ್ಲಿ ಬರುವ ಕಷ್ಟಗಳೆಲ್ಲ ಭಗವಂತನು ನಮಗೆ ಕೊಡುವ ಪರೀಕ್ಷೆಗಳು ಎಂಬ ವಿಚಾರವನ್ನು ತಿಳಿದುಕೊಂಡು, ಸರಿಯಾದ ಮಾರ್ಗದಲ್ಲಿ ಧರ್ಮವನ್ನು ಬಿಡದೆ ನಡೆದುಕೊಂಡು ನಾವು ಪರೀಕ್ಷೆಯಲ್ಲಿ ಗೆದ್ದಾಗ ಭಗವಂತನ ಸಾಕ್ಷಾತ್ಕಾರವಾಗುತ್ತದೆ ಎಂಬುದನ್ನು ತೋರಿಸುತ್ತದೆ.

ಜಾನಪದ ಕಥೆಗಳು ತಾಯಿಯ ಪ್ರೀತಿಯ ಹಿರಿಮೆ, ಅಕ್ಕಂದಿರು ತಮ್ಮಂದಿರನ್ನು ಎಷ್ಟು ಪ್ರೀತಿಯಿಂದ ಕಾಣುತ್ತಿದ್ದರು ಕಾಣಬೇಕು ಎಂಬ ಪಾಠ ಕಲಿಸುತ್ತದೆ. ನಾವು ದೇವರಿಗೆ ಸಮರ್ಪಿಸಿದ ಎಲ್ಲವನ್ನೂ ದೇವರು ನಮಗೆ ಎರಡರಷ್ಟು ಮಾಡಿ ಹಿಂದಿರುಗಿಸುತ್ತಾನೆ ಎಂಬ ಸತ್ಯವನ್ನು ಕೂಡ ತೋರಿಸುತ್ತದೆ.

ಮೊಸರನ್ನ ಹೊಟ್ಟೆಗೆ ತಂಪಾಗಿರುತ್ತದೆ. ಮಕ್ಕಳಿಗೆ ಬಹಳ ಇಷ್ಟವಾದ ಖಾದ್ಯ. ಅಷ್ಟೇ ಅಲ್ಲದೆ ಕಡುಬು ಕೂಡ ಮಕ್ಕಳು ತುಂಬಾ ಇಷ್ಟಪಟ್ಟುಕೊಂಡು ತಿನ್ನುವಂತಹ ತಿಂಡಿ ಮಕ್ಕಳ ಹಬ್ಬವಾದ ಈ ದಿನ ಈ ತಿಂಡಿಗಳನ್ನು ಮಕ್ಕಳಿಗೆ ಹಂಚಿ ಸಮಾಜದಲ್ಲಿ ಪ್ರೀತಿ, ವಿಶ್ವಾಸ, ಸೌಹಾರ್ದತೆ, ಮುಂತಾದವುಗಳನ್ನು ಈ ಹಬ್ಬ ಹೆಚ್ಚಿಸುತ್ತದೆ. ಹಬ್ಬ ಎಂದರೆ ದಾನವಿರಲೇಬೇಕು. ಇಲ್ಲಿ ಮಕ್ಕಳಿಗೆ ದಾನ ನೀಡಲಾಗುತ್ತದೆ.



## ಧಾರಾವಾಹಿ

# ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ

– ಡಿ॥ ಬಿ.ಎನ್.ಶ್ರೀನಿವಾಸನ್


### ಕಳೆದ ಸಂಚಿಕೆಯಿಂದ

### ವೇದಪಾರಾಯಣ

ಆಲಯದ ಸಂಪ್ರದಾಯ ಕಲಾಪಗಳಲ್ಲಿ ವೇದಪಾರಾಯಣವು ಒಂದು ಅಂಗವಾಗಿದ್ದು, ಅದಿಲ್ಲದಿದ್ದಲ್ಲಿ ಅನಾಹುತವಾಗುವುದೆಂದು,ಕಾತರ ಹಾಗೂ ಕಳವಳದಿಂದ ನೋಡಲಾಗುತ್ತದೆ. ತಿರುಮಲೆಯ ಆಲಯ ಚರಿತ್ರೆಯಲ್ಲಿ 15ನೇ ಶತಮಾನದಲ್ಲಿ ಕೆಲಕಾಲ ಇಂತಹ ಪರಿಸ್ಥಿತಿ ಉಂಟಾಗಿದ್ದಿತು. ವಿಜಯನಗರದ ರಾಜವಂಶಗಳ ಮೊದಲ ವಂಶದ ಎರಡನೇ ದೇವರಾಯನ ಪುಣ್ಯಕ್ಕೆಂದು ಪುನರುದ್ಧರಿಸಿ ಅಲ್ಲಿಯೂ ಭವ್ಯತೆಯನ್ನುಂಟು ಮಾಡಬೇಕೆಂದು ಒಬ್ಬಾನೊಬ್ಬ ತಿರುಕ್ಕಲಿಕನ್ರಿ ದಾಸ ಅಳಗಪ್ಪಿರನಾರನು ಅಧಿಕಾರಿ ದೇವಣ್ಣ ಒಡೆಯರ ಗಮನಕ್ಕೆ ತಂದನು. ಸಿದ್ಧಕುಟ್ಟೈ ಗ್ರಾಮದ ಇಪ್ಪತ್ತನಾಲ್ಕು ಮಂದಿ ಪಂಡಿತ ಬ್ರಾಹ್ಮಣರನ್ನು ಶ್ರೀವೆಂಕಟೇಶ್ವರ ಸ್ವಾಮಿಯ ಮುಂದೆ ವೇದಪಾರಾಯಣ ಮಾಡಲು ನಿಯಮಿಸಲಾಯಿತು. ದೇವರಾಯನು ಈ ಏರ್ಪಾಡನ್ನು ಅನುಮೋದಿಸಿ, ರಾಜಭಂಡರಕ್ಕೆ ಸೇರಿದ ಸಿದ್ಧಕುಟ್ಟೈಯಾನೆ ಶ್ರೀನಿವಾಸಪುರದ ವರ್ಷದ ಆದಾಯದ ಅರ್ಧಭಾಗವನ್ನು ಶ್ರೋತ್ರೀಯವಾಗಿ-ಬ್ರಾಹ್ಮಣ ಸಂಭಾವನೆಯಾಗಿ-ನೀಡಿದನು. ಈ ಸಿದ್ಧಕುಟ್ಟೆ ಗ್ರಾಮವು ವೈಕುಂದ ವಲನಾಡುವಿನ 'ಕೊತ್ತಾಲಸ್ಥಳ'ದಲ್ಲಿ ಇದ್ದಿತು. ಹೀಗೆ ಅಳಪ್ಪಿರನಾರನು ಪಡೆದ ಅರ್ಧ ವರ್ಷಾದಾಯವನ್ನು ಬ್ರಾಹ್ಮಣ ಪಂಡಿತರಿಗೆ ವರ್ಗಾಯಿಸಲಾಯಿತು. ಈ ಅರ್ಧ ವಾರ್ಷಿಕ ಆದಾಯವು ತಮ್ಮ ಜೀವನ ನಿರ್ವಹಣೆಗೆ ಸಾಲುವುದಿಲ್ಲವೆಂದು ಬಗೆದ ಬ್ರಾಹ್ಮಣ ಪಂಡಿತರು, ಆಲಯದ ಶ್ರೀಭಂಡಾರಕ್ಕೆ ಮೊದಲೇ ಸೇರಿದ್ದ ಮಿಕ್ಕ ಅರ್ಧ ಗ್ರಾಮಾದಾಯವನ್ನೂ ತಮಗೇ ನೀಡಬೇಕೆಂದು ಆಲಯದ ಸ್ಥಾನತ್ತಾರರಲ್ಲಿ ವಿನಂತಿಸಿದರು. ಯಾವುದೋ ಒಂದು ಸೇವೆಗಾಗಿ ತಮಗೆ ಸೇರಿದ್ದ ಅರ್ಧ ಗ್ರಾಮಾದಾಯವನ್ನು ಆಲಯದವರು ಇತರತ್ರ ವಿನಿಯೋಗಿಸುವಂತಿರಲಿಲ್ಲ. ಹೀಗಾಗಿ ಆಲಯದ ಆಡಳಿತವು ತನ್ನ ಜವಾಬ್ದಾರಿಯಾದ ಸೇವೆಯನ್ನು ಮಾಡಲು ಅರ್ಧ ಗ್ರಾಮಾದಾಯವನ್ನೂ ಉಳಿಸಿಕೊಂಡು, ವೇದಪಾರಾಯಣದ ಕೆಲಸದಲ್ಲಿ ನಿರತರಾದ ಇಪ್ಪತ್ತನಾಲ್ಕು ಮಂದಿ ಬ್ರಾಹ್ಮಣರಿಗೆ ಜೀವನಕ್ಕೆ ಬೇಕಾದಂತೆ ಪೂರ್ತಿ ಗ್ರಾಮಾದಾಯವನ್ನು ನೀಡಲು ಒಂದು ಯೋಜನೆಯನ್ನು ಹುಟ್ಟು ಹಾಕಿದರು. ಇಲ್ಲಿಯೂ ಯೋಜನೆಯನ್ನು ಚಾಲ್ತಿಗೆ ತಂದವನು ತಿರುಕ್ಕಲಿಕನ್ರಿದಾಸನೇ.

ಸಿದ್ಧಕುಟ್ಟೈ (ಶ್ರೀನಿವಾಸಪುರ) ಗ್ರಾಮದಿಂದ ಆಲಯದ ಪಾಲಿಗೆ ಬರಬೇಕಾಗಿದ್ದ ವಾರ್ಷಿಕ ಆದಾಯ 200 ಪಣಂಗಳು ಎಂದು ತೋರುತ್ತದೆ. ಈ ಹಣವನ್ನು ಕಳೆದುಕೊಂಡರೆ, ಹೇಗಾದರೂ ಮಾಡಿ ಆಲಯಕ್ಕೆ 200 ಪಣಂ ವಾರ್ಷಿಕ ಆದಾಯ ಬರುವಂತೆ ಮಾಡಬೇಕಾಗಿದ್ದಿತು. ತಿರುಕ್ಕುಡವೂರುನಾಡು ಹಾಗೂ ವೈಕುಂಠ ವಲನಾಡುಗಳಲ್ಲಿನ ದೇವದಾನದ ಗ್ರಾಮಗಳ ಎಲ್ಲ ಗ್ರಾಮಸ್ಥರನ್ನೂ ಈ ಇನ್ನೂರು ಪಣಂಗಳನ್ನು ಕೂಡಿಸಲು ತಂತಮ್ಮ ವಂತಿಗೆಗಳನ್ನು ನೀಡಬೇಕೆಂದು ಕರೆ ನೀಡಲಾಯಿತು. ವೇದಪಾರಾಯಣ ಮಾಡಲು ತಗುಲವ ಈ ವೆಚ್ಚವನ್ನು ತುಂಬಿ ಕೊಡಲು ಆದೇ ವರ್ಷದಿಂದಲೇ ತಮ್ಮ ಕಾಣಿಕೆಯನ್ನು ನೀಡಲು ಸಮ್ಮತಿಸಿ ಚಿನ್ನ ಹಾಗೂ ನೀರಿನ ಧಾರಾಪೂರ್ವಕವಾಗಿ ಗ್ರಾಮಸ್ಥರು ಪ್ರತಿಜ್ಞೆಗೈದರು. ಇದು ನಡೆದದ್ದು ಶಕ 1355, ಪ್ರಮಾದೀಚ ಸಂವತ್ಸರದ ಉತ್ತಾನದ್ವಾದಶಿಯ ದಿವಸ. ಪೆರಿಯನಾಟ್ಟವೇಲನ್ ಹಾಗೂ ಊರ್‌ಕಣಕ್ಕು(ಶಾನುಭೋಗ) ಅಥವಾ ವೇಲನ್ (ಗ್ರಾಮದ ದಂಡಧರ) ರವರ ಸಹಿ ಮಾಡಿದ ಘೋಷಣಾ ಪತ್ರದ ಬೆಂಬಲ ಪಡೆದ ಆಲಯಾಧಿಕಾರಿಗಳು ಆತಂಕರಹಿತರಾಗಿ, ಸಿದ್ಧಕುಟ್ಟೈ ಗ್ರಾಮದ ಮಿಕ್ಕ ಅರ್ಧ ಆದಾಯವನ್ನು ವೇದಪಾರಾಯಣದಾರರಿಗೆ ಬಿಟ್ಟುಕೊಟ್ಟರು. ಹೀಗಾಗಿ ಎರಡೂ ಪ್ರಯೋಜನಗಳೂ ಸಿದ್ಧಿಸಿದವು. ದಾನವಾಗಿ ನೀಡಿದ ಆಸ್ತಿಯ ಬಗ್ಗೆ ದಾನದ ಉದ್ದೇಶದಿಂದ ದೂರಸರಿದು ತಾಂತ್ರಿಕವಾಗಿ ಈ ಏರ್ಪಾಡು ಪರೋಕ್ಷ ಉಲ್ಲಂಘನೆಯೇ ಆದರೂ, ಪ್ರತಿಯಾಗಿ ಯಾವುದೇ ಪರಿಹಾರ ನೀಡುವಂತಿದ್ದರೂ ಇದು ನಂಬಿಕೆಯನ್ನು ಮುರಿಯುವಿಕೆಯೇ ಆಯಿತು. ಆಲಯದಲ್ಲಿ ವೇದಪಾರಾಯಣವನ್ನು ಪುನರುದ್ಧರಿಸುವ ವಿಚಾರದಲ್ಲಿನ ಒತ್ತಡ, ಅವಸರಗಳು, ಅಧಿಕಭಾರವಾಗಿ ತೋರಿ ಬಂದು ಈ ಕ್ರಮದಲ್ಲಿ ಕೈಹಾಕುವಂತೆ ಮಾಡಿರಬೇಕು.

# ಜ್ಯೋತಿಷ್ಯಾಮೃತಧಾರಾ - ಗ್ರಂಥ ಪರಿಚಯ




**ಗ್ರಂಥಾವಲೋಕನ**

**ಕೃತಿಯ ಹೆಸರು :**

**ಜ್ಯೋತಿಷ್ಯಾಮೃತಧಾರ ಭಾಗ ಒಂದು ಮತ್ತು ಎರಡು**

**ಲೇಖಕರು:**

**ಡಾ॥ ಅನುಸೂಯ ಎಸ್. ರಾಜೀವ್**

**ಪ್ರಕಾಶಕರು :**

**ವೆಂಕಟಾದ್ರಿ ಪ್ರಕಾಶನ,ಬೆಂಗಳೂರು**

**ಪ್ರತಿಗಳಿಗೆ ಸಂಪರ್ಕಿಸಿ:**

**9481800691**

ಜ್ಯೋತಿಷ್ಯ ಶಾಸ್ತ್ರದಲ್ಲಿ ಅಪಾರ ಪಾಂಡಿತ್ಯ ಹೊಂದಿರುವ ಡಾ. ಅನಸೂಯ ಎಸ್. ರಾಜೀವ್ ರವರ ಬೃಹತ್ ಗ್ರಂಥ ಜ್ಯೋತಿಷ್ಯಾಮೃತಧಾರಾ ಜ್ಯೋತಿಷ್ಯ ಲೋಕಕ್ಕೆ ದೊರೆತ ಅಪೂರ್ವ ಕೊಡುಗೆ.

" ಈ ಗ್ರಂಥದಲ್ಲಿ ಏನಿದೆ?" ಎಂದು ಕೇಳುವುದಕ್ಕಿಂತ "ಇದರಲ್ಲಿ ಏನಿಲ್ಲ?"ಎಂಬ ಪ್ರಶ್ನೆಯೇ ಹೆಚ್ಚು ಸೂಕ್ತ. ಅಷ್ಟೊಂದು ವಿಶಾಲ ವಿಷಯಾವಳಿಯನ್ನು ಒಳಗೊಂಡಿರುವ ಈ ಕೃತಿಯಲ್ಲಿ ಜ್ಯೋತಿಷ್ಯದ ಸಕಲ ಅಂಶಗಳನ್ನೂ ಲೇಖಕಿಯವರು ಸವಿವರವಾಗಿ ಶಾಸ್ತ್ರ ಸಮ್ಮತವಾಗಿ ನಿರೂಪಿಸಿದ್ದಾರೆ.

ಇದುವರೆಗೆ ಅಧ್ಯಯನಕ್ಕಾಗಿ ಒಂದೊಂದು ವಿಷಯಕ್ಕೆ ಒಂದೊಂದು ಗ್ರಂಥವನ್ನು ಆಶ್ರಯಿಸಬೇಕಾಗುತ್ತಿತ್ತು. ಆದರೆ ಜ್ಯೋತಿಷ್ಯಾಮೃತಧಾರಾ ನಮ್ಮ ಬಳಿ ಇದ್ದರೆ ಸಾಕು-ಜ್ಯೋತಿಷ್ಯದ ಬಹುತೇಕ ಎಲ್ಲಾ ಮಾಹಿತಿಯೂ ಒಂದೇ ಗ್ರಂಥದಲ್ಲಿ ಲಭ್ಯ. ಡಾ॥ ಅರುಳಾಲನ್ ಗುರುಗಳು ಹೇಳಿರುವಂತೆ, ಈ ಕೃತಿ ಜ್ಯೋತಿಷ್ಯದ ನಿಘಂಟೇ ಸರಿ.

ಪಂಚಭೂತಗಳಿಗೆ ಒಡೆಯನಾದ ಮಹಾದೇವನ ಐದು ಮುಖಗಳ ಹೆಸರನ್ನು ಆಧಾರವಾಗಿ ತೆಗೆದುಕೊಂಡು ಐದು ಶಿಷ್ಯರು ಪ್ರಶ್ನೆ ಕೇಳುವ ಹಾಗೂ ಗುರುಗಳು ಉತ್ತರಿಸುವ ಸಂವಾದಾತ್ಮಕ ವಿನ್ಯಾಸ ಈ ಗ್ರಂಥದ ವಿಶೇಷ ಆಕರ್ಷಣೆ. ಆ ಶಿಷ್ಯರ ಮೂಲಕ ನಮ್ಮೆಲ್ಲರ ಪ್ರಶ್ನೆಗಳಿಗೂ ಇಲ್ಲಿ ಸಮರ್ಪಕ ಉತ್ತರ ದೊರಕುತ್ತದೆ.

ಸಾಮಾನ್ಯರಿಗೆ ಎಟುಕದಂತಹ ಈ ವಿದ್ಯೆಯನ್ನು ಕರತಲಾಮಲಕ ಮಾಡಿಕೊಂಡು, ಎಲ್ಲರಿಗೂ ಅರ್ಥವಾಗುವ ಭಾಷೆಯಲ್ಲಿ ವಿವರಿಸಿರುವ ಲೇಖಕಿಯವರ ಶೈಲಿ ಅತ್ಯಂತ ವಿಶಿಷ್ಟ.

ಮೊದಲ ಭಾಗದಲ್ಲಿ ಜ್ಯೋತಿಷ್ಯದ ಮೂಲಭೂತ ತತ್ತ್ವಗಳನ್ನು ಕ್ರಮಬದ್ಧವಾಗಿ ಪರಿಚಯಿಸಿದ್ದರೆ,ಎರಡನೇ ಭಾಗದಲ್ಲಿ ಜ್ಯೋತಿಷ್ಯದ ಅನ್ಯ ವಿಧಾನಗಳನ್ನು ವಿಸ್ತೃತವಾಗಿ ವಿವರಿಸಿದ್ದಾರೆ. ಸ್ತ್ರೀ ಜಾತಕಕ್ಕೆ ಮೀಸಲಾದ ಪ್ರತ್ಯೇಕ ಅಧ್ಯಾಯಗಳು ವಿವಾಹ ಹೊಂದಾಣಿಕೆ ವಿಭಾಗಗಳು ಅತ್ಯಂತ ಸೂಕ್ತವಾಗಿ ಮೂಡಿ ಬಂದಿವೆ.

ಹಸ್ತಸಾಮುದ್ರಿಕ ಶಾಸ್ತ್ರವನ್ನು ವಿವರಿಸುವ ಸಂದರ್ಭದಲ್ಲಿ ನೀಡಿರುವ ಚಿತ್ರಗಳು ಹಾಗೂ ವಿವರಣೆಗಳು ಓದುಗರಿಗೆ ಎದುರಿಗೇ ಕೂತು ಗುರುಗಳು ಪಾಠ ಹೇಳುತ್ತಿರುವ ಅನುಭವವನ್ನು ನೀಡುತ್ತದೆ. ಲೇಖಕಿಯವರು ಸ್ವತಃ ಹೇಳಿದಂತೆ ಇಷ್ಟೊಂದು ವಿಷಯ ಸಂಗ್ರಹಕ್ಕೆ 14 ವರ್ಷಗಳ ಕಾಲ ತೆಗೆದುಕೊಂಡಿರುವುದು ಅಚ್ಚರಿಯಲ್ಲ. ಇದು ನಿಸ್ಸಂದೇಹವಾಗಿ ದೀರ್ಘ ತಪಸ್ಸಿನ ಫಲ. ತಮ್ಮ ಕಾಲಕ್ಕಷ್ಟೇ ಸೀಮಿತವಾಗದೆ ಮುಂದಿನ ತಲೆಮಾರುಗಳಿಗೂ ಅಪರೂಪದ ಜ್ಞಾನಧಾರೆಯನ್ನು ಹರಿಸಿ ಹೋಗುವಂತಹ ಮಹತ್ವದ ಸಾಧನೆಯಿದು.

ಅನೇಕ ಗುರು-ಹಿರಿಯರ ಆಶೀರ್ವಾದದಿಂದ ರೂಪುಗೊಂಡಿರುವ ಈ ಗ್ರಂಥ ಜ್ಯೋತಿಷ್ಯ ಲೋಕದಲ್ಲಿ ಶಾಶ್ವತ ಸ್ಥಾನ ಪಡೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಸಂಗ್ರಹಯೋಗ್ಯವಾದ ಈ ಅಮೂಲ್ಯ ಕೃತಿಯನ್ನು ನಮಗೆ ನೀಡಿದ ಲೇಖಕಿಗೆ ಅನಂತ ಧನ್ಯವಾದಗಳು.

**ಕೃತಿ ಪರಿಚಯ : ಡಾ॥ ಭಾರತಿ ರವೀಂದ್ರ**

# ಉಪಾಕರ್ಮ ಮತ್ತು ಉತ್ಸರ್ಜನ

ವೇ.ವಿ. ಶಿವರಾಮ ಜೋಗಳೇಕರ
8275180641



ನಮ್ಮ ದೇಶದಲ್ಲಿ ಅತ್ಯಂತ ಪ್ರಶಸ್ತವಾದ ಪರ್ವಗಳು ನಾಲ್ಕು. ಅವು ಶ್ರಾವಣಿ-ಉಪಾಕರ್ಮ, ದಶಹರಾ (ನವರಾತ್ರಿ, ವಿಜಯದಶಮೀ) ದೀಪಾವಳೀ, ಮತ್ತು ಹೋಳಿಹಬ್ಬ, ಇವು ಎಲ್ಲರಿಗೂ ಮುಖ್ಯವಾಗಿದ್ದರೂ ಕ್ರಮವಾಗಿ ಆ ನಾಲ್ಕು ಬ್ರಾಹ್ಮಣ, ಕ್ಷತ್ರೀಯ, ವೈಶ್ಯ ಮತ್ತು ಶೂದ್ರವರ್ಣದವರಿಗೆ ವಿಶೇಷವಾಗಿ ಮುಖ್ಯವಾಗಿದೆ ಎಂದು ಪೌತ್ತರೇಯರು ತಿಳಿಸುತ್ತಾರೆ. ಉಪಾಕರ್ಮವು ಶ್ರಾವಣ ಮಾಸದಲ್ಲಿ ಆಚರಿಸಲ್ಪಡುವ ಮುಖ್ಯವಾದ ಪರ್ವಗಳಲ್ಲಿ ಒಂದಾಗಿದೆ. ಉಪಾಕರ್ಮವು ನೈಮಿತ್ತಿಕ ಕರ್ಮವು ಪ್ರತಿವರ್ಷವೂ ನಿಯತವಾದ ದಿನದಲ್ಲಿ ಅವಶ್ಯವಾಗಿ ಆಚರಿಸಲೇಬೇಕಾದ ಪರ್ವ ಕರ್ಮವಾಗಿದೆ. ವೇದಾಧ್ಯಯನಕ್ಕೆ ಸಂಬಂಧ ಪಟ್ಟ ಪ್ರಶಸ್ತವಾದ ಮಂಗಲ ಕರ್ಮವಾಗಿದೆ. ಅಷ್ಟಾದಶ ಮಹಾ ಸಂಸ್ಕಾರಗಳಲ್ಲಿ ಇದೂ ಸಹ ಒಂದು ಎಂಬುದು ಕೆಲ ಮಹರ್ಷಿಗಳ ಮತ, ಸಂಸ್ಕಾರ ಪೂರ್ವಕವಾಗಿ ವೇದಗಳನ್ನು ಗ್ರಹಿಸುವ ಮತ್ತು ಪ್ರಾರಂಭಿಸುವ ಕರ್ಮವಾದ್ದರಿಂದ ಇದಕ್ಕೆ ಉಪಾಕರ್ಮ ಅಧ್ಯಾಯೋಪಾಕರ್ಮ, ಉಪಾಕರಣ, ವೇದಸ್ವೀಕಾರ ವೇದಾರಂಭಣ ಎಂಬ ಅನೇಕ ಹೆಸರುಗಳು ಇವೆ. ಶ್ರಾವಣಮಾಸದಲ್ಲಿ ಬರುವ ಮುಖ್ಯವಾದ ಪರ್ವವಾದ್ದರಿಂದ **"ಶ್ರಾವಣೀ"** ಎಂಬ ಹೆಸರು ಇದೆ. ಇದರೊಳಗೆ ಜನಿವಾರ ಬದಲಾಸುವ ಕ್ರೀಯೆ ಮುಖ್ಯವಾಗಿ ಬರುವುದರಿಂದ ಜನ ಸಾಮಾನ್ಯರು ಇದನ್ನು **"ಜನಿವಾರದ ಹಬ್ಬ"** ಎಂತಲೂ ಕರೆಯುವ ರೂಢಿ ಬಂದಿದೆ.

**ಉಪಾಕರ್ಮಕ್ಕೆ ಕಾಲನಿಯಮ ಮತ್ತು ಅಧಿಕಾರಿಗಳು:**

ಎಲ್ಲಾ ವೇದಶಾಖೆಗಳಿಗೆ ಸೇರಿದವರೂ ಈ ಪರ್ವವನ್ನು ಆಚರಿಸಬೇಕು. ಉಪನಯನ ಸಂಸ್ಕಾರ ಯಾರಿಗೆ ಆಗಿದೆಯೋ ಅವರೆಲ್ಲರೂ ಇದಕ್ಕೆ ಅಧಿಕಾರಿಗಳು. ಉಪಾಕರ್ಮವು ಬ್ರಹ್ಮಚಾರಿಗಳಿಗೆ ಮಾತ್ರ ಮುಖ್ಯ. ಇವರಿಗೆ ಅಷ್ಟು ಮುಖ್ಯವಲ್ಲ ಎಂದು ಕೆಲವರ ಅಂಬೋಣ! ಆದರೆ ಬ್ರಹ್ಮಚಾರಿ ಗೃಹಸ್ಥ, ಮತ್ತು ವಾನಪ್ರಸ್ಥ ಈ ಮೂವರಿಗೂ ಉಪಾಕರ್ಮದಲ್ಲಿ ಅನ್ವಯವುಂಟೆಂದು ಧರ್ಮಶಾಸ್ತ್ರಗಳಲ್ಲಿ ಹೇಳಿವೆ.

ಅಧೀಯೀತೆ ಗೃಹಸ್ಥೋಪಿ ನಿಯಮಾದ್ಬ್ರಹ್ಮ ಚಾರಿವತ್
(ವ್ಯಾಸಸ್ಮೃತಿ)
ಉಪಾಕರ್ಮ ತಥೋತ್ಸರ್ಗಂ ವನಸ್ಥಾ ನಾಮ ಪೀಷ್ಯತೇ!
ಧಾರಣಾಧ್ಯಯನಂ ಕೃತ್ವಾ ಗೃಹಿತಾಂ ಬ್ರಹ್ಮಚಾರಿಣಾಂ

ಇದು (ದೇವಲ ಸ್ಮೃತಿ) ಶ್ಲೋಕ.

ತಂದೆ ಅಥವಾ ತಾಯಿ ಮೃತರಾದಲ್ಲಿ ಆ ವರ್ಷ ಕರ್ತೃವಿಗೆ ಉಪಾಕರ್ಮವಿಲ್ಲ. ಜಾತಾಶೌಚ ಮತ್ತು ಮೃತಾಶೌಚ ದೋಷದಲ್ಲಿರುವಾಗ ಉಪಾಕರ್ಮ ಮಾಡಬಾರದು. (ಗಮನಿಸಿ-ಜಾತಾಶೌಚ ಮತ್ತು ಮೃತಾಶೌಚ ಇವು ಸಮಾನಾಂತರ ಅಶೌಚಗಳು) ಮಲಮಾಸದಲ್ಲಿ ಉಪಾಕರ್ಮವನ್ನು ಮಾಡುವುದು ಶುಭಕರವಲ್ಲ. ಪ್ರಥಮೋಪಾಕರ್ಮವನ್ನು ಮಲಮಾಸದಲ್ಲಿ ಮಾಡಲೇಬಾರದು.

ಋಗ್ವೇದ ಯಜುರ್ವೇದ, ಸಾಮವೇದ, ಮತ್ತು ಅಥರ್ವವೇದಗಳಿಗೆ ಕ್ರಮವಾಗಿ ಬೃಹಸ್ಪತಿ, ಶುಕ್ರ, ಮಂಗಳ ಮತ್ತು ಬುಧ ಇವರು ಅಧಿಪತಿಗಳು. ಆಯಾ ಗ್ರಹಗಳಿಗೆ ಶಕ್ತಿ ಇರುವ ಸಮಯದಲ್ಲಿಯೇ ಆಯಾ ಶಾಖೆಯವರು ಉಪಾಕರ್ಮವನ್ನು ಮಾಡಿಕೊಳ್ಳುವುದು ಶುಭಕರ. ಆಪಸ್ತಂಬರ, ಆಶ್ವಲಾಯನ, ಯಾಜ್ಞವಲ್ಕ್ಯರ ಭೋಧಾಯನ, ಗೌತಮ, ಇತ್ಯಾದಿ ಋಷಿಗಳ ಮತದಂತೆ ಶ್ರಾವಣ ಮಾಸದ ಪೂರ್ಣಿಮಾ ತಿಥಿಯಂದು

ಶ್ರವಣಾನಕ್ಷತ್ರ ಅಥವಾ ಹಸ್ತ ನಕ್ಷತ್ರದಿಂದ ಕೂಡಿದ ಪಂಚಮೀ ಯಲ್ಲಿ ಉಪಾಕರ್ಮ ಮಾಡಿಕೊಳ್ಳಬೇಕೆಂದು ಬಹು ಋಷಿಗಳ ಏಕಮತವಿದೆ.

ಋಗ್ವೇದಿಗಳಿಗೆ ಮತ್ತು ಯಜುರ್ವೇದಿಗಳಿಗೆ ಸಾಮಾನ್ಯ ವಾಗಿ ಶ್ರಾವಣಮಾಸವು ಮತ್ತು ಸಾಮವೇದಿಗಳಿಗೆ ಭಾದ್ರಪದ ಮಾಸವು ಉಪಾಕರ್ಮಕ್ಕೆ ವಿಹಿತವೆಂಬ ವ್ಯವಸ್ಥೆ ಇದೆ. ಇಲ್ಲಿ ಮುಖ್ಯ ವಿಷಯ ಗಮನಿಸಬೇಕು. ಮಳೆಯಿಂದ ಹೊಸ ಔಷಧಿ ಗಳು ಹುಟ್ಟಿರುವ ಸಮಯವು ಉಪಾಕರ್ಮಕ್ಕೆ ಪ್ರಶಸ್ತವು. ಶ್ರಾವಣದಲ್ಲಿ ಅಶೌಚ, ಮಲಮಾಸ ಇತ್ಯಾದಿ ಗುರುಶುಕ್ರರ ಅಸ್ತ ಮಾನವಾಗಿದ್ದರೆ ಭಾದ್ರಪದ ಮಾಸದ ಪೂರ್ಣಿಮೆಯಲ್ಲಿ ಉಪಾ ಕರ್ಮ ಮಾಡಬಹುದು ಎಂದು ಆಪಸ್ತಂಬರ ಮತ, ಆಗಲೂ ಅನಾನುಕೂಲವಿದ್ದರೆ ಬೇರೆ ಶುದ್ಧವಾದ ದಿನದಲ್ಲಿ (ಭೂಮಿ ಯಲ್ಲಿ ಅಗ್ನಿ ಇರತಕ್ಕದ್ದು) ಉಪಾಕರ್ಮವನ್ನು ಆಚರಿಸಬೇಕು ಎಂಬುದು ಶಾಸ್ತ್ರಗಳ ವಚನ ಉಪನಯನದ ಅನಂತರ ಬರುವ ಮೊದಲನೇ ಉಪಾಕರ್ಮಕ್ಕೆ ಪ್ರಥಮೋಪಾಕರ್ಮ ಎಂದು ಹೆಸರು. ಆ ಪ್ರಥಮೋಪಾಕರ್ಮ ಮಾಡಿಕೊಂಡ ನಂತ ರವೇ ಬ್ರಹ್ಮಾಚಾರಿಗೆ ಬ್ರಹ್ಮಯಜ್ಞ ಮಾಡುವ ಅಧಿಕಾರಿ ಉಂಟಾ ಗುತ್ತದೆ. ಅನಂತರ ಪ್ರತಿ ವರ್ಷವೂ ಉಪಾಕರ್ಮ ಮಾಡಿ ಕೊಳ್ಳುವುದರಿಂದ ನಾವು ಮಾಡಿರುವ ವೇದಾಧ್ಯಯನವು ಹಸನಾಗುತ್ತದೆ. ಅದರಲ್ಲಿ ಅಭ್ಯುದಯಕ್ಕೆ ಕಾರಣವಾದ ಹೊಸ ತನ ಉಂಟಾಗುತ್ತದೆ. ಹಳಸಿ ಹೋಗಿದ್ದ ಅಧ್ಯಯನ ಪುನ ರ್ನವೀಕೃತವಾಗುತ್ತದೆ. (ಆತ ವೇದಾಧ್ಯಯನದಲ್ಲಿರುವುದು. ಗಮನಾರ್ಹ) ಎಂದು ಶಾಸ್ತ್ರಗಳು ಸಾರುತ್ತವೆ. ಉಪಾಕರ್ಮ ಮಾಡಿಕೊಳ್ಳದಿದ್ದರೆ ಮೇಲ್ಕಂಡ ಲಾಭ ಸಿಗುವುದಿಲ್ಲ ಎಂಬುದು ದಿಟ

**ವೇದಗಳ ಅಧ್ಯಯನ ಸಂಬಂಧಪಟ್ಟ ಮತ್ತೊಂದು ಮುಖ್ಯವಾದ ಕರ್ಮ ಉತ್ಸರ್ಜನ: ಉತ್ಸರ್ಜನ ಎಂದರೇನು?**

ಉತ್ಸರ್ಜನ ಅಥವಾ ಉದ್ಭಾಸನ ಎಂದರೆ ಬಿಟ್ಟು ಕೊಡು ವುದು ಎಂದರ್ಥ.ಏನನ್ನು ಬಿಟ್ಟು ಕೊಡುವುದು? ಎಂದರೆ ವೇದ ಗಳ ಅಧ್ಯಯನವನ್ನು ಉಪಾಕರ್ಮದ ದಿವಸ ಋಷಿ ದೇವ ತಾದಿಗಳಿಗೆ ಪೂಜಿಸಿ ವಿಧಿಪೂರ್ವಕವಾಗಿ ಪ್ರಾರಂಭಿಸಿದ ವೇದ ವನ್ನು ಕೆಲವು ಕಾಲದವರೆಗೆ ನಿರಂತರವಾಗಿ ಅಧ್ಯಯನ ಮಾಡುತ್ತಿದ್ದು ಅದನ್ನು ತಾತ್ಕಾಲಿಕವಾಗಿ ವಿಸರ್ಜನೆ ಮಾಡಿ ಅಧ್ಯ ಯನ ಕಾಲವನ್ನು ಸೀಮಿತಗೊಳಿಸುವುದು. ಆ ಉಳಿಕೆಯ ಸಮಯವನ್ನು ವ್ಯರ್ಥ ಮಾಡದೆ ಆ ದಿನಗಳಲ್ಲಿ ವೇದಾಂಗ ಶಾಸ್ತ್ರಗಳ ವಿಶೇಷವಾದ ಅಧ್ಯಯನದಿಂದ ಆವೃತ್ತಿಗೊಳಿಸ ಬೇಕು. ಅನಂತರ ಉಪಾಕರ್ಮದ ದಿನದಲ್ಲಿ ಮತ್ತೆ ವೇದಗಳ ಅಧ್ಯಯನವನ್ನು ವಿಧಿಯುಕ್ತ ಪ್ರಾರಂಭಿಸಬೇಕು. ಹೀಗೆ ಶಾಸ್ತ್ರಗಳ ವಿಶೇಷವಾದ ಅಧ್ಯಯನಕ್ಕಾಗಿ ವೇದಗಳ ನಿರಂತರ ವಾದ ಅಧ್ಯಯನಕ್ಕೆ ಮಂಗಲವಾದ ಉದ್ಘಾಟನೆಯನ್ನು ಮಾಡುವ ಮುಖ್ಯ ಕರ್ಮವೇ ಉತ್ಸರ್ಜನೆ.


ಉತ್ಸರ್ಜನ ಕರ್ಮದಲ್ಲಿ ಪ್ರಥಮವಾಗಿ ಗಣಪತಿ ಸ್ಮರಣೆ ಅಗ್ನಿಸ್ಥಾಪನೆ ಸಾವಿತ್ರ್ಯಾದಿ ಹವನ ಅಗ್ನಿಂ ಅಪ್ಟೃಣ ಸೂರ್ಯಾದಿ - ಚರುಹವನ, ಗಾಯತ್ರೀ ಮಂತ್ರ ಪೂರ್ವಕ ನಾಲ್ಕು ವೇದ ವೇದಾಂಗದ ಆ ವಿಭಾಗವನ್ನು ಪಠಿಸಿ ನಮೋ ಬ್ರಹ್ಮಣೆ ಮೂರು ಬಾರಿ ಹೇಳಿ **"ಓಂ ಸರ್ವೇ ಉತ್ಸೃಷ್ಟಾವೈವೇದಾಃ"** (ವೇದಗಳ ಉತ್ಸ ರ್ಜನೆ ಆಯಿತು)ಎಂದು ಅನುಸಂಧಾನ ಮಾಡಿ, ಭಸ್ಮ ಗೋಮಯ ಮೃತ್ತಿಕಾಸ್ನಾನ, ನಿವೀತಿಯಿಂದ ಋಷಿ ಪೂಜನೆ, ಋಷ್ಯಾದಿ ತರ್ಪಣ, ಬ್ರಹ್ಮಯಜ್ಞ ಪೂರ್ವಕ ಸ್ವಪಿತೃತರ್ಪಣ, ಅನಂತರ ಯಮಾದಿ ಹದಿನಾಲ್ಕು ದೇವತೆಗಳಿಗೆ ತರ್ಪಣ ಎದ್ದು ನಿಂತು ದಕ್ಷಿಣಕ್ಕೆ ಮುಖಮಾಡಿ ಕೈಯನ್ನು ಮೇಲಕ್ಕೆತ್ತಿ **"ಯಮೋ ನಿಹನ್ತಾ"** ಈ. ಶ್ಲೋಕ ಹತ್ತು ಬಾರಿ ಪಠಣ ಮಳೆ ಸಮೃದ್ಧಿಗಾಗಿ ಪರ್ಜನ್ಯ ಸೂಕ್ತ ಪಠಣ, ಋಷಿಗಳನ್ನು ಜಲದಲ್ಲಿ ವಿಸರ್ಜನೆ, ವೇದಗಳನ್ನು ಉದ್ದೇಶಿಸಿ ಬ್ರಾಹ್ಮಣ ಭೋಜನ ಮಾಡಿಸುವುದು.

ಇನ್ನು ಉಪಾಕರ್ಮದಲ್ಲಿ ಸಾವಿತ್ರ್ಯಾದಿ ಹೋಮ. ಅಖಂಡವಾದ ಅಕ್ಕಿ ಜವೆ ಗೋಧಿಗಳ ಹಿಟ್ಟನ್ನು ಹಸುವಿನ ಮೊಸರಿನಲ್ಲಿ ಬೆರೆಸಿ-(ಕಲಿಸಿ) ಅಗ್ನಿಂ ಅಸ್ತ್ರಣಸೂರ್ಯಾದಿ ಪ್ರಧಾನ ಹೋಮ ಅನಂತರ ಆಚಾರ್ಯ ಶಿಷ್ಯರು ಮೊಸರಿ ನೊಂದಿಗೆ ಕಲಸಿದ ಹಿಟ್ಟನ್ನು ಪ್ರಸಾದರೂಪವಾಗಿ ಹಲ್ಲುಗಳಿಗೆ ಸೋಕಿಸಿದಂತೆ ಭಕ್ಷಿಸಿ ನಂತರದಲ್ಲಿ ಯಜ್ಞೋಪವೀತ ಹೋಮ, ದಾನ, ಯಜ್ಞೋಪವೀತ ಧರಿಸಿ ಉಪಾಕರ್ಮದ ಅಂಗವಾಗಿ ಬ್ರಹ್ಮ ಯಜ್ಞವನ್ನು ಪೂರೈಸಿ "ಓಂ ಸರ್ವೇ ಉಪ ಕೃತಾ ವೈ ವೇದಾಃ"(ವೇದಗಳ ಉಪಾಕರ್ಮ)ಆಯಿತು ಎಂದು ಪೋಷಿಸಿ ಪ್ರಾಯಶ್ಚಿತ ಹೋಮ ಸಮಾಪ್ತಿ ಮಾಡಿ ಬ್ರಾಹ್ಮಣ ಭೋಜನ ಮಾಡಿಸಬೇಕು. ಎಲ್ಲಾ ವೇದದವರಿಗೂ ಇದು ಸಾಮಾನ್ಯ ಪ್ರಯೋಗ ಕ್ರಮ.



# ಹರಿಕಥಾಮೃತ ಸಾರ ಮಹಿಮೆ ಅಪಾರ

-ಶ್ರೀಮತಿ ಪ್ರಿಯ ಪ್ರಾಣೇಶ ಹರಿದಾಸ
8050436752



**ಹಿಂದಿನ ಸಂಚಿಕೆಯಿಂದ**

**ಬಿಂಬೋಪಾಸನ ಸಂಧಿ**

ಈ ಬಿಂಬೋಪಾಸನ ಸಂಧಿಗೆ ಬಿಂಬ ಪ್ರತಿಬಿಂಬ ಭಾವ ಸಂಧಿ ಅಥವಾ ಬಿಂಬ ಪ್ರಕರಣ ಸಂಧಿ ಹೆಸರು ಉಂಟು ಬಿಂಬೋಪಾಸನ ಸಂಧಿಯಲ್ಲಿ ಜೀವ-ಪರಮಾತ್ಮ ಸಂಬಂಧವನ್ನು "ಬಿಂಬ-ಪ್ರತಿಬಿಂಬ" ರೂಪದಲ್ಲಿ ವಿವರಿಸಲಾಗಿದೆ. ಬಿಂಬ=ಪರಮಾತ್ಮ (ಶ್ರೀಹರಿ) ಆತನು ನಿಜ ಸ್ವರೂಪ, ಸ್ವತಂತ್ರ, ಸಂಪೂರ್ಣ ಎಲ್ಲದರ ಮೂಲ ಕಾರಣ ಶ್ರೀಹರಿಯ ರಾಮ ಕೃಷ್ಣಾದಿ ಅವತಾರಗಳು ಶ್ರೀಹರಿಯ ಸ್ವಾಂಶ ಅವತಾರಗಳು. ಶ್ರೀಹರಿಯ ಸ್ವಾಂಶದಿಂದ (ಪರಮಾತ್ಮನ ಸ್ವರೂಪದಿಂದಲೇ ಹೊರ ಹೊಮ್ಮಿದ ಅಂಶ)ಪ್ರೇರಕನಾಗಿ ಜೀವರಲ್ಲಿ ಇರುವನು. ಆದ್ದರಿಂದ ಭಗವಂತನು ಬಿಂಬ ಮತ್ತು ಜೀವರು ಪ್ರತಿಬಿಂಬರು. ಹೀಗೆ ಬಿಂಬ ಪ್ರತಿಬಿಂಬವನ್ನು ತಿಳಿದು ಪೂಜಿಸಬೇಕು ಆರಾಧಿಸಬೇಕು.

ಇದು ಜೀವ ಮತ್ತು ಪರಮಾತ್ಮನ (ಬಿಂಬ ಮತ್ತು ಪ್ರತಿಬಿಂಬ) ಸಂಬಂಧ, ಧ್ಯಾನ, ಭಗವಂತನ ರೂಪಗಳು ಮತ್ತು ಮುಕ್ತಿಯ ಮಾರ್ಗವನ್ನು ವಿವರಿಸುವ ತತ್ತ್ವಶಾಸ್ತ್ರೀಯ (ಆಧ್ಯಾತ್ಮಿಕ) ಸಂಧಿಯಾಗಿದೆ.

ಭಗವಂತನು ಸರ್ವವ್ಯಾಪಿಯಾಗಿದ್ದು , ಜೀವದ ಒಳಗೆ 'ಬಿಂಬ' ರೂಪದಲ್ಲಿ ನೆಲೆಸಿದ್ದಾನೆ ಎಂಬುದನ್ನು ತಿಳಿಸಿಕೊಡುತ್ತದೆ. ಸಾಧಕನು ಭಗವಂತನ ಸಾಕ್ಷಾತ್ಕಾರವನ್ನು ಹೇಗೆ ಪಡೆಯಬೇಕು ಎಂಬ ಉಪಾಸನಾ ವಿಧಾನವನ್ನು ಈ ಸಂಧಿ ವಿವರಿಸುತ್ತದೆ.

ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಕೇಳುವೆ
ಪರಮ ಭಗವದ್ಭಕ್ತರು ಇದನಾದರದಿ ಕೇಳುವುದು ॥ ಪ॥

ಮುಕ್ತ ಬಿಂಬನು ತುರಿಯ ಜೀವನ್ಮುಕ್ತ ಬಿಂಬನು ವಿಶ್ವ
ಶ್ರುತಿ ಸಂಸಕ್ತ ಬಿಂಬನು ತೈಜಸನು ಅಸೃಜ್ಯರಿಗೆ ಪ್ರಾಜ್ಞ
ಶಕ್ತನಾದರು ಸರಿಯೆ ಸರ್ವ ಉಗ್ರಕ್ತ ಮಹಿಮನು
ದುಃಖ ಸುಖಗಳ ವಕ್ತೃ ಮಾಡುತಲಿಪ್ಪ ಕಲ್ಪಾಂತದಲಿ ಬಪ್ಪರಿಗೆ ॥1॥

ಭಗವಂತನು ಮುಕ್ತರಿಗೆ ಬಿಂಬ ರೂಪಿ ಭಗವಂತ "ತುರ್ಯ" ರೂಪದಿಂದ ಇರುತ್ತಾನೆ. ಅಮುಕ್ತರಿಗೆ (ಎಂದರೆ ಲಿಂಗದೇಹ ಭಂಗವಾಗದೇ ಜೀವನಮುಕ್ತರಾದವರು)"ವಿಶ್ವ" ರೂಪದಿಂದ ಇರುವನು. ಸಂಸಾರಿಗಳಿಗೆ ತೈಜಸ ರೂಪದಿಂದ ಇರುವನು. ಈ ಕಲ್ಪದಲ್ಲಿ ಸೃಷ್ಟಿಗೆ ಬಾರದ ಅಸೃಜ್ಯರಿಗೆ ಪ್ರಾಜ್ಞ ರೂಪದಿಂದ ಇರುವನು. ಸಮರ್ಥನಾದ ಭಗವಂತ ಕಲ್ಪದ ಕೊನೆಯಲ್ಲಿ ಸೃಷ್ಟಿಗೆ ಬರುವ ಜೀವರಿಗೆ ಯೋಗ್ಯತಾನುಸಾರ ಸುಖದುಃಖ ವ್ಯಕ್ತ ಮಾಡಲಾರದೇ ಇರುವನು. ಲಯಕಾಲದಲ್ಲಿ ಜೀವರು ಸುಖ ದುಃಖದ ಅನುಭವ ಇಲ್ಲದೇ ಮಲಗಿರುತ್ತಾರೆ. ಆಗಲೂ ಅನುಭವ ಕೊಡುವ ಸಾಮರ್ಥ್ಯ ಭಗವಂತನಿಗೆ ಇರುತ್ತದೆ. ವಾಯುದೇವರಿಗೆ ಮಾತ್ರ ಪ್ರಳಯ ಕಾಲದಲ್ಲೂ ಜ್ಞಾನ ನೀಡಿರುತ್ತಾನೆ.

ಭಗವಂತನ ಆಟ ಎಷ್ಟು ವಿಚಿತ್ರ ಅಪರಂಪರ ಎಂದರೆ ಓಂಕಾರ ರೂಪಿಯಾದ ಭಗವಂತ "ಅನ್ನ" ನಾಮಕನ್ನಾಗಿ ಶ್ರೀಹರಿಯು "ಅ" ಅಕ್ಷರ ಪ್ರತಿಪಾದ್ಯನಾಗಿ ಶಿವ ರೂಪದಿಂದ ಅಧಿಷ್ಠಾನವಾದ ಪ್ರಕೃತಿಯಲ್ಲಿ ಶಬ್ದದ ಅಭಿಮಾನಿ ದೇವತೆಯಾದ ಶ್ರೀದೇವಿಯಲ್ಲಿ ಅವ್ಯಕ್ತನಾಗಿ "ಪ್ರಾಜ್ಞ" ರೂಪದಿಂದ ಇರುವನು. ತಿನ್ನುವ ಪ್ರತಿಯೊಂದು ವಸ್ತು ಪ್ರಕೃತಿಯಿಂದ ಇರುವುದು ಆದ್ದರಿಂದ ಅಲ್ಲಿ ಹರಿಯು ಅನ್ನ ನಾಮಕದಿಂದ ಇರುವನು.

ಶ್ರೀಹರಿಯು "ಅನ್ನದ" ನಾಮಕನಾಗಿ "ಉ" ಅಕ್ಷರ ಪ್ರತಿಪಾದ್ಯನಾಗಿ ವಿಷ್ಣು ರೂಪದಿಂದ "ವಿಶ್ವ" ರೂಪನಾಗಿ ಅನೇಕ ರೂಪಗಳಿಂದ ಭಿನ್ನ ಭಿನ್ನ ಜೀವರಲ್ಲಿದ್ದು ಅನ್ನ ಕೊಡುವವನು. 'ಅನ್ನಾದ' ನಾಮಕನಾಗಿ "ಮ" ಅಕ್ಷರ ಪ್ರತಿ ಪಾದ್ಯದಿಂದ ಬ್ರಹ್ಮಾದಿ ದೇವತೆಗಳಲ್ಲಿ ಬ್ರಹ್ಮ ದೇವತೆಯಿಂದ ಇದ್ದು "ತೈಜಸ" ರೂಪದಿಂದ ಜೀವರಲ್ಲಿ ಅನ್ನ ಭುಂಜಿಸುವನು. ಹಾಗೆ ಆದ್ದರಿಂದ ಶ್ರೀಹರಿಯು ಪೂರ್ಣಾನಂದ, ಜ್ಞಾನಾನಂದನಾಗಿ ಸ್ವರಮಣನಾಗಿ ಇರುವನು ನಾದಾದಿಗಳ ಚಿಂತನೆಯಲ್ಲಿ ನಾದದಲ್ಲಿ ಶಬ್ದವಾಚ್ಯನಾಗಿ ಭೋಜನ ಶಬ್ದದಲ್ಲಿ ಇರುವನು.

ಘೋಷದಲ್ಲಿ ಘೋಷ ಶಬ್ದ ವಾಚ್ಯನಾಗಿ ಶಾಸ್ತ್ರಾನುವಾದದಲ್ಲಿ ಇರುವನು. ಶಾಂತದಲ್ಲಿ ಶಾಂತ ಶಬ್ದ ವಾಚ್ಯನಾಗಿ ಜಠರಾಗ್ನಿಯಲ್ಲಿರುವನು. ಅತಿಶಾಂತದಲ್ಲಿ ಅತಿ ಶಾಂತ ಶಬ್ದವಾಚ್ಯನಾಗಿ ವೇದಾಧ್ಯಯನದಲ್ಲಿ, ಪುತ್ರರಲ್ಲಿ, ಸಹೋದರರಲ್ಲಿ ಮತ್ತು ಆಶ್ರಿತರಲ್ಲಿ ಇರುವನು ಹೀಗೆ ಅಕಾರಾದಿ ಎಂಟು ರೂಪಗಳನ್ನು ಸದಾ ಧ್ಯಾನಿಸಬೇಕು.

ಭಗವಂತನು ತನ್ನ ಮೂರು ರೂಪತ್ರಯಗಳಿಂದ ಮೂರು ಸ್ಥಳಗಳಾದ ಮಹತ್ತತ್ವದಲ್ಲಿ, ಬ್ರಹ್ಮಾಂಡದಲ್ಲಿ ಮತ್ತು ಜೀವರಲ್ಲಿದ್ದು, ಸ್ತ್ರೀ ಪುರುಷರನ್ನು,ತನ್ಮಾತ್ರಗಳನ್ನು, ಹನ್ನೊಂದು ಇಂದ್ರಿಯ ಗಳನ್ನು, ಭೂತಗಳನ್ನು ನಿರ್ಮಿಸುವುದು. ಜೀವ ಶರೀರಗತ ಶ್ರೀ ಹರಿಯು ಲಕ್ಷ್ಮೀ ಸಹಿತನಾಗಿ ಪುರುಷ ರೂಪದಿಂದ. ತ್ರಿಗುಣ ಜೀವರನ್ನು ಅರಿಷಡ್ ವರ್ಗಗಳ ಆಸೆ ಹೆಚ್ಚಿಸಿ ಅಷ್ಟ ಮದಗಳನ್ನು ಕೊಟ್ಟು ಹುಟ್ಟು ಸಾವು,ಪಾಪಪುಣ್ಯ, ಜಯಾಪಜಯ ಮುಂತಾದವುಗಳನ್ನು ಕೊಡುವನು. ಮೂರು ಗುಣಗಳಿಂದ ಕೂಡಿದ ದೇಹಕ್ಕೆ ಸಂಸಾರದಲ್ಲಿ ಕರ್ಮ ಮಾಡಿಸುವನು. ನವವಿಧ ಭಕ್ತಿಯಲ್ಲಿರುವ ಭಕ್ತರನ್ನು ಮೋಚನ ಮಾಡುವನು.

ಸ್ತ್ರೀ ಹಾಗೂ ಪುರುಷ ರೂಪದಲ್ಲಿ ಶ್ರೀ ಹರಿಯು ಸಾಶನ ಭೋಜನದಿಂದ ಸಹಿತವಾಗಿ ಇರುವನು. ಪ್ರತಿಮಾ ಹಾಗೂ ಸಾಲಿಗ್ರಾಮದಲ್ಲಿ ಅನಶನ ಭೋಜನ ರಹಿತನಾಗಿ ರೂಪದಿಂದಲೂ ಇದ್ದರೂ ತನ್ನ ಸ್ವಾಖ್ಯ ರೂಪದಿಂದ ಅನ್ನವನ್ನು ಪರಿಶುದ್ಧವನ್ನಾಗಿ ಮಾಡುವನು. ಹೀಗೆ ಉಪಾಸನೆ ಮಾಡುವ ಭಕ್ತರಿಗೆ ತನ್ನ ನಿಜರೂಪ ತೋರಿಸುವನು.

ಕಮಲಸಂಭವ ಜನಕ ಜಡ ಜಂಗಮರೊಳಗೆ ನೆಲೆಸಿರ್ದು ಕ್ರಮವ್ಯುತ್ಕ್ರಮದಿ ಕರ್ಮವ ಮಾಡಿ ಮಾಡಿಸುತಿಪ್ಪ ಬೇಸರದೆ ।
ಕ್ಷಮಃ ಕಾಮ ಕ್ಷಮೀಹನಾಹ್ವಯ ಸುಮನಸಾಸುರರೊಳಗಹಮ್ಮಮ
ನ ಮಮ ಎಂದೀ ಬಗೆಯುಪಾಸನೆಗೈವ ಪ್ರಾಂತದಲಿ ॥

ಶ್ರೀ ಹರಿಯು ಜಡ ಚೇತನರಲ್ಲಿ ಬೇಸರಿಸದೇ ನಿರಂತರ ಕರ್ಮ ಮಾಡಿಸುವನು. "ಕ್ಷಮಃ ಕ್ಷಾಮಃ ಸಮೀಹನ" ನಾಗಿ ಅಂದರೆ ಸರ್ವಕಾರ್ಯ ಸಮರ್ಥನ್ನಾಗಿ, ಸರ್ವಧಾರಕನಾಗಿ, ಸತ್ಯ ಸಂಕಲ್ಪನಾಗಿ ಅಸುರರಲ್ಲಿ ಅಹಂ-ಮಮ ಎಂದು, ದೇವತೆಗಳಲ್ಲಿ ನಾಹಂ-ನಮಮ ಎಂದು ಇಬ್ಬರಲ್ಲೂ ನಿಂತು ಉಪಾಸನೆ ಮಾಡಿಸುತ್ತಿರುವನು.

ಪ್ರಕೃತಿಯಲ್ಲಿಯೂ, ಮೂಕ, ಕಿವುಡ, ಕುರುಡ ಅವರಲ್ಲಿಯೂ ಇರುವನು. ಇವನು ಅನಂತ ಗುಣ ಮಹಿಮೆ ಇವೆ. ಲೋಕದ ಸ್ವಾಮಿಯಾಗಿ ಎಲ್ಲ ಜನರನ್ನು ಕಾಪಾಡುತ್ತಿರುವನು. ಆದ್ದರಿಂದ ಮನೋ ಅಭಿಮಾನಿ ದೇವತೆಯಾದ ರುದ್ರ ದೇವರನ್ನು ಸದಾ ಸ್ತುತಿಸಬೇಕು. ಹಣ, ಸತಿ ಮಕ್ಕಳು, ಲೋಹ ಹೀಗೆ ಪ್ರತಿಯೊಂದರಲ್ಲಿ ಭಗವಂತನ ಚಿಂತನೆ ಮಾಡಿದರೆ ಯಾವುದರಿಂದಲೂ ದುಃಖವಾಗುವುದಿಲ್ಲ. ಭಗವಂತನು ಚತುಷ್ಪಾದನು.

ಜ್ಯೋತಿ ರೂಪಗೆ ಪ್ರತಿಮೆಗಳು ಸಾಂಕೇತಿಕ ಆರೋಪಿತ
ಸುಪೌರುಷ ಧಾತು ಸಪ್ತಕ ಧೈರ್ಯ ಶೌರ್ಯ ಔದಾರ್ಯ ಚಾತುರ್ಯ
ಮಾತು ಮಾನ ಮಹತ್ವ ಸಹನ ಸುನೀತಿ ನಿರ್ಮಲ ದೇಶ ಬ್ರಾಹ್ಮಣ
ಭೂತ ಪಂಚಕ ಬುದ್ಧಿ ಮೊದಲಾದ ಇಂದ್ರಿಯ ಸ್ಥಾನ ॥21॥

ಭಗವಂತ ಜ್ಯೋತಿ ರೂಪನಾಗಿ ಸಾಂಕೇತಿಕವಾಗಿ (ಆಹಿತ ಪ್ರತಿಮೆ) ಮತ್ತು ಆರೋಪಿತ (ಸ್ವಯಂ ವ್ಯಕ್ತ ಪ್ರತಿಮೆ) ಎಂಬ ಎರಡು ವಿಧ ಪ್ರತಿಮೆಗಳಿವೆ. ಹರಿಯ ಸಾಂಕೇತಿಕವಾದ ಲಕ್ಷಣಗಳೆಂದರೆ ಪೌರುಷ, ಸಪ್ತಧಾತು, ಧೈರ್ಯ, ಶೌರ್ಯ, ಔದಾರ್ಯ, ಚಾತುರ್ಯ, ವಾಕ್ಪಟುತ್ವ, ಸನ್ಮಾನ ಮಹತ್ವ, ಸಹನೆ ಉತ್ತಮ ನೀತಿ, ಪರಿಶುದ್ಧ ಪರಿಸರ, ಬ್ರಾಹ್ಮಣ ಪಂಚಭೂತಗಳು, ಬುದ್ಧಿ ಇಂದ್ರಿಯಗಳು ಇತ್ಯಾದಿಗಳು ಇವೆ.

ಅಡವಿಯಲ್ಲಿನ ಗಿಡಮರಗಳು ಹಣ್ಣು ಹೂ ಕೊಡುತ್ತದೆ. ಇದೆಲ್ಲವೂ ಸೃಷ್ಟಿಯಲ್ಲಿ ಆಗುವಂತಹ ಕಾರ್ಯಗಳನ್ನು ಭಗವಂತ ಮೂರು ಲೋಕದ ಒಡೆಯನಾದ ಶ್ರೀಹರಿ ರಕ್ಷಣೆ ಪೋಷಣೆ ಮಾಡುತ್ತಿರುತ್ತಾನೆ. ಭಗವಂತ ಭಕ್ತರ ಸದಾ ಹತ್ತಿರದಲ್ಲಿದ್ದು ಯೋಗ್ಯತಾನುಸಾರ ಸರ್ವವನ್ನು ನೀಡುವನು. ಇವನ ವಿಚಿತ್ರ ಆಟವೆಂದರೆ ದೇವತೆಗಳಿಗೆ ಬೇಡದಲೇ ಕೊಡುತ್ತಾನೆ. ಮನುಷ್ಯನಿಗೆ ಬೇಡಿದಾಗ ಕೊಡುತ್ತಾನೆ, ಇನ್ನು ಹಲವರಿಗೆ ಧರ್ಮ ಕಾರ್ಯಗಳನ್ನು ಅವರು ಮಾಡಿದರು ಐಹಿಕ ಫಲ ಕೊಟ್ಟು ತಮಸ್ಸಿಗೆ ಕಳಿಹಿಸುತ್ತಾನೆ.

ಗೋಪನೀಯ ಭವಾಂಧಕಾರಕೆ ದೀಪವಚ್ಚಿಗೆ
ಸಕಲ ಸುಖ ಸದನೋಪರಿಗ್ರಹವೆನಿಸುತಿಪ್ಪುದು ಹರಿಕಥಾಮೃತವು।
ಗೋಪತಿಜಗನ್ನಾಥ ವಿಠಲ ಸಮೀಪದಲಿ ನೆಲೆಸಿರ್ದು
ಭಕ್ತರನು ಅಪವರ್ಗರ ಮಾಡುವನು ಮಹದುಃಖ ಭಯದಿಂದ


ಈ ಸಂಸಾರ ಎಂಬ ಕತ್ತಲೆಯಲ್ಲಿ ಹರಿಕಥಾಮೃತಸಾರು ಸಕಲ ಸುಖ ಸಾಧನಕ್ಕೆ ದೀಪವಾಗಿದೆ. ಆದ್ದರಿಂದ ಜಗನ್ನಾಥ ವಿಠಲನು ಭಕ್ತರ ಸಮೀಪದಲ್ಲಿ ಇರಬೇಕು. ಯಾರು ಅವನನ್ನು ನಿತ್ಯದಲ್ಲಿ ಸ್ಮರಣೆ ಮಾಡುವರೋ ಮಹಾ ದುಃಖದ ಭಯದಿಂದ ಬಿಡುಗಡೆ ಮಾಡುತ್ತಾನೆ.

**(ಮುಂದುವರೆಯುತ್ತದೆ)**



# ಶ್ರೀ ರಾಘವೇಂದ್ರ ಸ್ವಾಮಿಗಳ ಮಹಿಮೆ

– ಡಾ॥ ರವೀಂದ್ರ ಅ. ಕುಷ್ಟಗಿ
98805 92806




ಭಾರತದ ಆಧ್ಯಾತ್ಮಿಕ ಇತಿಹಾಸವನ್ನು ಅಲಂಕರಿಸಿದ ಶ್ರೀ ರಾಘವೇಂದ್ರ ಸ್ವಾಮಿಗಳ ಹೆಸರು ಅಪೂರ್ವ ಪ್ರಕಾಶದಿಂದ ಕಂಗೊಳಿಸುತ್ತದೆ. **"ಕಲಿಯುಗ ಕಲ್ಪವೃಕ್ಷ"** ಮತ್ತು **"ಕರುಣಾ ಸಾಗರ"** ಎಂದು ಭಕ್ತರಿಂದ ಪೂಜಿಸಲ್ಪಡುವ ಶ್ರೀರಾಘವೇಂದ್ರ ಸ್ವಾಮಿಗಳು ತಮ್ಮ ಉಪದೇಶಗಳು, ಪಾಂಡಿತ್ಯ, ದಯೆ ಹಾಗೂ ಅಲೌಕಿಕ ಅನುಗ್ರಹದ ಮೂಲಕ ಕೋಟ್ಯಾಂತರ ಭಕ್ತರಿಗೆ ಇಂದಿಗೂ ಸ್ಫೂರ್ತಿಯ ಮೂಲವಾಗಿದ್ದಾರೆ. ಬೃಂದಾವನ ಪ್ರವೇಶ ಮಾಡಿ ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲ ಕಳೆದಿದ್ದರೂ ಅವರ ದಿವ್ಯ ಸಾನ್ನಿಧ್ಯವನ್ನು ವಿಶ್ವದಾದ್ಯಂತದ ಭಕ್ತರು ಇಂದಿಗೂ ಅನುಭವಿಸುತ್ತಿದ್ದಾರೆ.

ಶ್ರೀರಾಘವೇಂದ್ರ ಸ್ವಾಮಿಗಳು ಹದಿನಾರನೇ ಶತಮಾನದಲ್ಲಿ ವೇದಾಧ್ಯಯನ ಹಾಗೂ ಆಧ್ಯಾತ್ಮಿಕ ಪರಂಪರೆಗೆ ಪ್ರಸಿದ್ಧವಾದ ಬ್ರಾಹ್ಮಣ ಕುಟುಂಬದಲ್ಲಿ ವೆಂಕಟನಾಥರೆಂದು ಜನಿಸಿದರು. ಬಾಲ್ಯದಿಂದಲೇ ಅವರು ಅಸಾಮಾನ್ಯ ಬುದ್ಧಿಶಕ್ತಿ, ವಿನಯ ಹಾಗೂ ಶ್ರೀಹರಿಯ ಮೇಲಿನ ಅನನ್ಯ ಭಕ್ತಿಯನ್ನು ಪ್ರದರ್ಶಿಸಿದರು. ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನದಲ್ಲಿ ವೇದಗಳು, ಶಾಸ್ತ್ರಗಳು, ನ್ಯಾಯ, ವ್ಯಾಕರಣ ಹಾಗೂ ಶ್ರೀಮಧ್ವಾಚಾರ್ಯರು ಪ್ರತಿಪಾದಿಸಿದ ಗಂಭೀರ ದ್ವೈತ ವೇದಾಂತ ತತ್ತ್ವವನ್ನು ಆಳವಾಗಿ ಅಧ್ಯಯನ ಮಾಡಿ ಪಾರಂಗತರಾದರು.

ಅಪಾರ ಪಾಂಡಿತ್ಯವನ್ನು ಹೊಂದಿದ್ದರೂ ವೆಂಕಟನಾಥರು ಅತ್ಯಂತ ಸರಳ ಹಾಗೂ ಸಂತೃಪ್ತ ಜೀವನವನ್ನು ನಡೆಸಿದರು. ಸನ್ಯಾಸಾಶ್ರಮವನ್ನು ಸ್ವೀಕರಿಸಿದ ನಂತರ ಅವರು **"ಶ್ರೀ ರಾಘವೇಂದ್ರ ತೀರ್ಥರು"** ಎಂಬ ಹೆಸರಿನಿಂದ ಪ್ರಸಿದ್ಧರಾದರು. ಮಧ್ವ ಸಂಪ್ರದಾಯದ ಪೀಠಾಧಿಪತಿಗಳಾಗಿ ದ್ವೈತ ವೇದಾಂತದ ತತ್ತ್ವಗಳನ್ನು ಸಂರಕ್ಷಿಸುವುದು ಮತ್ತು ಪ್ರಸಾರ ಗೊಳಿಸುವುದನ್ನೇ ತಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಂಡರು. ಅವರು ರಚಿಸಿದ ಭಾಷ್ಯಗಳು ಮತ್ತು ಟೀಕೆಗಳು ಅಪೂರ್ವ ಜ್ಞಾನಗಾಂಭೀರ್ಯ ಹಾಗೂ ಚಿಂತನಸ್ಪಷ್ಟತೆಯನ್ನು ತೋರಿಸುತ್ತವೆ. ಇಂದಿಗೂ ಅವರ ಗ್ರಂಥಗಳನ್ನು ವೇದಾಂತದ ತತ್ತ್ವಗಳನ್ನು ಅರಿಯಲು ಪ್ರಮಾಣಿಕ ಮಾರ್ಗದರ್ಶಿಗಳೆಂದು ವಿದ್ವಾಂಸರು ಪರಿಗಣಿಸುತ್ತಾರೆ.

ಆದರೆ ಶ್ರೀ ರಾಘವೇಂದ್ರ ಸ್ವಾಮಿಗಳ ಮಹತ್ವವು ಕೇವಲ ಪಾಂಡಿತ್ಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವರ ಜೀವನವು ಜ್ಞಾನ, ಭಕ್ತಿ ಮತ್ತು ಕರುಣೆಯ ಪರಿಪೂರ್ಣ ಸಂಗಮವಾಗಿತ್ತು. ಪ್ರತಿಯೊಬ್ಬ ಜೀವಿಯೂ ಭಗವದನುಗ್ರಹಕ್ಕೆ ಅರ್ಹನೆಂಬ ಭಾವದಿಂದ ಅವರು ಸಮಾಜದ ಕಲ್ಯಾಣಕ್ಕಾಗಿ ನಿರಂತರವಾಗಿ ಶ್ರಮಿಸಿದರು. ಶ್ರೀಮಂತರು ಮತ್ತು ಬಡವರು, ವಿದ್ವಾಂಸರು ಮತ್ತು ಸಾಮಾನ್ಯರು, ರಾಜರು ಮತ್ತು ಪ್ರಜೆಗಳು ಎಲ್ಲರೂ ಅವರ ಬಳಿಗೆ ಮಾರ್ಗದರ್ಶನ, ಸಾಂತ್ವನ ಮತ್ತು ಆಶೀರ್ವಾದಕ್ಕಾಗಿ ಆಗಮಿಸುತ್ತಿದ್ದರು.

ಶ್ರೀರಾಘವೇಂದ್ರ ಸ್ವಾಮಿಗಳ ಮಹಿಮೆ ಅವರೊಂದಿಗೆ ಸಂಬಂಧಿಸಿದ ಅನೇಕ ಪವಾಡಗಳ ಮೂಲಕ ಅತ್ಯಂತ ಸ್ಪಷ್ಟವಾಗಿ ಗೋಚರಿಸುತ್ತದೆ. ಅವರ ಅನುಗ್ರಹದಿಂದ ರೋಗಿಗಳು ಆರೋಗ್ಯವನ್ನು ಪಡೆದಿದ್ದಾರೆ. ಸಂಕಷ್ಟದಲ್ಲಿದ್ದವರು ಪರಿಹಾರ ಕಂಡಿದ್ದಾರೆ. ಸಂತಾನವಿಲ್ಲದವರು ಸಂತಾನಭಾಗ್ಯವನ್ನು ಹೊಂದಿದ್ದಾರೆ ಮತ್ತು ಬಡವರು ಸಮೃದ್ಧಿಯನ್ನು ಪಡೆದಿದ್ದಾರೆ ಎಂಬುದು ಭಕ್ತರ ದೃಢ ನಂಬಿಕೆಯಾಗಿದೆ. ಈ ಪವಾಡಗಳನ್ನು ಕೇವಲ ಅಲೌಕಿಕ ಘಟನೆಗಳೆಂದು ಮಾತ್ರವಲ್ಲ. ಅವರ ಅಪಾರ

ಕರುಣೆ ಹಾಗೂ ಶ್ರೀಹರಿಯ ಮೇಲಿನ ಅಚಲ ಭಕ್ತಿಯ ಅಭಿವ್ಯಕ್ತಿಗಳೆಂದು ಪರಿಗಣಿಸಲಾಗುತ್ತದೆ.

ಅವರ ಜೀವನದ ಅತ್ಯಂತ ಮಹತ್ವದ ಘಟನೆಯೆಂದರೆ ಮಂತ್ರಾಲಯದ ಪವಿತ್ರ ಬೃಂದಾವನ ಪ್ರವೇಶ. ಕ್ರಿ.ಶ. 1671 ರಲ್ಲಿ ಬೃಂದಾವನ ಪ್ರವೇಶಿಸುವ ಮೊದಲು, ತಾವು ಏಳು ನೂರು ವರ್ಷಗಳ ಕಾಲ ಭಕ್ತರನ್ನು ರಕ್ಷಿಸಿ ಅನುಗ್ರಹಿಸುತ್ತೇನೆ ಎಂದು ಶ್ರೀರಾಘವೇಂದ್ರ ಸ್ವಾಮಿಗಳು ಆಶ್ವಾಸನೆ ನೀಡಿದರು. ಈ ವಾಕ್ಯವೇ ಇಂದಿಗೂ ಕೋಟ್ಯಾಂತರ ಭಕ್ತರ ಭಕ್ತಿಯ ಆಧಾರವಾಗಿದೆ. ಅವರು ಬೃಂದಾವನದೊಳಗೆ ನಿರಂತರ ಧ್ಯಾನದಲ್ಲಿದ್ದು, ಭಕ್ತರ ಪ್ರಾರ್ಥನೆಗಳಿಗೆ ಸ್ಪಂದಿಸುತ್ತಿದ್ದಾರೆ ಎಂಬುದು ಅವರ ದೃಢ ವಿಶ್ವಾಸವಾಗಿದೆ.

ಪ್ರಸಿದ್ಧವಾದ ಈ ಶ್ಲೋಕವು ಅವರ ಮಹಿಮೆಯನ್ನು ಸುಂದರವಾಗಿ ವರ್ಣಿಸುತ್ತದೆ.

**"ಪೂಜ್ಯಾಯ ರಾಘವೇಂದ್ರಾಯ ಸತ್ಯಧರ್ಮರತಾಯ ಚ।**
**ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ॥**

ಅಂದರೆ, ಅವರನ್ನು ಭಜಿಸುವವರಿಗೆ ಅವರು ಕಲ್ಪವೃಕ್ಷ ನಾಗಿ ಸಕಲ ಸತ್ಕಾಮನೆಗಳನ್ನು ಪೂರೈಸುವವರು ಅವರನ್ನು ಶರಣಾಗುವವರಿಗೆ ಕಾಮಧೇನುವಾಗಿ ಐಹಿಕ ಮತ್ತು ಪಾರಮಾರ್ಥಿಕ ಮಂಗಳವನ್ನು ಅನುಗ್ರಹಿಸುವವರು.

ಶ್ರೀ ರಾಘವೇಂದ್ರ ಸ್ವಾಮಿಗಳು ಶ್ರೀಮನ್ನಾರಾಯಣನ ಭಕ್ತಿ, ಧರ್ಮನಿಷ್ಠೆ, ವಿನಯ ಮತ್ತು ಮಾನವ ಸೇವೆಯನ್ನು ವಿಶೇಷವಾಗಿ ಒತ್ತಿ ಹೇಳಿದರು. ನಿಜವಾದ ಆಧ್ಯಾತ್ಮಿಕ ಪ್ರಗತಿಗೆ ಭಗವಂತನ ಮೇಲಿನ ಅಚಲ ನಂಬಿಕೆ, ಶಾಸ್ತ್ರಗಳ ಮೇಲಿನ ಗೌರವ ಮತ್ತು ಧಾರ್ಮಿಕ ಜೀವನದ ಆಚರಣೆ ಅಗತ್ಯವೆಂದು ಬೋಧಿಸಿದರು. ಇಂದಿನ ಆಧುನಿಕ ಯುಗದಲ್ಲಿಯೂ ಅವರ ಉಪದೇಶಗಳು ಜೀವನದ ಅನಿಶ್ಚಿತತೆಗಳು ಮತ್ತು ಸವಾಲುಗಳ ನಡುವೆ ದಾರಿ ದೀಪವಾಗಿವೆ.

ಪ್ರತಿ ವರ್ಷ ನಡೆಯುವ ಶ್ರೀರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವವನ್ನು ವಿಶ್ವದಾದ್ಯಂತದ ಭಕ್ತರು ಅತ್ಯಂತ ಭಕ್ತಿ ಭಾವದಿಂದ ಆಚರಿಸುತ್ತಾರೆ. ಈ ಪವಿತ್ರ ದಿನಗಳಲ್ಲಿ ಭಕ್ತರು ಸೇವೆಗಳನ್ನು ನೆರವೇರಿಸಿ, ಸ್ತೋತ್ರಪಠಣ ಮಾಡಿ, ಭಜನೆಗಳನ್ನು ಹಾಡಿ, ಗುರುಗಳ ಅನುಗ್ರಹವನ್ನು ಕೋರುತ್ತಾರೆ. ಶ್ರೀಅಪ್ಪಣ್ಣಾಚಾರ್ಯರು ರಚಿಸಿದ "ಶ್ರೀರಾಘವೇಂದ್ರ ಸ್ತೋತ್ರ"ದ ಪಾರಾಯಣವು ಭಕ್ತರ ಹೃದಯಗಳಲ್ಲಿ ಭಕ್ತಿ ಮತ್ತು ಆತ್ಮ ವಿಶ್ವಾಸವನ್ನು ತುಂಬುತ್ತದೆ.

ಶ್ರೀರಾಘವೇಂದ್ರ ಸ್ವಾಮಿಗಳ ಜನಪ್ರಿಯತೆಯ ರಹಸ್ಯವು ಅವರ ಜೀವನದಲ್ಲಿ ಕಾಣುವ ಅಪೂರ್ವ ಪಾಂಡಿತ್ಯ, ಸಂತತ್ವ ಮತ್ತು ಸುಲಭ ಸಂಪರ್ಕತೆಯಲ್ಲಿದೆ. ಅವರು ಮಧ್ವ ಸಂಪ್ರದಾಯದ ಶ್ರೇಷ್ಠ ತತ್ತ್ವಜ್ಞಾನಿಗಳಲ್ಲಿ ಒಬ್ಬರಾಗಿದ್ದರೂ, ಸಾಮಾನ್ಯ ಭಕ್ತರ ಪ್ರಾರ್ಥನೆಗಳಿಗೆ ಸ್ಪಂದಿಸುವ ಕರುಣಾಮಯ ರಕ್ಷಕರಾಗಿಯೂ ನೆನಪಾಗುತ್ತಾರೆ.

ಕೊನೆಯದಾಗಿ, ಶ್ರೀರಾಘವೇಂದ್ರ ಸ್ವಾಮಿಗಳ ಮಹಿಮೆ ಕೇವಲ ಪವಾಡಗಳಲ್ಲಿ ಮಾತ್ರ ಅಡಗಿಲ್ಲ ಧರ್ಮ, ವೇದಾಂತ ಮತ್ತು ಲೋಕಕಲ್ಯಾಣಕ್ಕಾಗಿ ಅವರು ನಡೆಸಿದ ಜೀವನವೇ ಅವರ ನಿಜವಾದ ಮಹಿಮೆಯಾಗಿದೆ. ಅವರ ಉಪದೇಶಗಳು ಧರ್ಮಮಾರ್ಗವನ್ನು ಬೆಳಗುತ್ತವೆ. ಅವರ ಅನುಗ್ರಹವು ಕೋಟ್ಯಾಂತರ ಭಕ್ತರಿಗೆ ಆಶಾಭರವನ್ನೂ ನೆಮ್ಮದಿಯನ್ನೂ ನೀಡುತ್ತದೆ. ಇಂದಿಗೂ "ರಾಘವೇಂದ್ರ" ಎಂಬ ಪವಿತ್ರ ನಾಮವೇ ಭಕ್ತಿ, ವಿಶ್ವಾಸ ಮತ್ತು ಭಗವದನುಗ್ರಹದ ಭರವಸೆಯನ್ನು ಮೂಡಿಸುತ್ತದೆ. ನಿಜವಾಗಿಯೂ ಶ್ರೀರಾಘವೇಂದ್ರ ಸ್ವಾಮಿಗಳು ಕಲಿಯುಗದ ಆಧ್ಯಾತ್ಮಿಕ ಲೋಕದಲ್ಲಿ ಪ್ರಕಾಶ ಮಾನ ದೀಪ ಸ್ತಂಭರಾಗಿದ್ದಾರೆ.



## ಸೆಪ್ಟೆಂಬರ್ -2026 ತಿಂಗಳಲ್ಲಿ ಬರುವ ಹಬ್ಬ ಹರಿ ದಿನಗಳು

| | |
|---|---|
| 04 | ಕೃಷ್ಣಾಷ್ಟಮಿ, ಗೋಕುಲಾಷ್ಟಮಿ |
| 07 - 08 | ರವರೆಗೆ ಕಾರ್ವೇಟಿನಗರಂ, ಶ್ರೀವೇಣುಗೋಪಾಲ ಸ್ವಾಮಿಯವರ ಪವಿತ್ರೋತ್ಸವಗಳು |
| 11-14 | ರವರೆಗೆ ಒಂಟಿಮಿಟ್ಟ, ಶ್ರೀಕೋದಂಡರಾಮ ಸ್ವಾಮಿಯವರ ಪವಿತ್ರೋತ್ಸವಗಳು |
| 13 | ಬಲರಾಮ ಜಯಂತಿ, ವರಾಹಜಯಂತಿ |
| 15-23 | ರವರೆಗೆ ತಿರುಮಲೆ, ಸ್ವಾಮಿಯವರ ಬ್ರಹ್ಮೋತ್ಸವಗಳು |
| 14 | ಗಣೇಶ ಚತುರ್ಥಿ |
| 21-24 | ರವರೆಗೆ ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ ಪವಿತ್ರೋತ್ಸವಗಳು |
| 23-26 | ರವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಪವಿತ್ರೋತ್ಸವಗಳು, ದೇವುನಿ ಕಡಪ ಶ್ರೀ ಲಕ್ಷ್ಮಿ ವೆಂಕಟೇಶ್ವರ ಸ್ವಾಮಿಯವರ ಪವಿತ್ರೋತ್ಸವಗಳು |
| 23 | ವಾಮನ ಜಯಂತಿ |
| 25 | ಅನಂತ ಪದ್ಮನಾಭವ್ರತ |



# ಆಳ್ವಾರರು ದರ್ಶಿಸಿದ ತಿರುಮಲೆಯ ಶ್ರೀ ಶ್ರೀನಿವಾಸ

- ಪ್ರೊ॥ ಎಸ್. ಬಿಳಿಗಿರಿವಾಸನ್
9036612484

"ಆಳ್ವಾರ್" ಎಂಬ ತಮಿಳು ಶಬ್ದಕ್ಕೆ "ಆಳವಾಗಿ ಮುಳುಗಿದವರು" ಎಂದು ಅರ್ಥವಾಗುತ್ತದೆ. ಭಗವದನುಭವವೆಂಬ ಸಾಗರದಲ್ಲಿ ಮುಳುಗಿ ತಲಸ್ಪರ್ಶಿಸಿದವರು. ವ್ಯಾಖ್ಯಾನಕಾರರಾದ ತಿರುಕ್ಕುರುಕೈಪ್ಪಿರಾನ್ ಪಿಳ್ಳಾನ್ ಅವರು ಆಳ್ವಾರ್ ಎಂಬುದಕ್ಕೆ "ನಿಖಿಲ ಜಗದುದಯವಿಭವಾದಿ ಲೀಲ ನಾಯಿರುನ್ವ ಪರಮಪುರುಷನೈ ಉಳ್ಳಪಡಿಯೇ ಆಳವಾರ್ ತಾಮ್ ತಮ್ಮುಡೈಯ ತಿರುಉಳ್ಳತ್ತಾಲೆ ಅನುಭವಿತ್ತು." ಎಂದರೆ ಭಗವಂತನನ್ನು ತಮ್ಮ ಸಿರಿಯೊಡಲಿನಲ್ಲಿ ಅಡಗಿಸಿಕೊಂಡು, ಅದರಲ್ಲಿ ತಾವೇ ಆಳವಾಗಿ ಮುಳುಗಿ ಸಾಕ್ಷಾತ್ಕಾರದ ಸುಖವನ್ನು ನೇರವಾಗಿ ಅನುಭವಿಸಿದವರು. ಶ್ರೀ ವೈಷ್ಣವ ಮತದಲ್ಲಿ ಮಾನ್ಯರಾದ 12 ಮಂದಿ ಭಕ್ತ ಕವಿಗಳನ್ನು ಆಳ್ವಾರರೆಂದು ಕರೆಯುವರು. ಆಳ್ವಾರರು ತಮಿಳುನಾಡಿನ ಪುರಾತನ ಸಂತರಾಗಿದ್ದು ವಿವಿಧ ಕಾಲ, ಜಾತಿ,ಊರು, ವೃತ್ತಿ, ಮನೋವೃತ್ತಿಯವರಾಗಿದ್ದರು. ಆದರೆ ಇವರಲ್ಲಿ ಸಮಾನವಾದುದೆಂದರೆ ಗಾಢವಾದ ವಿಷ್ಣುಭಕ್ತಿ ಹಾಗೂ ಅದರೊಂದಿಗೆ ಮೇಳೈಸಿಕೊಂಡಿರುವ ಅತ್ಯದ್ಭುತವಾದ ಕವಿತಾಶಕ್ತಿ. ಆಳ್ವಾರರು ತಮ್ಮ ಕಾಲದಲ್ಲಿ ತಮಿಳುನಾಡಿನಾದ್ಯಂತ ಸಂಚರಿಸಿ ಶ್ರೀವೈಷ್ಣವ ಕ್ಷೇತ್ರಗಳಲ್ಲಿದ್ದು ಅಲ್ಲಿನ ವಿಷ್ಣುವಿನ ಅರ್ಚಾಮೂರ್ತಿಗಳನ್ನು ದರ್ಶಿಸಿದಾಗ ತಮಗೊದಗಿದ ಭಾವಾನುಭವಗಳನ್ನು ಸರಳವಾಗಿ ನೇರವಾಗಿ ಮನಸ್ಸನ್ನು ಮುಟ್ಟುವಂತೆ ಹೃದಯವನ್ನು ತಟ್ಟುವಂತೆ ತನ್ಮಯತೆಯಿಂದ ಹಾಡಿದರು. ಅವರ ಹಾಡಿನಲ್ಲಿ ಪ್ರಕೃತಿ ವರ್ಣನೆ, ಕ್ಷೇತ್ರವರ್ಣನೆ, ಉತ್ಸವಾದಿಗಳ ವರ್ಣನೆ, ಮೂಲ ಮೂರ್ತಿ ವೈಭವ, ನೀರಸ ಬದುಕಿನ ಅಳಲು, ಭಕ್ತನ ಕಾತರತೆ, ಸಾಕ್ಷಾತ್ಕಾರದ ಹಾದಿ, ಭಗವದನುಭವದ ಆನಂದವನ್ನು ವರ್ಣಿಸಲಾಗುತ್ತಿತ್ತು. ಶ್ರೀ ವಿಷ್ಣು ಕ್ಷೇತ್ರಗಳಲ್ಲಿ ಉತ್ಸವಾದಿ ವಿಶೇಷ ಸಂದರ್ಭಗಳಲ್ಲಿ ಅರ್ಚಾ ಮೂರ್ತಿಗಳೆದುರಿನಲ್ಲಿಗೇಯ ಪ್ರಧಾನವಾದ ಆಳ್ವಾರರ ಪಾಶುರಗಳನ್ನು ಹಾಡುವ ಪರಿಪಾಠ ಬೆಳೆದು ಬಂದು ಇಂದಿಗೂ ಶ್ರೀವೈಷ್ಣವ ಕ್ಷೇತ್ರಗಳಲ್ಲಿ ಹಾಡಲಾಗುತ್ತದೆ.

**ಶ್ರೀವೈಷ್ಣವ ಸಂಪ್ರದಾಯದಲ್ಲಿ ದ್ವಾದಶ ಆಳ್ವಾರುಗಳನ್ನು ಹೀಗೆ ಗುರುತಿಸಬಹುದು**

**ಪ್ರಾಚೀನರು :** ಪೋಯಿಗೈ ಆಳ್ವಾರ್-ಕ್ರಿ.ಪೂ. 4203 (ಪ್ರಥಮ ಯೋಗಿ) ಭೂದತ್ತಾಳ್ವಾರ್- ಕ್ರಿ.ಪೂ. 4203 (ದ್ವಿತೀಯ ಯೋಗಿ) ಪೇಯಾಳ್ವಾರ್ ಕ್ರಿ.ಪೂ. 4203 (ತೃತೀಯ ಯೋಗಿ) ತಿರುಮಳಿಸೈಯಾಳ್ವಾರ್ - ಕ್ರಿ.ಪೂ. 4203 (ಭಕ್ತಿ ಸಾರಯೋಗಿ) **ಮಧ್ಯಮರು:** ನಮ್ಮಾಳ್ವಾರ್ - ಕ್ರಿ.ಪೂ. 3102 (ಶಠಕೋಪ), ಮಧುರಕವಿ ಆಳ್ವಾರರು- ಕ್ರಿ.ಪೂ.3102, ಕುಲಶೇಖರ ಆಳ್ವಾರ್ ಕ್ರಿ.ಪೂ. 3075 ಪೆರಿಯಾಳ್ವಾರ್-ಕ್ರಿ.ಪೂ. 3056 ಆಂಡಾಳ್ ಕ್ರಿ.ಪೂ. 3005 **ಕಡೆಯವರಾಗಿ** ತೊಂಡರಡಿಪೊಡಿ ಆಳ್ವಾರ್ ಕ್ರಿ.ಪೂ.2818,ತಿರುಪ್ಪಾಣಾಳ್ವಾರ್- ಕ್ರಿ.ಪೂ.2790 ತಿರುಮಂಗೈ ಆಳ್ವಾರ್ ಕ್ರಿ.ಪೂ. 2709.

ಶ್ರೀ ವೈಷ್ಣವ ಸಂಪ್ರದಾಯದಲ್ಲಿ 108 ದಿವ್ಯ ಕ್ಷೇತ್ರಗಳು ಅಥವಾ ದಿವ್ಯ ದೇಶಗಳಿವೆ. ಆಳ್ವಾರರೆಲ್ಲರೂ ಈ ಕ್ಷೇತ್ರಗಳನ್ನೆಲ್ಲಾ ಸಂದರ್ಶಿಸಿಲ್ಲವಾದರೂ ಅವರೆಲ್ಲರೂ ಸಂದರ್ಶಿಸಿರುವ ದಿವ್ಯದೇಶಗಳೆಂದರೆ ತಿರುವರಂಗಂ (ಶ್ರೀರಂಗಂ) ತಿರುವೇಂಗಡಂ (ತಿರುಮಲೆ). ದ್ವಾದಶ ಆಳ್ವಾರರ ಪಾಶುರಗಳನ್ನು ಸಂಗ್ರಹಿಸಿದರೆ ನಾಲ್ಕು ಸಾವಿರವಾಗುವುದರಿಂದ ತಮಿಳಿನಲ್ಲಿ ಇದಕ್ಕೆ "ನಾಲ್ ಆಯಿರ ಪ್ರಬಂಧಂ" ಎಂದು ಕರೆಯಲಾಗಿದೆ. "ನಾಲ್ಕು ಸಾವಿರ ಪಾಶುರಗಳಲ್ಲಿ ತಿರುವರಂಗವನ್ನು ಕುರಿತ 247 ಹಾಗೂ ವೇಂಗಡವನ್ನು ಕುರಿತ 195 ಪಾಶುರಗಳಿವೆ. ಆಳ್ವಾರರ ಪಾಶುರಗಳಲ್ಲಿ ವೇಂಗಡದ ಸಂಖ್ಯೆಯನ್ನು ವಿಭಜಿಸಿದರೆ ಪೊಯ್ಗೈಯ್ ಆಳ್ವಾರ್-1, ಭೂದತ್ತಾಳ್ವಾರ್- 9, ಪೇಯಾಳ್ವಾರ್-10, ತಿರುಮಳಿಸೈ ಆಳ್ವಾರ್-14, ನಮ್ಮಾಳ್ವಾರ್-44, ಕುಲಶೇಖರಾಳ್ವಾರ್-11,ಪೆರಿಯಾಳ್ವಾರ್-1,



ಆಂಡಾಳ್-16, ತಿರುಪ್ಪಾಣಾಳ್ವಾರ್ - 2, ತಿರುಮಂಗೈ ಆಳ್ವಾರ್ -63 ಪಾಶುರಗಳನ್ನು ರಚಿಸಿದ್ದಾರೆ.

ಈ ಮೇಲ್ಕಂಡ ಆಳ್ವಾರರುಗಳಲ್ಲಿ ಪೊಯಗೈಆಳ್ವಾರ್, ಭೂದತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಸೈ ಆಳ್ವಾರ್ ಮತ್ತು ನಮ್ಮಾಳ್ವಾರರು ತಿರುಪತಿಯ ಶ್ರೀ ಶ್ರೀನಿವಾಸನನ್ನು ಕುರಿತು ಹಾಡಿರುವ ಪಾಶುರಗಳ ಕಿರು ಪರಿಚಯವನ್ನು ಪ್ರಸ್ತುತ ಪಡಿಸುತ್ತೇನೆ.

ಪೊಯ್‌ಗೈ ಆಳ್ವಾರರು ಸಿದ್ಧಾರ್ಥಿ ನಾಮ ಸಂವತ್ಸರದ ಆಶ್ವೀಜ ಮಾಸದ ಶುಕ್ಲ ಪಕ್ಷದಲ್ಲಿ ಭಗವಂತನ ಪಂಚಾಯುಧಗಳಲ್ಲಿ ಒಂದಾದ ಪಾಂಚಜನ್ಯ ಶಂಖದ ಅಂಶವಾಗಿ ಕಾಂಚೀಪುರದ ಪುಷ್ಪದ ಪೊದೆಯಲ್ಲಿ ಅವತರಿಸಿದರು.

**ಉಣರ್‌ವಾರ್ ಆರ್ ಉನ್ ಪೆರುಮೈ ಉಳಿತೋರೂಳಿ**
**ಉಣರ್‌ವಾರ್ ಆರ್ ಉರುವಂ ತನ್ನೈ ಉಣರ್‌ವಾರ್ ಆರ್**
**ಏಣ್ ಅಹತ್ತಾಯ್ ಮಣ್ ಅಹತ್ತಾಯ್ ವೇಂಗಡತ್ತಾಯ್ ನಾಲ್ವೇದ**
**ಪಣ್ ಅಹತ್ತಾಯ್‌ಮಣ್ ಅಹತ್ತಾಯ್ ವೇಂಗಡತ್ತಾಯ್ ನಾಲ್ವೇದ**
**ಪಣ್ ಅಹತ್ತಾಯ್ ನೀ ಕಿಡಂದ ಪಾಲ್ ॥1॥**

ಅರಿವವರು ಯಾರಯ್ಯ ಹಿರಿಮೆಯನು ನಿನ್ನ,
ಎಡೆಬಿಡದೆ ಹೆಣಗಾಡಿದವರು?
ಕಂಡರಿವವರು ಯಾರು ಎಲ್ಲಕೆ ಮಿಗಿಲಾದ
ರೂಪವನು ನಿನ್ನದೇ ಆದುದನು? ಅರಿವವರು ಯಾರು?
ಬಾನೊಳಗಿರುವಿ, ಮಣ್ಣೊಳಗಿರುವಿ, ವೇಂಗಡದ ಮೇಲಿರುವಿ!
ವೇದನಾಲ್ಕರ ನುಡಿಯೊಳಗಡಗಿರುವಿ!
ಅರಿವರುಂಟೆ ನೀನುಪ್ಪವಡಿಸಿದ ಪಾಲ್ಗಡಲ? ॥1॥

**ಪುಹಳ್ವಾಯ್ ಪಳಿಪ್ಪಾಯ್ ನೀ ಪೂಮ್ ತುಳಾಯಾನೈ**
**ಇಹಳ್ವಾಯ್ ಕರುದು ವಾಯ್ ನೆಂಜೇ ತಿಹಳ್ ನೀರ್**
**ಕಡಲುಂ ಮಲೈಯುಂ ಇರು ವಿಶಂಬು ಕಾತ್ತುಂ**
**ಉಡಲುಂ ಉಯಿರುಂ ವಿತ್ತಾನ್ ॥12॥**

ಹಾಡಿ ಹೊಗಳುವೆಯಾ ಹಳಿಯುವೆಯಾ ತುಳಸಿ ಮಾಲೆ
ತೊಟ್ಟವನನು ಕಡೆಗಣ್ಣಿಂದ ಕಾಣುವೆಯೊ
ಆದರದಿ ಸೇರುವೆಯೊ ಎಲೆ ಮನವೆ, ಹೊಳವನೀರ್
ಕಡಲು ಮಲೆಯಾಗಸವು ಗಾಳಿ ಒಡಲುಸಿರು
ಎಲ್ಲವನು ಎತ್ತಿನಿಲಿಸಿಹನವನೆ ದಿಟ ॥12॥

ಭೂದತ್ತಾಳ್ವಾರರು ಶ್ರೀಮನ್ನಾರಾಯಣನ ಕೌಮೋದಕಿ ಗದೆಯ ಅಂಶದಿಂದ ಶಕ್ತಿ ಭರಿತರಾದ ಮುನಿಗಳು. ಈ ಲೋಕದಲ್ಲಿ ಪೂರ್ವ ಸಮುದ್ರದಲ್ಲಿನ ತಿರುಕ್ಕಡಲ್ ಮಲೈ (ಮಹಾಬಲಿಪುರಂ) ಹೂವಿನ ತೋಟದಲ್ಲಿ ಸಿದ್ಧಾರ್ಥಿ ಸಂವತ್ಸರದಲ್ಲಿ ಅಲ್ಪಶಿ (ಆಶ್ವೀಜ) ಮಾಸದಲ್ಲಿ ಪೊಯ್‌ಗೈ ಆಳ್ವಾರರು ಅವತರಿಸಿದ ಮರುದಿನ ಅವಿಟ್ಟಂ (ಧನಿಷ್ಠಾ) ನಕ್ಷತ್ರದಲ್ಲಿ ಜನಿಸಿ ಯಜಮಾನರಾದವರು.

**ಮನತ್ತುಳಾನ್ ವೇಂಗಡತ್ತಾನ್ ಮಾಕಡಲಾನ್ ಮತ್ತುಂ**
**ನಿನೈಪ್ಪರಿಯ ನೀಳ್ ಅರಂಗತ್ತು ಉಳ್ಳಾನ್ ಎನೈಪ್ಪಲರುಂ**
**ದೇವಾದಿದೇವಾನ್ ಎನಪ್ಪಡುವಾನ್, ಮುನ್ನೊರುನಾಳ್**
**ಮಾ ವಾಯ್ ಪಿಳಂದ ಮಹನ್ ॥14॥**

ಇರುವನೆನ್ನ ಮನದಲ್ಲೆ ವೇಂಗಡದವ, ಮಾ ಕಡಲಿನವ! ಮತ್ತೆ
ಮಲಗಿದವನ ಒಡಕಿರದ ಹರವು ರಂಗದಲಿ, ಎನಿತೋಹಲರು
ದೇವರ ಮೇಲಣ ದೇವ ಎಂದು ಬಗೆದಿಹರು ನಿನ್ನ !
ಹಿಂದೊಂದು ದಿನ ಅಸುರನ ಬಾಯ ಸೀಳಿದ ಮಾಣಿ ನೀ ತಾನೆ ॥14॥

**ನವಿನ್ರುರೈತ್ತ ನಾವಲರ್ಹಳ್ ನಾಳ್ ಮಲರ್ ಕೊಂಡು ಆಂಗೇ**
**ಪಯಿನ್ರದನಾಲ್ ಪೆತ್ತ ಪಯನ್ ಎನ್ಗೊಲ್ ಪಯಿನ್ರಾರ್ ತಮ್**
**ಮೆಯ್ ತವತ್ತಾಲ್ ಕಾಣ್ಬರಿಯ ವೇಗಮಣಿವಣ್ಣನ್ ಯಾನ್**
**ಎತ್ತವತ್ತಾಲ್ ಕಾಣ್ಬನ್ ಕೊಲ್ ಇನ್ರು ॥24॥**

ಹಲ ಕಾಲ ಹಾಡಿ ಕಬ್ಬಿಗರು ಹೂಗಳನಾಯ್ದು ಇರಿಸಿ ಅವ ನಡಿಯ ಮೇಲೆ
ನಂಬಿ ನಡಕೊಂಡು ಪಡೆದ ಫಲವೇನು? ಬಗೆ ಬಗೆಯ ಸಾಧಕರು ತಂತಮ್ಮ
ಮೈಯ ತಪದಿಂದ ಕಂಡರಿಯದಿಹ ಕಾರ್ಮೋಡ ಮಣಿ ಬಣ್ಣದವನ ನಾನಾವ
ತಪದ ಬಲದಿಂದ ಕಂಡು ಕೊಂಡೆನೋ ಇಂದು ॥24॥

ಪೇಯಾಳ್ವಾರರು ಅಲ್ಪಶಿ (ಆಶ್ವೀಜ) ಮಾಸದ ಶಯದ (ಶತಭಿಷ) ನಕ್ಷತ್ರದಲ್ಲಿ ತಿರುಮಲೆ(ಮೈಲಾಪೂರ್)ಯಲ್ಲಿನ ಬಾವಿಯೊಂದರಲ್ಲಿ "ಅಲಿ" ಎಂಬ ಕೆಂಪು ವರ್ಣದ ಪುಷ್ಪದಲ್ಲಿ ಭಗವಂತನ "ನಂದಕ" ಖಡ್ಗದ ಅಂಶವಾಗಿ ಸತ್ಯಭಕ್ತಿಗಳು ರೂಪವಡೆದಂತೆ ಜ್ಞಾನಿಯಾದವರು ಅವತರಿಸಿರುವರು ಎಂದು "ನಿತ್ಯಸೂರಿ" ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ. ಭಗವಂತನ ಪಾದಕಮಲಗಳಲ್ಲಿ ಅತಿಶಯವಾದ ಒಲವುಳ್ಳವರಾಗಿ ಆ ಒಲವಿನಲ್ಲಿಯೇ ಮತಿಭ್ರಮಣೆಯನ್ನು ಹೊಂದಿ 'ಪೇಯಾಳ್ವಾರ್' ಎಂದು ನಾಮಾಂಕಿತರಾದರು.

ಮಾರ್‌ಪಾಲ್ ಮನಂ ಶುಳಿಪ್ಪ ಮಂಗೆಯರ್ ತೋಳ್ ಕೈವಿಟ್ಟು
ನಾರ್‌ಪಾಲ್ ಮನಂ ವೈಕ್ಕ ನೊಯ್ವದಾಂ ನಾರ್‌ಪಾಲ
ವೇದತ್ತಾನ್ ವೇಂಗಡತ್ತಾನ್ ವಿಣ್ಣೋರ್ ಮುಡಿತೋಯುಂ
ಪಾದತ್ತಾನ್ ಪಾದಂ ಪಣಿನ್ದು ॥29॥

ದೈವದ ಬಳಿ ಸುಳಿಯಲು ಮನ, ಕೈಬಿಟ್ಟು ಚೆನ್ನಿಯರ ತೋಳ
ವೇದದರ್ಥದಲಿ ನೇರಾಗಿ ನಿಂತೀತು ಮನ! ವೇದ ನಾಲ್ಕರ
ವಿಷಯವೇ ವೇಂಗಡದವ! ಬಾನವರ ಮುಡಿ
ಮುಟ್ಟಿದವನಡಿಗಳನೆ ನೆರೆನಂಬಿ ॥29॥

ಅದು ನನ್ರು ಇದು ತೀದು ಎನ್ರು ಐಯ್ಯಂಪಡಾದೇ
ಮದು ನಿನ್ರ ತಣ್ ತುಳಾಯ್ ಮಾರ್ವನ್ ಪೊದು ನಿನ್ರ
ಪೊನ್ ಅಮ್ ಕಳಲೇ ತೊಳುಮಿನ್ ಮುಳುವಿನೈಗಳ್
ಮುನ್ನಂ ಕಳಲುಂ ಮುಡಿಂದು॥ 41॥

ಅದು ಒಳಿತು ಇದು ಕಾಡು ಎಂದಿಂತು ಪರದಾಡದೆಲೆ
ದುಂಬಿ ತುಂಬಿರುವ ತುಳಸಿಮಾಲೆ ತೊಟ್ಟವನ , ಎಲ್ಲರಿಗೆ ಹಿತವೆನಿಪ
ಹೊನ್ನಡಿಗಳನೆ ನಂಬಿ ಹಿಡಿಯಿರಿ ನೀವು! ದುರಿತಗಳೆಲ್ಲ
ಮಡಿದು ಬೀಳುವುವು ಮುಂದಾಗಿ ॥41॥

ತಿರುಮಳಿಸೈ ಆಳ್ವಾರರು ಸಿದ್ಧಾರ್ಥಿನಾಮ ಸಂವತ್ಸರದ ತೈ (ಪುಷ್ಯ) ಮಾಸದ 28 ನೆಯ ತೇದಿ ಕೃಷ್ಣಪಕ್ಷ ಪ್ರಥಮೆ (ಪಾಡ್ಯ)ಯ ಮಖ ನಕ್ಷತ್ರದಲ್ಲಿ ಭಾನುವಾರ ಚಕ್ರತ್ತಾಳ್ವಾನ್ ಅಂಶದ ಭಾರ್ಗವ ಮಹರ್ಷಿಗಳ ಪುತ್ರರಾಗಿ ಅವತರಿಸಿದರು. ತಿರುಮಳಿಸೈ ನಾಡಿನ ಒಡೆಯರಾಗಿ, 'ಭಕ್ತಿಸಾರ' ಎಂದು ಪ್ರಸಿದ್ಧರಾದರು.

ಅಳೆಯಪ್ಪನ್ ತಿರುವೇಂಗಡತ್ತಾನೈ ಕಾಣ
ಇಳೈಪ್ಪನ್ ತಿರುಕ್ಕೂಡಲ್ ಕೂಡ ಮಳೈಪೇರ್
ಅರುವಿ ಮಣಿ ವರಂಡಿವಂದು ಇಳಿಯಆನೈ
ವೆರುವಿ ಅರವು ಒಡುಂಗುಂ ವೆರ್‌ಪು ॥49॥

ಬಾಯ್ದೆರೆದು ಕರೆಯುತಿಹೆ ಸಿರವೇಂಗಡದ
ದೈವವನು ಕಾಣುವೆನು ಎಂತೆಂದು
ಬರೆವೆ ಹರಕೆಯ ಗೆರೆಗಳನು
ಕೂಡಿಕೊಳಲೆಂದೀ ಬೆಟ್ಟವನು ! ಹಿರಿಮಳೆಯಂತೆ
ಮೊರೆವ ನೀರ ಝರಿಯಲ್ಲಿ ಉರಿಮಣಿಗಳುಬ್ಬಿ ಹರಿದು ಬರೆ
ಅದ ಕಂಡು ಬೆದರಿ ಓಡಲು ಆನೆ,
ಮಿಂಚೆಂದು ಹೆದರಿ ಹೊಗೆ ಹುತ್ತದೊಳು ಹಾವು
ಆ ಬೆಟ್ಟವನು ನಾನೆಂದು ಕಾಣುವೆನು ॥49॥

ವೇಂಗಡಮೇ ವಿಣ್ಣೋರ್ ತೋಳುವದುವುಂ ಮೇಯ್ ಮ್ಮೈಯಾಲ್
ವೇಂಗಡಮೇ ಮೆಯ್ ವಿನೈನೋಯ್
ತೀರ್ ಪದುವುಂ ವೇಂಗಡಮೇ
ದಾನವರೈ ವೀಳ್ ತನ್ ಆಳಿಪ್ಪಡೈ ತೊಟ್ಟು
ವಾನವರೈ ಕಾಪ್ಪಾನ್ ಮಲೈ॥54॥

ಬಾನವರು ಬಯಸಿ ಬರುವುದು ವೇಂಗಡಕೆ! ಮೈಮೆಯಲಿ
ಪಾಪವನು ನೋವನ್ನು ಕಳೆವುದಿದು ವೇಂಗಡವೇ!
ದಿಟವಾಗಿ ವೇಂಗಡವೆ
ದಾನವರ ತೊಲಗಿಸಲು ತನ ಚಕ್ರವನೆ ತೊಟ್ಟು
ಬಾನವರ ಕಾಪಿಡುವ ಮಲೆಯಹುದು ॥54॥

ನಮ್ಮಾಳ್ವಾರ್‌ರು ಪಾಂಡ್ಯನಾಡಿನ ತಾಮಿರಪರಣಿ ನದಿ ತೀರದಲ್ಲಿರುವ ತಿರುಕ್ಕುರಕ್ಕೂರ್‌ನಲ್ಲಿ ವೇಲಾಳವರ್ಣದ (ಶೂದ್ರಕುಲದಲ್ಲಿ) ತಿರುವಳುದಿ ವಳನಾಡಾರ್ ಎಂಬ ಪರಮ ಭಾಗವತೋತ್ತಮರಿಗೆ ಅರ ತಾಂಗಿಯರ್ ಎಂಬ ಪುತ್ರರಿದ್ದರು. ಅವರಿಗೆ ಚಕ್ರಪಾಣಿಯಾರ್ ಎಂಬ ಪುತ್ರರು ಜನಿಸಿದರು. ಅವರ ಮಗನಾಗಿ ಪೊರ್‌ಕಾರಿಯಾರ್ ಜನಿಸಿದರು. ಅವರ ಕುಮಾರನಾದ ಕಾರಿಯಾರ್ ಮತ್ತು ಉಡಯನಂಗೈ ದಂಪತಿಗಳಿಗೆ ಭಗವದಾಜ್ಞೆಯಂತೆ **"ಸೇನೈ ಮುದಲಿಯಾರ್"** ಎಂಬ ವಿಷ್ವಕ್ಸೇನರ ಅಂಶವಾಗಿ ಕಲಿಯುಗದ ಪ್ರಮಾಥಿನಾಮ ಸಂವತ್ಸರದ ವಿಶಾಖ ಮಾಸದ ಶುಕ್ರವಾರ ವಿಶಾಖ ನಕ್ಷತ್ರದಲ್ಲಿ ಶುಕ್ಲಪಕ್ಷ ಚತುರ್ದಶಿ ತಿಥಿಯಲ್ಲಿ ಕಟಕ ಲಗ್ನದಲ್ಲಿ ಶ್ರೀ ವಿಜ್ಞಾನ ಎಂಬ ಅಕ್ಷರಗಳಿಂದ ಉಂಟಾಗಿರುವ 43 ನೆಯ ದಿನ ಅವತರಿಸಿದರು. ಇವರು ತಾಯಿ ಗರ್ಭದಲ್ಲಿದ್ದಾಗ ಶಠವಾಯುವನ್ನು 'ಹುಂ' ಕಾರದಿಂದ ಓಡಿಸಿದ್ದರಿಂದ ಶಠಕೋಪರಾದರು. ನಂಪೆರುಮಾಳ್, ನಮ್ಮಾಳ್ವಾರ್, ನಂಜೀಯರ್, ನಂಪಿಳ್ಳೆ, ವಕುಳಾಭರಣ, ಪರಾಂಕುಶರ್ ಎಂಬ ಹೆಸರುಗಳೂ ಸೇರಿದವು.

ಉಣರ ಒರುವರುಕ್ಕು ಎಳಿಯನೇ ಶೆವ್ವೇ
ಇಣರುಂ ತುಳಾಯ್ ಅಲಂಗಲ್ ಎಂದೈ ಉಣರ
ತನಕ್ಕು ಎಳಿಯರ್ ಎವ್ವಳವರ್ ಅವ್ವಳವನ್ ಆನಾಲ್
ಎನಕ್ಕು ಎಳಿಯನ್ ಎಂಪೆರುಮಾನ್ ಇಂಗು

ಅರಿಯಬಲ್ಲರು ಯಾರು ನೇರಾಗಿ ಅವನನ್ನು
ತೊಟ್ಟ ತುಳಸಿ ಮಾಲೆಯನೆ ಹಿರಿಹಿಗ್ಗಿಸುವ ದೈವವನು? ಅಂತಾದರೂ
ತನ್ನ ಭಕುತರ ಒಲುಮೆ ಎಂತೆಂತೊ ಅಂತಂತು ಒಲಿಯುವನು
ಎಂತಲೇ ಎನ್ನೊಡೆಯನನು ನಾನರಿತೆ ನಿಂದು

ಕಲ್ಲುಂ ಕನೈ ಕಡಲುಂ ವೈಗುಂದಂ ವಾನ್ ನಾಡುಂ
ಪುಲ್ ಎನ್ರು ಒಳಿನ್ದನಕೊಲ್ ವಿಪಾವಂ
ವೆಲ್ಲನಡಿಯಾನ್ ನಿರಂಕರಿಯಾನ್ ಉಳ್ ಪುಗುಂದು
ನೀಂಗಾನ್ ಅಡಿಯೇನದು ಉಳ್ಳತ್ತು ಅಗಂ॥64॥

ಮಲೆಯು ಮೊರೆವ ಕಡಲು ಪರಮಪದ ವೈಕುಂಠ
ಹುಲ್ಲಂತೆ ಕೀಳಾಯಿತೇ ಎಲ್ಲ ಪಾಪವೇ!
ಮುಗಿಲ ಮುಟ್ಟಕೆ ಬೆಳೆದು ನಿಂತವ ಕಾಡುಕಪ್ಪಿನ
ಮೈಯವ ಅವ ಎನ್ನೊಳಹೊಕ್ಕು ಕದಲದೆಲೆ
ಎನ್ನೊಡಲಲ್ಲೆ ಉಳಿದಿಹನಲ್ಲ !

ಹೀಗೇ ಆಳ್ವಾರರು ತಿರುಮಲೆಯ ಶ್ರೀ ಶ್ರೀನಿವಾಸನನ್ನು ದರ್ಶಿಸಿ ಕೃತಾರ್ಥರಾಗಿದ್ದಾರೆ.




**ಗಮನಕ್ಕೆ :**

ಶ್ರೀವರಲಕ್ಷ್ಮೀ ವ್ರತವನ್ನು ಶ್ರಾವಣ ಮಾಸದಲ್ಲಿ ಹುಣ್ಣಿಮೆಯ ಮೊದಲು ಬರುವ ಶುಕ್ರವಾರದಂದು- **(ಯಾವ ತಿಥಿ ಬಂದಿದ್ದರೂ ಸರಿ)** ಆಚರಿಸಬೇಕು. ಒಂದು ವೇಳೆ ಯಾವುದಾದರೂ ಅಡ್ಡಿ ಒದಗಿದರೆ-ಶ್ರಾವಣ ಮಾಸದಲ್ಲಿನ ಯಾವ ಶುಕ್ರವಾರವಾದರೂ ಮಾಡಬಹುದು. ಆಗಲೂ ಸಾಧ್ಯವಾಗದಿದ್ದ ಪಕ್ಷದಲ್ಲಿ ದಸರಾ ಹಬ್ಬದಲ್ಲಿ ಬರುವ ಶುಕ್ರವಾರದಂದು ಆಚರಿಸಬಹುದು.

**ಸೂಚನೆ :**

ದೀಪಾರಾಧನೆ, ಸಂಕಲ್ಪ, ಕಲಶ ಪೂಜೆ, ಗಣಪತಿ ಪೂಜೆಯ ವಿಷಯಗಳು ವಿನಾಯಕ ವ್ರತದಲ್ಲಿ ಬರುವಂತೆಯೇ ಇಲ್ಲೂ ಆಚರಿಸಬೇಕು. ಸಂಕಲ್ಪ ಮಂತ್ರವನ್ನು ಮಾತ್ರ ಈ ಕೆಳಕಂಡ ರೀತಿಯಲ್ಲಿ ಹೇಳಿಕೊಳ್ಳಬೇಕು.

"ಮಮ ಉಪಾತ್ತ ಸಮಸ್ತ ದುರಿತ ಕ್ಷಯ ದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ, ಶುಭೇ ಶೋಭನೇ ಮುಹೂರ್ತೇ (ಸಂವತ್ಸರ-ಮೊದಲಾದವುಗಳನ್ನು ಹೇಳಬೇಕು) ಅಸ್ಮಾಕಂ ಸಹ ಕುಟುಂಬಾನಾಂ ಕ್ಷೇಮಸ್ಥೈರ್ಯ ವಿಜಯ ಆಯುರಾರೋಗ್ಯ ಐಶ್ವರ್ಯ ಅಭಿವೃದ್ಧ್ಯರ್ಥಂ, ಧರ್ಮಾರ್ಥ ಕಾಮಮೋಕ್ಷ ಚತುರ್ವಿಧ ಪುರುಷಾರ್ಥಫಲಸಿದ್ಧ್ಯರ್ಥಂ,ಸತ್ ಸಂತಾನ ಸೌಭಾಗ್ಯ ಶುಭಫಲ ಪ್ರಾಪ್ತ್ಯರ್ಥಂ, ವರ್ಷೇ ವರ್ಷೇ ಪ್ರಯುಕ್ತಾಂ ಏತದ್ ವರ್ಷೇ ಶ್ರೀವರಲಕ್ಷ್ಮೀ ದೇವತಾ ಉದ್ದಿಶ್ಯ, ಶ್ರೀವರಲಕ್ಷ್ಮೀ ದೇವತಾ ಪ್ರೀತ್ಯರ್ಥಂ ಭವಿಷ್ಯೋತ್ತರ ಪುರಾಣ ಕಲ್ಪೋಕ್ತ ಪ್ರಕಾರೇಣ ಯಾವಚ್ಛಕ್ತಿ ಧ್ಯಾನ ಆವಾಹ ನಾದಿ ಷೋಡಶ ಉಪಚಾರ ಪೂಜಾಂ ಕರಿಷ್ಯೇ" (ಎಂದು ಹೇಳಿ, ಶ್ರೀವರಲಕ್ಷ್ಮೀ ದೇವಿಯ ಪಟದ ಮೇಲೆ, ಕಲಶದ ಮೇಲೆ, ಹೂವು, ಅಕ್ಷತೆಗಳನ್ನು ಹಾಕಿ ನಮಸ್ಕರಿಸಬೇಕು) (ನಂತರ ಕಲಶ ಪೂಜೆ, ಗಣಪತಿ ಪೂಜೆಯನ್ನು ಮಾಡಬೇಕು.)

**ಶ್ರೀವರಲಕ್ಷ್ಮೀದೇವೀ ಧ್ಯಾನಂ**

"ಓಂ ಪದ್ಮಾಸನೇ ಪದ್ಮಕರೇ ಸರ್ವಲೋಕೈಕಪೂಜಿತೇ।
ನಾರಾಯಣಪ್ರಿಯೇ ದೇವಿ ! ಸುಪ್ರೀತಾ ಭವ ಸರ್ವದಾ॥
ಓಂ ಕ್ಷೀರೋದಾರ್ಣವಸಂಭೂತೇ। ಕಮಲೇ ಕಮಲಾಲಯೇ॥
ಸುಸ್ಥಿರಾ ಭವ ಮೇ ಗೇಹೇ ಸುರಾಸುರನಮಸ್ಕೃತೇ।
ಓಂ ಶ್ರೀ ವರಲಕ್ಷ್ಮೀದೇವತಾಂ ಧ್ಯಾಯಾಮಿ

( ಎಂದು ಹೇಳಿ, ಹೂಗಳು, ಅಕ್ಷತೆಗಳನ್ನು ಅಮ್ಮನವರ ಕಲಶ, ಪಟದ ಬಳಿ ಇರಿಸಿ, ನಮಸ್ಕರಿಸಬೇಕು.)

**ಆವಾಹನೆ**

ಶ್ಲೋ॥ ಓಂ ದೇವಿ! ತ್ರೈಲೋಕ್ಯಜನನಿ! ಸರ್ವಲೋಕೈಕಪಾವನಿ।
ಆಗಚ್ಛ ವರದೇ! ಮಾತಃ ಪ್ರಸೀದ ಪರಮಾತ್ಮಿಕೇ।
ಓಂ ಶ್ರೀ ವರಲಕ್ಷ್ಮೀ ದೇವತಾಂ ಆವಾಹಯಾಮಿ

(ಎಂದು ಹೇಳಿ, ಹೂಗಳು, ಅಕ್ಷತೆಗಳನ್ನು ಲಕ್ಷ್ಮೀದೇವಿಯ ಪಟದ ಮೇಲೆ, ಕಲಶದ ಮೇಲೆ ಹಾಕಿ ನಮಸ್ಕರಿಸಬೇಕು)

**ಆಸನ**

ಶ್ಲೋ॥ ಓಂ ಸ್ವರ್ಣರತ್ನಮಯಂ ದಿವ್ಯಂ ಹೇಮವರ್ಣಂ ಸುಶೋಭಿತಮ್।
ಆಸನಂ ತೇ ಪ್ರದಾಸ್ಯಾಮಿ ಸ್ವೀಕುರುಷ್ವ ಹರಿಪ್ರಿಯೇ।
ಓಂ ಶ್ರೀವರಲಕ್ಷ್ಮೀದೇವತಾಯೈ ನಮಃ ರತ್ನಸಿಂಹಾಸನಂ ಸಮರ್ಪಯಾಮಿ.

(ಎಂದು ಹೇಳಿ ಅಮ್ಮನವರ ಕಲಶದ ಬಳಿ, ಪಟದ ಬಳಿ ಹೂಗಳು, ಅಕ್ಷತೆಗಳನ್ನು ಇರಿಸಿ ನಮಸ್ಕರಿಸಬೇಕು)

**ಪಾದ್ಯ**

ಶ್ಲೋ॥ ಓಂ ಗಂಗಾದಿಸಲಿಲೈರ್ಯುಕ್ತಂ ಸುಗಂಧೇನ ಸುವಾಸಿತಮ್।
ಪಾದ್ಯಂ ಗೃಹಾಣ ಶ್ರೀದೇವಿ! ಸರ್ವದೇವನಮಸ್ಕೃತೇ।
ಓಂ ವರಲಕ್ಷ್ಮೀ ದೇವತಾಯೈನಮಃ ಪಾದಯೋಃ ಪಾದ್ಯಂ ಸಮರ್ಪಯಾಮಿ

(ಎಂದು ಹೇಳಿ, ಕಲಶದಲ್ಲಿನ ನೀರನ್ನು ಎರಡು ಬಾರಿ ಉದ್ಧರಣೆಯಿಂದ ತೆಗೆದುಕೊಂಡು, ಅಮ್ಮನವರ ಕಲಶದ ಬಳಿ ಪಾದಗಳು ಇರುವಂತೆ ಭಾವಿಸಿ, ಅದಕ್ಕೆ ಮುಟ್ಟಿಸಿ, ಆ ನೀರನ್ನು ಅರ್ಘ್ಯ ಪಾತ್ರೆಯಲ್ಲಿ ಹಾಕಬೇಕು)

28

VEERA LAKSHMI

SANTHANA LAKSHMI

GAJA LAKSHMI

DHANYA LAKSHMI

VIJAYA LAKSHMI

DHANA LAKSHMI

ADHI LAKSHMI

AISWARYA LAKSHMI

**ಲಕ್ಷ್ಮೀಂಕ್ಷೀರ ಸಮುದ್ರರಾಜ ತನಯಾಂ ಶ್ರೀರಂಗ ಧಾಮೇಶ್ವರೀಂ ದಾಸಿಭೂತ ಸಮಸ್ತ ದೇವ ವನಿತಾಂ ಲೋಕೈಕ ದೀಪಾಂಕುರಾಂ**
**ಶ್ರಮನ್ಮಂದ ಕಟಾಕ್ಷಲಬ್ಧ ವಿಭವತ್ ಬ್ರಹ್ಮೇಂದ್ರ ಗಂಗಾಧರಾಂ ತ್ವಾಂ ತ್ರೈಲೋಕ್ಯ ಕುಟುಂಬನಾಂ ಸರಸಿಜಾಂ ವಂದೇ ಮುಕುಂದ ಪ್ರಿಯಾಂ**

**ಭಾವಾರ್ಥ :-** ಲಕ್ಷ್ಮೀದೇವಿ! ಕ್ಷೀರ ಸಾಗರದ ರಾಜನ ಕುವರಿಯಾದ ಶ್ರೀರಂಗದ ಅಧಿಪತಿಯಾದ, ದಾಸ ದಾಸರ ಜನರು, ಎಲ್ಲಾ ದೇವರುಗಳು ಮತ್ತು ದೇವತೆಗಳು ಮತ್ತು ಎಲ್ಲಾ ಲೋಕಗಳನ್ನು ಬೆಳಗಿಸುವ ಬೆಳಕು ನೀನು. ಬ್ರಹ್ಮ, ಇಂದ್ರ, ಶಿವ ಮುಂತಾದವರು ಸಹ ಶ್ರೀಮಂತರ ತಂಪಾದ ನೋಟದ ಮೂಲಕ ವೈಭವವನ್ನು ಪಡೆದರು. ಮೂರು ಲೋಕಗಳು ನಿನ್ನ ಕುಟುಂಬವೇ ಪದ್ಮದಲ್ಲಿ ಹುಟ್ಟಿದ, ವಿಷ್ಣುವಿಗೆ ಇಷ್ಟ ಸಖಿಯಾದ ಓ ಲಕ್ಷ್ಮಿದೇವಿ! ನಿನಗೆ ನಮಸ್ಕಾರಗಳು.

ಅರ್ಘ್ಯ :

ಶ್ಲೋ: ಓಂ ಶುದ್ಧೋದಕಂ ಚ ಪಾತ್ರಸ್ಥಂ ಗಂಧಪುಷ್ಪಾದಿಮಿಶ್ರಿತಮ್।
ಅರ್ಘ್ಯಂ ದಾಸ್ಯಾಮಿ ತೇ ದೇವಿ! ಗೃಹಾಣ ಸುರಪೂಜಿತೇ॥
ಓಂ ಶ್ರೀವರಲಕ್ಷ್ಮೀದೇವತಾಯೈ ನಮಃ ಹಸ್ತಯೋಃ ಅರ್ಘ್ಯಂ ಸಮರ್ಪಯಾಮಿ

(ಎಂದು ಹೇಳಿ, ಕಲಶದಲ್ಲಿನ ನೀರನ್ನು ಎರಡು ಬಾರಿ ಉದ್ಧರಣೆಯಿಂದ ತೆಗೆದುಕೊಂಡು ಅಮ್ಮನವರ ಕೈಗಳಿಗೆ ಮುಟ್ಟಿಸಿ ಆ ನೀರನ್ನು ಅರ್ಘ್ಯ ಪಾತ್ರೆಯಲ್ಲಿ ಸಮರ್ಪಿಸಬೇಕು)

ಆಚಮನ

ಶ್ಲೋ॥ ಓಂ ಸುವರ್ಣಕಲಶಾನೀತಂ, ಚಂದನಾಗರು ಸಂಯುತಮ್।
ಗೃಹಾಣಾಚಮನಂ ದೇವೀ ! ಮಯಾ ದತ್ತಂ ಶುಭಪ್ರದೇ॥
ಓಂ ಶ್ರೀವರಲಕ್ಷ್ಮೀ ದೇವತಾಯೈ ನಮಃ ಮುಖೇ ಆಚಮನೀಯಂ ಸಮರ್ಪಯಾಮಿ

(ಎಂದು ಹೇಳಿ, ಮೂರು ಬಾರಿ ಉದ್ಧರಣೆಯಿಂದ ಕಲಶದಲ್ಲಿನ ನೀರನ್ನು ತೆಗೆದುಕೊಂಡು, ಅಮ್ಮನವರ ಮುಖಕ್ಕೆ ಮುಟ್ಟಿಸಿ, ಅರ್ಘ್ಯ ಪಾತ್ರೆಯಲ್ಲಿ ಸಮರ್ಪಿಸಬೇಕು)

ಪಂಚಾಮೃತಸ್ನಾನ (ಹಾಲು, ಮೊಸರು ತುಪ್ಪ, ಜೇನು ತುಪ್ಪ, ಸಕ್ಕರೆಯ ಮಿಶ್ರಮ ದ್ರವ್ಯ)

ಶ್ಲೋ॥ ಓಂ ಪಯೋದಧಿಘೃತೋಪೇತಂಶರ್ಕರಾಮಧು ಸಂಯುತಮ್।
ಪಂಚಾಮೃತಸ್ನಾನ ಮಿದಂ, ಗೃಹಾಣ ಕಮಲಾಲಯೇ।
ಓಂ ಶ್ರೀವರಲಕ್ಷ್ಮೀದೇವತಾಯೈ ನಮಃ ಪಂಚಾಮೃತ ಸ್ನಾನಂ ಸಮರ್ಪಯಾಮಿ

(ಎಂದು ಹೇಳಿ, ಪಂಚಾಮೃತದಲ್ಲಿ ಹೂವನ್ನು ಅದ್ದಿ ಐದು ಬಾರಿ ಸ್ವಲ್ಪ ಸ್ವಲ್ಪ ಅಮ್ಮನವರ ಕಲಶದ ಮೇಲೆ ಪಟದ ಮೇಲೆ ಸಮರ್ಪಿಸಬೇಕು.)

ಶುದ್ಧೋದಕ ಸ್ನಾನ

ಶ್ಲೋ। ಓಂ ಗಂಗಾಜಲಂ ಮಯಾನೀತಂ ಮಹಾದೇವಶಿರಃ ಸ್ಥಿತಮ್।
ಸುಗಂಧಿದ್ರವ್ಯ ಸಂಯುಕ್ತಂ ಜಲಂ ಸ್ನಾನಾಯ ಗೃಹ್ಯತಾಮ್॥
ಓಂ ಶ್ರೀವರಲಕ್ಷ್ಮೀ ದೇವತಾಯೈ ನಮಃ ಸುಗಂಧಿದ್ರವ್ಯ ಸಂಯುಕ್ತಶುದ್ಧೋದಕ ಸ್ನಾನಂ ಸಮರ್ಪಯಾಮಿ

(ಎಂದು ಹೇಳಿ, ಕಲಶದಲ್ಲಿನ ನೀರನ್ನು ಉದ್ಧರಣೆಯಿಂದ ತೆಗೆದುಕೊಂಡು ಆ ನೀರನಲ್ಲಿ ಹೂವನ್ನು ಅದ್ದಿ ಕಲಶದ ಮೇಲೆ, ಪಟದ ಮೇಲೆ ಸಮರ್ಪಿಸಬೇಕು)'ಸ್ನಾನಾನಂತರಂ ಆಚಮನೀಯಂ ಸಮರ್ಪಯಾಮಿ' (ಎಂದು ಹೇಳಿ, ಕಲಶದಲ್ಲಿನ ನೀರನ್ನು ಉದ್ಧರಣೆಯಿಂದ ತೆಗೆದುಕೊಂಡು ಅಮ್ಮನವರ ಮುಖದ ಬಳಿ ತೋರಿಸಿ, ಅರ್ಘ್ಯಪಾತ್ರೆಯಲ್ಲಿ ಸಮರ್ಪಿಸಬೇಕು.)

ವಸ್ತ್ರ

ಶ್ಲೋ॥ ಓಂ ಸುರಾರ್ಚಿತಾಂಘ್ರಿಯುಗಳೇ ದುಕೂಲವಸನಪ್ರಿಯೇ।
ವಸ್ತ್ರಯುಗ್ಮಂ ಪ್ರದಾಸ್ಯಾಮಿ ಗೃಹಾಣ ಹರಿವಲ್ಲಭೇ॥
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃವಸ್ತ್ರಯುಗ್ಮಂ ಸಮರ್ಪಯಾಮಿ

(ಎಂದು ಹೇಳಿ, ಎರಡು ಗೆಜ್ಜೆ ವಸ್ತ್ರಗಳನ್ನು ಅಮ್ಮನವರ ಕಲಶಕ್ಕೆ, ಹಾಗೇ ಅಮ್ಮನವರ ಪಟಕ್ಕೆ ಹಾಕಬೇಕು)

ಆಭರಣಗಳು

ಶ್ಲೋ॥ ಓಂ ಕೇಯೂರಕಂಕಣೇ ದಿವ್ಯೇ ಹಾರನೂಪುರಮೇಖಲಾಃ
ವಿಭೂಷಣಾನಿ ಅಮೂಲ್ಯಾನಿ ಗೃಹಾಣ ಋಷಿಪೂಜಿತೇ॥
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ಆಭರಣಾನಿ ಸಮರ್ಪಯಾಮಿ

(ಮೊದಲೇ ಆಭರಣಗಳನ್ನು ಅಮ್ಮನವರಿಗೆ ಅಲಂಕರಿಸಿರುತ್ತೇವೆ ಆದ್ದರಿಂದ ಹೂವು, ಅಕ್ಷತೆಗಳನ್ನು ತೆಗೆದುಕೊಂಡು, ಕಲಶದ ಮೇಲೆ, ಪಟದ ಮೇಲೆ ಇರಿಸಿ ನಮಸ್ಕರಿಸಬೇಕು.)

ಯಜ್ಞೋಪವೀತ (ಜನಿವಾರ)

ಶ್ಲೋ॥ ಓಂ ತಪ್ತಹೇಮಕೃತಂ ದೇವಿ! ಮುಕ್ತಾದಾಮಸಮನ್ವಿತಮ್।
ಉಪವೀತಂ ಮಯಾ ದತ್ತಂ ಗೃಹಾಣ ತ್ವಂ ಶುಭಪ್ರದೇ॥
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ಯಜ್ಞೋಪವೀತಂ ಸಮರ್ಪಯಾಮಿ

(ಎಂದು ಹೇಳಿ, ಹತ್ತಿಯಿಂದ ಮಾಡಿದ ಜನಿವಾರವನ್ನು ಅಮ್ಮನವರಿಗೆ ಸಮರ್ಪಿಸಬೇಕು)

ಗಂಧ

ಶ್ಲೋ॥ ಓಂ ಕರ್ಪೂರಾಗರುಕಸ್ತೂರೀ ರೋಚನಾದಿಭಿರನ್ವಿತಮ್।
ಗಂಧಂ ದಾಸ್ಯಾ ಮ್ಯಹಂ ದೇವಿ!ಪ್ರೀತ್ಯರ್ಥಂ ಪ್ರತಿ ಗೃಹ್ಯಾತಾಮ್॥
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ದಿವ್ಯ ಪರಿಮಳಗಂಧಾನ್ ಧಾರಯಾಮಿ

(ಎಂದು ಹೇಳಿ, ಗಂಧವನ್ನು ಹೂವಿನಲ್ಲಿ ಅದ್ದಿ ಕಲಶದ ಮೇಲೆ ಪಟದ ಮೇಲೆ ಇರಿಸಬೇಕು.)

ಹರಿದ್ರಾಚೂರ್ಣ (ಅರಿಶಿನ), ಕುಂಕುಮ, ಅಕ್ಷತೆ

ಶ್ಲೋ॥ ಓಂ ಅಕ್ಷತಾನ್ ಧವಳಾನ್ ದೇವಿ! ಶಾಲೀಯಾಂ ಸ್ತಂಡುಲಾನ್ ಶುಭಾನ್।
ಹರಿದ್ರಾಕುಂಕಮೋಪೇತಾನ್ ಗೃಹ್ಯತಾಂ ಅಬ್ಜಪುತ್ರಿಕೇ॥
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ಅಕ್ಷತಾನ್, ಹರಿದ್ರಾಚೂರ್ಣಂ, ಕುಂಕುಮಂ ಸಮರ್ಪಯಾಮಿ

(ಎಂದು ಹೇಳಿ, ಅಕ್ಷತೆಗಳು, ಅರಿಶಿನ, ಕುಂಕುಮವನ್ನು ಅಮ್ಮನವರಿಗೆ ಸಮರ್ಪಿಸಬೇಕು.)

ಪುಷ್ಪ ಸಮರ್ಪಣೆ

ಶ್ಲೋ॥ ಓಂ ಮಲ್ಲಿಕಾಜಾತಿಕುಸುಮೈಃ ಚಂಪಕೈರ್ ವಕುಳೈರಪಿ।
ಶತಪತ್ರೈಶ್ಚ ಕಲ್ಹಾರೈಃ ಪೂಜಯಾಮಿ ಹರಿಪ್ರಿಯೇ।
ಓಂ ಶ್ರೀ ವರಲಕ್ಷ್ಮೀ ದೇವತಾಯೈ ನಮಃ ನಾನಾವಿಧಪರಿಮಳ ಪತ್ರಪುಷ್ಪಾಣಿ ಸಮರ್ಪಯಾಮಿ

(ಎಂದು ಹೇಳಿ, ಹೂಗಳನ್ನು ಕಲಶಕ್ಕೆ ಮತ್ತು ಅಮ್ಮನವರ ಪಟಕ್ಕೆ ಸಮರ್ಪಿಸಿ ನಮಸ್ಕರಿಸಬೇಕು)

ಶ್ರೀ ವರಲಕ್ಷ್ಮೀದೇವಿಗೆ ಅಂಗಪೂಜೆಯನ್ನು ಮಾಡಬೇಕು

(ಅಮ್ಮನವರಿಗೆ ಪಾದಗಳಿಂದ, ಶಿರಸ್ಸಿನವರೆಗೂ ಹೂಗಳಿಂದ ಪೂಜೆಯನ್ನು ಮಾಡಬೇಕು)

ಓಂ ಶ್ರೀ ಚಂಚಲಾಯೈ ನಮಃ ಪಾದೌ ಪೂಜಯಾಮಿ ( ಪಾದಗಳಿಗೆ)
ಓಂ ಶ್ರೀ ಚಪಲಾಯೈ ನಮಃ ಜಾನುನೀ ಪೂಜಯಾಮಿ
(ಮೊಣಕಾಲುಗಳಿಗೆ)
ಓಂ ಶ್ರೀ ಪೀತಾಂಬರಾಯೈ ನಮಃ ಊರು ಪೂಜಯಾಮಿ (ತೊಡೆಗಳಿಗೆ)
ಓಂ ಶ್ರೀ ಕಮಲವಾಸಿನ್ಯೈ ನಮಃ ಕಟಿಂ ಪೂಜಯಾಮಿ (ನಡುವಿಗೆ)
ಓಂ ಶ್ರೀ ಪದ್ಮಾಲಯಾಯೈ ನಮಃ ನಾಭಿಂ ಪೂಜಯಾಮಿ (ಹೊಕ್ಕಳು)
ಓಂ ಶ್ರೀ ಮದನಮಾತ್ರೇ ನಮಃ ಸ್ತನೌ ಪೂಜಯಾಮಿ (ಸ್ತನಗಳು)
ಓಂ ಶ್ರೀ ಲಲಿತಾಯೈ ನಮಃ ಭುಜದ್ವಯಂ ಪೂಜಯಾಮಿ (ಭುಜಗಳು)
ಓಂ ಶ್ರೀ ಕಂಬುಕಂಠ್ಯೈ ನಮಃ ಕಂಠಂ ಪೂಜಯಾಮಿ (ಕುತ್ತಿಗೆ)
ಓಂ ಶ್ರೀ ಸುಮುಖಾಯೈ ನಮಃ ಮುಖಿಂ ಪೂಜಯಾಮಿ (ಮುಖ)
ಓಂ ಶ್ರೀ ಶ್ರಿಯೈ ನಮಃ ಓಷ್ಠೌ ಪೂಜಯಾಮಿ (ತುಟಿಗಳು)
ಓಂ ಶ್ರೀ ಸುನಾಸಿಕಾಯೈ ನಮಃ ನಾಸಿಕಾಂ ಪೂಜಯಾಮಿ (ಮೂಗು)
ಓಂ ಶ್ರೀ ಸುನೇತ್ರ್ಯೈ ನಮಃ ನೇತ್ರೇ ಪೂಜಯಾಮಿ (ಕಣ್ಣುಗಳು)
ಓಂ ಶ್ರೀ ರಮಾಯೈ ನಮಃ ಕರ್ಣೌ ಪೂಜಯಾಮಿ (ಕಿವಿಗಳು)
ಓಂ ಶ್ರೀ ಕಮಲಾಯೈ ನಮಃ ಶಿರಃ ಪೂಜಯಾಮಿ (ತಲೆ)
ಓಂ ಶ್ರೀ ವರಲಕ್ಷ್ಮೀದೇವ್ಯೈ ನಮಃ ಸರ್ವಾಣಿ ಅಂಗಾನಿ ಪೂಜಯಾಮಿ

(ನಂತರ ಶ್ರೀ ಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿಯೊಂದಿಗೆ
ಕುಂಕುಮದೊಂದಿಗೆ ಅಥವಾ ಹೂಗಳಿಂದಾಲೀ ಪೂಜಿಸಬೇಕು)



ಓಂ ಪ್ರಕೃತ್ಯೈ ನಮಃ
ಓಂ ವಿಕೃತ್ಯೈ ನಮಃ
ಓಂ ವಿದ್ಯಾಯೈ ನಮಃ
ಓಂ ಸರ್ವಭೂತಹಿತಪ್ರದಾಯೈ ನಮಃ
ಓಂ ಶ್ರದ್ಧಾಯೈ ನಮಃ
ಓಂ ವಿಭೂತ್ಯೈ ನಮಃ
ಓಂ ಸುರಭ್ಯೈ ನಮಃ
ಓಂ ಪರಮಾತ್ಮಿಕಾಯೈ ನಮಃ
ಓಂ ವಾಚೇ ನಮಃ
ಓಂ ಪದ್ಮಾಲಯಾಯೈ ನಮಃ
ಓಂ ಪದ್ಮಾಯೈ ನಮಃ
ಓಂ ಶುಚ್ಯೈ ನಮಃ
ಓಂ ಸ್ವಾಹಾಯೈ ನಮಃ
ಓಂ ಸ್ವಧಾಯೈ ನಮಃ
ಓಂ ಸುಧಾಯೈ ನಮಃ
ಓಂ ಧನ್ಯಾಯೈ ನಮಃ
ಓಂ ಹಿರಣ್ಮಯ್ಯೈ ನಮಃ
ಓಂ ಲಕ್ಷ್ಮ್ಯೈ ನಮಃ
ಓಂ ನಿತ್ಯ ಪುಷ್ಟಾಯೈ ನಮಃ
ಓಂ ವಿಭಾವರ್ಯೈ ನಮಃ
ಓಂ ಅದಿತ್ಯೈ ನಮಃ
ಓಂ ದಿತ್ಯೈ ನಮಃ
ಓಂ ದೀಪ್ತಾಯೈ ನಮಃ
ಓಂ ವಸುಧಾಯೈ ನಮಃ
ಓಂ ವಸುಧಾರಿಣ್ಯೈ ನಮಃ
ಓಂ ಕಮಲಾಯೈ ನಮಃ
ಓಂ ಕಾಂತಾಯೈ ನಮಃ
ಓಂ ಕಾಮಾಕ್ಷ್ಯೈ ನಮಃ
ಓಂ ಕ್ರೋದಸಂಭವಾಯೈ ನಮಃ
ಓಂ ಅನುಗ್ರಹಪರಾಯೈ ನಮಃ

ಓಂ ಬುದ್ಧಯೇ ನಮಃ
ಓಂ ಅನಘಾಯೈ ನಮಃ
ಓಂ ಹರಿವಲ್ಲಭಾಯೈ ನಮಃ
ಓಂ ಅಶೋಕಾಯೈ ನಮಃ
ಓಂ ಅಮೃತಾಯೈ ನಮಃ
ಓಂ ದೀಪ್ತಾಯೈ ನಮಃ
ಓಂ ಲೋಕಶೋಕವಿನಾಶಿನ್ಯೈ ನಮಃ
ಓಂ ಧರ್ಮನಿಲಯಾಯೈ ನಮಃ
ಓಂ ಕರುಣಾಯೈ ನಮಃ
ಓಂ ಲೋಕಮಾತ್ರೇ ನಮಃ
ಓಂ ಪದ್ಮಪ್ರಿಯಾಯೈ ನಮಃ
ಓಂ ಪದ್ಮಹಸ್ತಾಯೈ ನಮಃ
ಓಂ ಪದ್ಮಾಕ್ಷ್ಯೈ ನಮಃ
ಓಂ ಪದ್ಮಸುಂದರ್ಯೈ ನಮಃ
ಓಂ ಪದ್ಮೋದ್ಭವಾಯೈ ನಮಃ
ಓಂ ಪದ್ಮಮುಖ್ಯೈ ನಮಃ
ಓಂ ಪದ್ಮನಾಭಪ್ರಿಯಾಯೈ ನಮಃ
ಓಂ ರಮಾಯೈ ನಮಃ
ಓಂ ಪದ್ಮಮಾಲಾಧರಾಯೈ ನಮಃ
ಓಂ ದೇವ್ಯೈ ನಮಃ
ಓಂ ಪದ್ಮಿನ್ಯೈ ನಮಃ
ಓಂ ಪದ್ಮಗಂಧಿನ್ಯೈ ನಮಃ
ಓಂ ಪುಣ್ಯಗಂಧಾಯೈ ನಮಃ
ಓಂ ಸುಪ್ರಸನ್ನಾಯೈ ನಮಃ
ಓಂ ಪ್ರಸಾದಾಭಿಮುಖ್ಯೈ ನಮಃ
ಓಂ ಪ್ರಭಾಯೈ ನಮಃ
ಓಂ ಚಂದ್ರವದನಾಯೈ ನಮಃ
ಓಂ ಚಂದ್ರಾಯೈ ನಮಃ
ಓಂ ಚಂದ್ರ ಸಹೋದರ್ಯೈನಮಃ
ಓಂ ಚತುರ್ಭಜಾಯೈ ನಮಃ

ಓಂ ಚಂದ್ರರೂಪಾಯೈ ನಮಃ
ಓಂ ಇಂದಿರಾಯೈ ನಮಃ
ಓಂ ಇಂದುಶೀತಲಾಯೈ ನಮಃ
ಓಂ ಅಹ್ಲೋದಜನನ್ಯೈ ನಮಃ
ಓಂ ಪುಷ್ಟ್ಯೈ ನಮಃ
ಓಂ ಶಿವಾಯೈ ನಮಃ
ಓಂ ಶಿವಕರ್ಯೈ ನಮಃ
ಓಂ ಸತ್ಯೈ ನಮಃ
ಓಂ ವಿಮಲಾಯೈ ನಮಃ
ಓಂ ವಿಶ್ವಜನನ್ಯೈ ನಮಃ
ಓಂ ತುಷ್ಟೈ ನಮಃ
ಓಂ ದಾರಿದ್ರ್ಯ ನಾಶಿನ್ಯೈ ನಮಃ
ಓಂ ಪ್ರೀತಿಪುಷ್ಕರಿಣ್ಯೈ ನಮಃ
ಓಂ ಶಾಂತಾಯೈ ನಮಃ
ಓಂ ಶುಕ್ಲಮಾಲ್ಯಾಂಬರಾಯೈ ನಮಃ
ಓಂ ಶ್ರಿಯೈ ನಮಃ
ಓಂ ಭಾಸ್ಕರ್ಯೈ ನಮಃ
ಓಂ ಬಿಲ್ವನಿಲಯಾಯೈ ನಮಃ
ಓಂ ವರಾರೋಹಾಯೈ ನಮಃ
ಓಂ ಯಶಸ್ವಿನ್ಯೈ ನಮಃ
ಓಂ ವಸುಂಧರಾಯೈ ನಮಃ
ಓಂ ಉದಾರಾಂಗಾಯೈ ನಮಃ
ಓಂ ಹರಿಣ್ಯೈ ನಮಃ
ಓಂ ಹೇಮಮಾಲಿನ್ಯೈ ನಮಃ
ಓಂ ಧನಧಾನ್ಯಕರ್ಯೈ ನಮಃ
ಓಂ ಸಿದ್ಧಯೇ ನಮಃ
ಓಂ ಸ್ತ್ರೈಣ ಸೌಮ್ಯಾಯೈ ನಮಃ
ಓಂ ಶುಭಪ್ರದಾಯೈ ನಮಃ
ಓಂ ನೃಪವೇಶ್ಮ ಗತಾನಂದಾಯೈ ನಮಃ
ಓಂ ವರಲಕ್ಷ್ಮ್ಯೈ ನಮಃ

ಓಂ ವಸುಪ್ರದಾಯೈ ನಮಃ
ಓಂ ಶುಭಾಯೈ ನಮಃ
ಓಂ ಹಿರಣ್ಯಪ್ರಾಕಾರಾಯೈ ನಮಃ
ಓಂ ಸಮುದ್ರ ತನಯಾಯೈ ನಮಃ
ಓಂ ಜಯಾಯೈ ನಮಃ
ಓಂ ಮಂಗಳಾದೇವ್ಯೈ ನಮಃ
ಓಂ ವಿಷ್ಣು ವಕ್ಷಃಸ್ಥಲಸ್ಥಿತಾಯೈ ನಮಃ
ಓಂ ವಿಷ್ಣುಪತ್ನ್ಯೈ ನಮಃ
ಓಂ ಪ್ರಸನ್ನಾಕ್ಷ್ಯೈ ನಮಃ
ಓಂ ನಾರಾಯಣ ಸಮಾಶ್ರಿತಾಯೈ ನಮಃ
ಓಂ ದಾರಿದ್ರ್ಯ ಧ್ವಂಸಿನ್ಯೈ ನಮಃ
ಓಂ ದೇವ್ಯೈ ನಮಃ
ಓಂ ಸರ್ವೋಪದ್ರವವಾರಿಣ್ಯೈ ನಮಃ
ಓಂ ನವದುರ್ಗಾಯೈ ನಮಃ
ಓಂ ಮಹಾಕಾಳ್ಯೈ ನಮಃ
ಓಂ ಬ್ರಹ್ಮವಿಷ್ಣುಶಿವಾತ್ಮಿಕಾಯೈ ನಮಃ
ಓಂ ತ್ರಿಕಾಲಜ್ಞಾನ ಸಂಪನ್ನಾಯೈ ನಮಃ
ಓಂ ಭುವನೇಶ್ವರ್ಯೈ ನಮಃ
ಓಂ ಶ್ರೀ ವರಮಹಾಲಕ್ಷ್ಮೀ ದೇವ್ಯೈ ನಮಃ

ಇತಿ ಶ್ರೀ ಲಕ್ಷ್ಮೀ
ಅಷ್ಟೋತ್ತರ ಶತನಾಮಾವಳಿ
ಸಮಾಪ್ತಿ

ಧೂಪ

ಶ್ಲೋ॥ ಓಂ ದಶಾಂಗಂ ಗುಗ್ಗುಲೂಪೇತಂ ಸುಗಂಧಂ ಚ ಮನೋಹರಮ್ ।
ಧೂಪಂ ದಾಸ್ಯಾಮಿ ದೇವೇಶಿ! ಕೃಪಯಾ ಪರಿಗೃಹ್ಯತಾಮ್॥

ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ದಿವ್ಯ ಪರಿಮಳ ಧೂಪಂ ಅಘ್ರಾಪಯಾಮಿ

(ಎಂದು ಹೇಳಿ, ಗಂಟೆಯನ್ನು ಬಾರಿಸುತ್ತಾ ಅಮ್ಮನವರಿಗೆ ಧೂಪವನ್ನು ಮೂರು ಬಾರಿ ತೋರಿಸಬೇಕು)

ದೀಪ (ತುಪ್ಪದಲ್ಲಿ ನೆನೆಸಿದ ಹೂಬತ್ತಿಗಳಿಂದ ದೀಪವನ್ನು ಬೆಳಗಿಸಬೇಕು)

ಶ್ಲೋ॥ ಓಂ ಘೃತಾಕ್ತವರ್ತಿ ಸಂಯುಕ್ತಂ ಅಂಧಕಾರ ವಿನಾಶಮ್।
ದೀಪಂ ದಾಸ್ಯಾಮಿ ತೇ ದೇವಿ! ಗೃಹಾಣ ಮುದಿತಾಭವ॥

ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ದೀಪಂ ದರ್ಶಯಾಮಿ

(ಎಂದು ಹೇಳಿ, ಗಂಟೆಯನ್ನು ಬಾರಿಸುತ್ತಾ ದೀಪವನ್ನು ಅಮ್ಮನವರ ಪಾದಗಳ ಬಳಿ ಇರಿಸಿ , ಶಿರಸ್ಸಿನವರೆಗೂ ಮೂರು ಬಾರಿ ತೋರಿಸಬೇಕು.)

"ಧೂಪದೀಪಾನಂತರಂ ಆಚಮನೀಯಂ ಸಮರ್ಪಯಾಮಿ"

(ಎಂದು ಹೇಳಿ, ಕಲಶದಲ್ಲಿನ ನೀರನ್ನು ಉದ್ಧರಣೆಯಿಂದ ತೆಗೆದುಕೊಂಡು ಅಮ್ಮನವರ ಮುಖದ ಮುಂದೆ ತೋರಿಸಿ, ಅರ್ಘ್ಯ ಪಾತ್ರೆಯಲ್ಲಿ ಬಿಡಬೇಕು)

ನೈವೇದ್ಯ

(ನೈವೇದ್ಯಕ್ಕೆ ತೆಂಗಿನಕಾಯಿ, ಹಣ್ಣುಗಳು, ಬೆಲ್ಲದ ಅನ್ನ, ಪುಳಿಯೋಗರೆ, ಸಿಹಿ ಪದಾರ್ಥಗಳು ಮೊದಲಾದವುಗಳು ಇರಬೇಕು. ನೈವೇದ್ಯದಲ್ಲಿ ಬೆಳ್ಳುಳ್ಳಿ, ಈರುಳ್ಳಿ, ಮಸಾಲೆ ದಿನಸುಗಳನ್ನು ಉಪಯೋಗಿಸಬಾರದು.)

ಗಮನಕ್ಕೆ : ನೈವೇದ್ಯದ ಪದಾರ್ಥಗಳ ಮೇಲೆ ಕಲಶದಲ್ಲಿನ ನೀರನ್ನು ಹೂಗಳಿಂದ ಅಥವಾ ತುಳಸೀದಳದಿಂದ ಚಿಮುಕಿಸಬೇಕು.

ನೈವೇದ್ಯ ಮಂತ್ರ

ಶ್ಲೋ॥ ಓಂ ನೈವೇದ್ಯಂ ಷಡ್ರಸೋಪೇತಂ ದಧಿ ಮಧು
ಆಜ್ಯಸಂಯುತಮ್।
ನಾನಾಭಕ್ಷ್ಯ ಫಲೋಪೇತಂ ಗೃಹಾಣ ಹರಿವಲ್ಲಭೇ॥



ಓಂ ಶ್ರೀ ವರಲಕ್ಷ್ಮೀ ದೇವತಾಯೈ ನಮಃ 'ನಾರೀಕೇಳಫಲ ಖಂಡದ್ವಯ, ನಾನಾ ವಿಧ ಫಲ, ಭಕ್ಷ್ಯ ಸಹಿತಮಹಾ ನೈವೇದ್ಯಂ ಸಮರ್ಪಯಾಮಿ"

(ಎಂದು ಹೇಳಿ ಬಲಗೈನಲ್ಲಿ ಒಂದು ಹೂವನ್ನು ಹಿಡಿದುಕೊಂಡು) ಓಂಪ್ರಾಣಾತ್ಮನೇ ನಮಃ, ಓಂ ಅಪಾನಾತ್ಮನೇ ನಮಃ, ಓಂ ವ್ಯಾನಾತ್ಮನೇ ನಮಃ, ಓಂ ಉದಾನಾತ್ಮನೇ ನಮಃ, ಓಂ ಸಮಾನಾತ್ಮನೇ ನಮಃ (ಎಂದು ಹೇಳಿ ಐದು ಬಾರಿ ಕಲಶದಲ್ಲಿನ ನೀರನ್ನು ಉದ್ಧರಣೆಯಿಂದ ತೆಗೆದುಕೊಂಡು ಅಮ್ಮನವರಿಗೆ ತೋರಿಸಿ ಅರ್ಘ್ಯ ಪಾತ್ರೆಯಲ್ಲಿ ಬಿಡಬೇಕು)

ನಂತರ "ಮಧ್ಯೇ ಮಧ್ಯೇ ಪಾನೀಯಂ ಸಮರ್ಪಯಾಮಿ"(ಎಂದು ಹೇಳಿ,ಮೂರು ಬಾರಿ ಅಮ್ಮನವರಿಗೆ ಉದ್ಧರಣೆಯಿಂದ ನೀರನ್ನು ತೋರಿಸಿ, ಅರ್ಘ್ಯ ಪಾತ್ರೆಯಲ್ಲಿ ಬಿಡಬೇಕು. ನಂತರ ) "ಹಸ್ತ ಪ್ರಕ್ಷಾಳಯಾಮಿ, ಪಾದೌ ಪ್ರಕ್ಷಾಳಯಾಮಿ ಶುದ್ಧಾಚಮನೀಯಂ ಸಮರ್ಪಯಾಮಿ" ಎಂದು ಐದು ಬಾರಿ ಉದ್ಧರಣೆಯಿಂದ ನೀರನ್ನು ತೋರಿಸಿ ಅರ್ಘ್ಯ ಪಾತ್ರೆಯಲ್ಲಿ ಬಿಡಬೇಕು.

ತಾಂಬೂಲ

(ಮೂರು ವಿಳೇದಲೆ, ಎರಡು ಅಡಿಕೆ ಅಥವಾ ಎರಡು ಎಲೆ ಅಥವಾ ಮೂರು ಅಡಿಕೆಯನ್ನಾಗಲೀ ತಾಂಬೂಲದಲ್ಲಿ ಇಡಬೇಕು. ಯಥಾಶಕ್ತಿ ದಕ್ಷಿಣೆಯನ್ನೂ ಇಡಬೇಕು. ಅಡಿಕೆ ಪುಡಿಯ ಪೊಟ್ಟಣಗಳು, ಹರಿದುಹೋದ, ತೊಟ್ಟುಗಳು ಇಲ್ಲದ ವಿಳೇದೆಲೆಯನ್ನು ಉಪಯೋಗಿಸಬಾರದು. ಉತ್ತಮ ವಾದುವುಗಳನ್ನೇ ಇರಿಸಬೇಕು.)

ಶ್ಲೋ॥ ಓಂ ಪೂಗೀಫಲಸಮಾಯುಕ್ತಂ ನಾಗವಲ್ಲೀದಳೈರ್ಯುತಮ್।
ಕರ್ಪೂರಚೂರ್ಣಸಂಯುಕ್ತಂ ತಾಂಬೂಲಂ ಪ್ರತಿಗೃಹ್ಯತಾಮ್ ॥

ಓಂ ಶ್ರೀ ವರಲಕ್ಷ್ಮೀ ದೇವತಾಯೈ ನಮಃ ಸದಕ್ಷಿಣ ತಾಂಬೂಲಂ ಸಮರ್ಪಯಾಮಿ.

(ಎಂದು ಹೇಳಿ, ನಂತರ ಆ ನೀರನ್ನು ಅರ್ಘ್ಯ ಪಾತ್ರೆಯಲ್ಲಿ ಬಿಡಬೇಕು)

ಕರ್ಪೂರ ನೀರಾಜನ

ಶ್ಲೋ॥ ಓಂ ನೀರಾಜನಂ ಸಮಾನೀತಂ ಕರ್ಪೂರೇಣ ಸಮನ್ವಿತಮ್।
ತುಭ್ಯಂ ದಾಸ್ಯಾಮಿ ಅಹಂ ದೇವಿ! ಗೃಹ್ಯತಾಂ ವಿಷ್ಣುವಲ್ಲಭೇ।

ಓಂ ಶ್ರೀವರಲಕ್ಷ್ಮೀ ದೇವತಾಯೈ ನಮಃ ಕರ್ಪೂರ ನೀರಾಜನಂ ದರ್ಶಯಾಮಿ

(ಎಂದು ಹೇಳಿ, ಅಮ್ಮನವರ ಪಾದಗಳಿಂದ ಶಿರಸ್ಸಿನವರೆಗೂ ಮೂರು ಬಾರಿ ನಿಧಾನವಾಗಿ ಕರ್ಪೂರವನ್ನು ಹೊತ್ತಿಸಿ ಆರತಿಯನ್ನು ಮಾಡಬೇಕು. ಈ ಬೆಳಕಿನಲ್ಲಿ ಭಕ್ತರು ಅಮ್ಮನವರನ್ನು ದರ್ಶಿಸಬೇಕು.)

" ನೀರಾಜನಾನಂತರಂ ಆಚಮನೀಯಂ ಸಮರ್ಪಯಾಮಿ"

(ಎಂದು ಹೇಳಿ ಉದ್ಧರಣೆಯ ನೀರನ್ನು ಅಮ್ಮನವರಿಗೆ ತೋರಿಸಿ, ಅರ್ಘ್ಯಪಾತ್ರೆಯಲ್ಲಿ ಬಿಡಬೇಕು)

ಮಂತ್ರಪುಷ್ಪ

(ಕೈಯಲ್ಲಿ ಹೂಗಳು, ಅಕ್ಷತೆಯನ್ನು ತೆಗೆದುಕೊಂಡು)

ಶ್ಲೋ॥ ಓಂ ಪದ್ಮಾಸನೇ! ಪದ್ಮಕರೇ! ಸರ್ವಲೋಕೈಕ ಪೂಜಿತೇ।
ನಾರಾಯಣಪ್ರಿಯೇ ದೇವಿ! ಸುಪ್ರೀತಾ ಭವ ಸರ್ವದಾ।
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ಮಂತ್ರಪುಷ್ಪಂ ಸಮರ್ಪಯಾಮಿ

(ಎಂದು ಹೇಳಿ ಕೈಯಲ್ಲಿನ ಅಕ್ಷತೆಯನ್ನು ಹೂವನ್ನು ಅಮ್ಮನವರ ಕಲಶದ ಬಳಿ ಇರಿಸಿ ನಮಸ್ಕರಿಸಬೇಕು)

ಪ್ರದಕ್ಷಿಣೆ

(ಹೂಗಳು,ಅಕ್ಷತೆಯನ್ನು ಕೈಯಲ್ಲಿ ಹಿಡಿದು, ನಮಸ್ಕಾರವನ್ನು ಮಾಡುತ್ತಾ ಅಮ್ಮನವರಿಗೆ ಬೆನ್ನು ತೋರದೆಯೇ ಪಕ್ಕದಲ್ಲಿ ಮೂರು ಬಾರಿ ಪ್ರದಕ್ಷಿಣೆಯನ್ನು ಮಾಡಬೇಕು. ನಂತರ ಅಮ್ಮನವರ ಎದಿರಿಗೆ ನಿಂತು, ಹೂಗಳು, ಅಕ್ಷತೆಯನ್ನು ಅಮ್ಮನವರ ಕಲಶದ ಬಳಿ ಇರಿಸಿ ನಮಸ್ಕರಿಸ ಬೇಕು.)

ಶ್ಲೋ॥ ಯಾನಿ ಕಾನಿ ಚ ಪಾಪಾನಿ ಜನ್ಮಾಂತರಕೃತಾನಿ ಚ
ತಾನಿ ತಾನಿ ಪ್ರಣಶ್ಯಂತಿ ಪ್ರದಕ್ಷಿಣ ಪದೇ ಪದೇ ॥
ಶ್ಲೋ॥ ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ
ತಸ್ಮಾತ್ ಕಾರುಣ್ಯ ಭಾವೇನ ರಕ್ಷ ರಕ್ಷ ಹರಿಪ್ರಿಯೇ!
ಓಂ ಶ್ರೀ ವರಲಕ್ಷ್ಮೀ ದೇವತಾಯೈ ನಮಃ ಆತ್ಮಪ್ರದಕ್ಷಿಣಾನಿ ಸಮರ್ಪಯಾಮಿ

ನಮಸ್ಕಾರಗಳು

(ಅಮ್ಮನವರಿಗೆ ಮೂರು ಬಾರಿ ನಮಸ್ಕರಿಸಬೇಕು)

ಶ್ಲೋ॥ ಓಂ ನಮ ಸ್ತ್ರೈಲೋಕ್ಯಜನನಿ ! ನಮಸ್ತೇ ವಿಷ್ಣುವಲ್ಲಭೇ!
ತ್ರಾಹಿ ಮಾಂ ಭಕ್ತವರದೇ! ವರಲಕ್ಷ್ಮೀ! ನಮೋಽಸ್ತುತೇ॥
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ನಮಸ್ಕಾರಾನ್ ಸಮರ್ಪಯಾಮಿ

(ನಂತರ ಕೈಗೆ ಕಟ್ಟಿಕೊಳ್ಳುವ ದಾರಗಳನ್ನು ಪೂಜಿಸಬೇಕು. (ಅಮ್ಮನವರ ವ್ರತದಲ್ಲಿ ಅಮ್ಮನವರಿಗೆ ಕಟ್ಟುವ ದಾರಕ್ಕೆ, ವ್ರತ ಮಾಡುತ್ತಿರುವ ಸ್ತ್ರೀಯರು ಕಟ್ಟಿಕೊಳ್ಳುವುದಕ್ಕೆ ಒಂಭತ್ತು ಎಳೆಗಳು ಇರುವ ಬಿಳಿಯದಾರವನ್ನು ಮಾಡಿ, ಅದಕ್ಕೆ ಅರಿಶಿನವನ್ನು ಹಚ್ಚಿ. ಒಂಭತ್ತು ಕಡೆ - ಮಧ್ಯ ಮಧ್ಯ ಸ್ವಲ್ಪ ಜಾಗಬಿಟ್ಟು, ಏಳೇದೇಲೆ, ಅಥವಾ ಹೂಗಳನ್ನು ಕಟ್ಟಿ, ಗಂಟನ್ನು ಹಾಕಬೇಕು ಹೀಗೆ ಒಂದೊಂದು ದಾರಕ್ಕೂ ಒಂಭತ್ತು ಗಂಟುಗಳನ್ನು ಹಾಕಿ ಅವುಗಳು ಸ್ಪಷ್ಟವಾಗಿ ಕಂಡು ಬರುವಂತೆ ಇರಬೇಕು)ಈ ದಾರವನ್ನು ಒಂದು ತಾಂಬೂಲದಲ್ಲಿರಿಸಿ, ಅಮ್ಮನವರ ಬಲಭಾಗಕ್ಕೆ ಅಂದರೆ ಕಲಶಕ್ಕೆ ಬಲಭಾಗದಲ್ಲಿ ಬರುವಂತೆ ಒಂದು ತಟ್ಟೆಯಲ್ಲಿರಿಸಿ, ಗಂಟುಗಳತ್ತ ಅರಿಶಿನ ಕುಂಕುಮವನ್ನು ಹಚ್ಚಿ, ಈ ಕೆಳಗಿನ ನಾಮಗಳಿಂದ ಪೂಜಿಸಬೇಕು)

ಓಂ ಶ್ರೀ ಕಮಲಾಯೈ ನಮಃ ಪ್ರಥಮಗ್ರಂಥಿಂ ಪೂಜಯಾಮಿ
(1ನೆಯ ಗಂಟಿನ ಮೇಲೆ)
ಓಂ ಶ್ರೀರಮಾಯೈ ನಮಃ ದ್ವಿತೀಯ ಗ್ರಂಥಿಂ ಪೂಜಯಾಮಿ
(2 ನೆ ಯ ಗಂಟಿನ ಮೇಲೆ)
ಓಂ ಶ್ರೀಲೋಕಮಾತ್ರೇ ನಮಃ ತೃತೀಯಗ್ರಂಥಿಂ ಪೂಜಯಾಮಿ
( 3 ನೇ ಯ ಗಂಟಿನ ಮೇಲೆ)
ಓಂ ಶ್ರೀ ವಿಶ್ವಜನನ್ಯೈ ನಮಃ ಚತುರ್ಥಗ್ರಂಥಿಂ ಪೂಜಯಾಮಿ
(4 ನೇ ಯ ಗಂಟಿನ ಮೇಲೆ)
ಓಂ ಶ್ರೀ ಮಹಾಲಕ್ಷ್ಮ್ಯೈ ನಮಃ ಪಂಚಮ ಗ್ರಂಥಿಂ ಪೂಜಯಾಮಿ
( 5 ನೇ ಯ ಗಂಟಿನ ಮೇಲೆ)
ಓಂ ಶ್ರೀ ಕ್ಷೀರಾಬ್ಧಿತನಯಾಯೈ ನಮಃ ಷಷ್ಠ ಗ್ರಂಥಿಂ ಪೂಜಯಾಮಿ
( 6 ನೇ ಯ ಗಂಟಿನ ಮೇಲೆ)
ಓಂ ಶ್ರೀ ವಿಶ್ವಸಾಕ್ಷಿಣ್ಯೈ ನಮಃ ಸಪ್ತಮಗ್ರಂಥಿಂ ಪೂಜಯಾಮಿ
( 7 ನೇ ಯ ಗಂಟಿನ ಮೇಲೆ)
ಓಂ ಶ್ರೀ ಚಂದ್ರ ಸಹೋದರ್ಯೈ ನಮಃ ಅಷ್ಟಮಗ್ರಂಥಿಂ ಪೂಜಯಾಮಿ
( 8 ನೇ ಯ ಗಂಟಿನ ಮೇಲೆ)
ಓಂ ಶ್ರೀ ಹರಿವಲ್ಲಭಾಯೈ ನಮಃ ನವಮಗ್ರಂಥಿಂ ಪೂಜಯಾಮಿ
( 9 ನೇ ಯ ಗಂಟಿನ ಮೇಲೆ)

ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ ನವಗ್ರಂಥಿಯುಕ್ತಘೋರ ಪೂಜಾಂ ಸಮರ್ಪಯಾಮಿ (ಎಂದು ಹೇಳಿ, ದಾರಗಳ ಮೇಲೆ ಅರಿಶಿನ, ಕುಂಕುಮವನ್ನು ಹಚ್ಚಿ, ಹೂಗಳನ್ನು ಅರ್ಪಿಸಿ ನಮಸ್ಕರಿಸಬೇಕು ಈ ಕೆಳಗಿನ ಮಂತ್ರವನ್ನು ಹೇಳುತ್ತಾ ಮೊದಲು ಅಮ್ಮನವರ ಬಲಗೈಗೆ ಕಟ್ಟಿ, ಅಮ್ಮನವರಿಗೆ ಅರಿಶಿನ ಕುಂಕುಮವನ್ನು ಇರಿಸಿ ನಮಸ್ಕರಿಸಬೇಕು.)

ಶ್ಲೋ॥ ಓಂ ಬಧ್ನಾಮಿ ದಕ್ಷಿಣೇ ಹಸ್ತೇ ನವಸೂತ್ರಂ ಶುಭಪ್ರದಮ್ ।
ಪುತ್ರಪೌತ್ರಾಭಿವೃದ್ಧಿಂ ಚ ಸೌಭಾಗ್ಯಂ ದೇಹಿ ಮೇ ರಮೇ ॥
ಓಂ ಶ್ರೀ ವರಲಕ್ಷ್ಮೀದೇವತಾಯೈ ನಮಃ, ಶ್ರೀವರಲಕ್ಷ್ಮೀ ವ್ರತಾಂಗ ನವ ಗ್ರಂಥಿಘೋರಂ ಸಮರ್ಪಯಾಮಿ (ಎಂದು ಹೇಳಿ, ಅಮ್ಮನವರ ಬಲಗೈಗೆ ದಾರವನ್ನು ಕಟ್ಟಬೇಕು.)

(ನಂತರ) ವರಲಕ್ಷ್ಮೀ ವ್ರತವನ್ನು ಮಾಡುತ್ತಿರುವ ಸ್ತ್ರೀಯರು ಇದೇ ಮಂತ್ರವನ್ನು ಹೇಳುತ್ತಾ, ಬಲಗೈನಲ್ಲಿ ತೆಂಗಿನಕಾಯಿ ಅಥವಾ ಹಣ್ಣು ನ್ನಾಗಲೀ ಮತ್ತೊಬ್ಬ ಮುತ್ತೈದೆಯ ಕೈಯಲ್ಲಿ ದಾರವನ್ನು ಕಟ್ಟಿಸಿಕೊಳ್ಳ ಬೇಕು. ಮಂತ್ರ "ಬಧ್ನಾಮಿ-ರಮೇ" ದಾರವನ್ನು ಕಟ್ಟಿಕೊಂಡ ನಂತರ ಅಮ್ಮನವರಿಗೆ ಅರಿಶಿನ, ಕುಂಕುಮವನ್ನು ಇರಿಸಿ ನಮಸ್ಕರಿಸಬೇಕು.

ಗಮನಕ್ಕೆ: ಈ ರೀತಿ ದಾರವನ್ನು ಕಟ್ಟಿಕೊಂಡ ನಂತರ ಪುರೋಹಿತರಿಗೆ ವಾಯನ ದಾನವನ್ನು ನೀಡಬೇಕು. ವಾಯನದಲ್ಲಿ ತಾಂಬೂಲ, ದಕ್ಷಿಣೆ, ಮಾಡಿರುವ ಸಿಹಿ ಪದಾರ್ಥಗಳು, 12 ರಂತೆ ಇರಿಸಿ, 12 ಹಣ್ಣು ಗಳನ್ನು ಇರಿಸಬೇಕು (ಈ ಕೆಳಗಿನ ಮಂತ್ರವನ್ನು ವಾಯನ ದಾನವನ್ನು ನೀಡುವ ದಂಪತಿಗಳ ಕೈಯಲ್ಲಿ ಹೇಳಿಸಬೇಕು-ಪುರೋಹಿತರೂ ಹೇಳ ಬೇಕು)

ಶ್ಲೋ॥ ಓಂ ಇಂದಿರಾ ಪ್ರತಿಗೃಷ್ಣೋತು ಇಂದಿರಾ ವೈ ದದಾತಿ ಚ ॥
ಇಂದಿರಾ ತಾರಿಕೋಭಯೋಃ ಇಂದಿರಾಯೈ ನಮೋ ನಮಃ॥

(ಎಂದು ಹೇಳುತ್ತಾ, ವಾಯನದಾನವನ್ನು ದಂಪತಿಗಳು, ಪುರೋಹಿತರು ಇಬ್ಬರೂ ಹಿಡಿದುಕೊಳ್ಳಬೇಕು.) (ದಂಪತಿಗಳು ನೀಡಬೇಕು.

(ಪುರೋಹಿತರು ಸ್ವೀಕರಿಸಬೇಕು) ಈ ರೀತಿ ಸ್ವೀಕರಿಸಿದ ನಂತರ ಪುರೋಹಿ ತರು ವಾಯನವನ್ನು ನೀಡಿದ ದಂಪತಿಗಳನ್ನು ಈ ರೀತಿ ಆಶೀರ್ವದಿಸಬೇಕು.)

"ಶ್ರೀ ವರಲಕ್ಷ್ಮೀ ಕೃಪಾಕಟಾಕ್ಷೇಣ ಅನಯೋಃ ದಂಪತೋಃ ದೀರ್ಘಾ ಸೌಮಂಗಲ್ಯ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿರಸ್ತು! ಸತತಂ ಶ್ರೀರಸ್ತು! ವಂಶಾಭಿವೃದ್ಧಿರಸ್ತು" ಎಂದು ಹೇಳಬೇಕು. (ನಂತರ ಪೂಜೆಯನ್ನು ಮಾಡಿದ ದಂಪತಿಗಳ ಕೈಗೆ ಹೂಗಳು ಅಕ್ಷತೆಗಳನ್ನು ನೀಡಿ, ಈ ಕೆಳಗಿನ ಶ್ಲೋಕವನ್ನು ಹೇಳುತ್ತಾ ಹೂಗಳು, ಅಕ್ಷತೆ ಗಳನ್ನು ಇರುವ ಕೈಗೆ ಮೂರು ಉದ್ದರಣೆ ನೀರನ್ನು ಅಮ್ಮನವರ ಮುಂದೆ ಬಿಡಬೇಕು.)

ಶ್ಲೋ॥ ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಹರಿಪ್ರಿಯೇ।
ಯತ್ಪೂಜಿತಂ ಮಯಾ ದೇವಿ! ಪರಿಪೂರ್ಣಂ ತದಸ್ತು ತೇ॥
" ಏತತ್ ಪೂಜಾಫಲಂ ಸರ್ವಂ ಶ್ರೀವರಲಕ್ಷ್ಮೀ ದೇವತಾ ಅರ್ಪಣಮಸ್ತು"

"ಅನಯಾ ಕಲ್ಪೋಕ್ತಪ್ರಕಾರೇಣ ಕೃತಯಾ ಷೋಡಶೋಪಚಾರ ಪೂಜಯಾ ಭಗವತೀ ಸರ್ವಾತ್ಮಿಕಾ ಶ್ರೀವರಲಕ್ಷ್ಮೀ ದೇವತಾ ಸುಪ್ರೀತಾ, ಸುಪ್ರಸನ್ನಾ ವರದಾ ಭವತು! ಮಮ ಇಷ್ಟಕಾರ್ಮಾರ್ಥಸಿದ್ಧಿರಸ್ತು" (ಎಂದು ಅಕ್ಷತೆಗಳು, ನೀರನ್ನು ಅಮ್ಮನವರ ಕಲಶದ ಮುಂದೆ ಇರುವ ತಟ್ಟೆಯಲ್ಲಿ ಬಿಡ ಬೇಕು. ನಂತರ ದಂಪತಿಗಳು ನಮಸ್ಕರಿಸಬೇಕು ನಂತರ ವರಲಕ್ಷ್ಮೀ ವ್ರತಕಥೆ ಯನ್ನು ಓದಬೇಕು. ಕಥೆಯನ್ನು ಹೇಳುವ ಮೊದಲು ಅಲ್ಲಿ ಇರುವವರಿಗೆಲ್ಲಾ ಕೈಗೆ ಅಕ್ಷತೆಗಳನ್ನು ಇರಿಸಿ, ಕಥೆಯು ಪೂರ್ತಿಯಾಗುವವರೆಗೂ ಹಾಗೆ ಇರಿಸಿ ಕೊಂಡು, ಭಕ್ತಿಯಿಂದ ಕಥೆಯನ್ನು ಕೇಳಿಸಿಕೊಳ್ಳಬೇಕೆಂದು ತಿಳಿಸಬೇಕು)

# ಶ್ರೀ ವರಲಕ್ಷ್ಮೀ ವ್ರತ ಕಥೆ



ಶ್ಲೋ॥ ಓಂ ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ।
ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ ॥
ಶ್ಲೋ॥ ಓಂ ಗುರುರ್ ಬ್ರಹ್ಮಾ ಗುರುರ್ ವಿಷ್ಣುಃ
ಗುರುರ್ದೇವೋ ಮಹೇಶ್ವರಃ
ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ
(ಈ ವರಲಕ್ಷ್ಮೀ ವ್ರತಕಥೆಯನ್ನು ಶಿವನು ಪಾರ್ವತಿಗೆ ಹೇಳಿದನು.)

ಒಮ್ಮೆ ಕೈಲಾಸ ಪರ್ವತದ ಮೇಲೆ ಪರಮಶಿವ ಮತ್ತು ಪಾರ್ವತೀ ದೇವಿ ರತ್ನ ಸಿಂಹಾಸನದ ಮೇಲೆ ಕುಳಿತಿದ್ದರು. ಆ ಸಮಯದಲ್ಲಿ ಅಲ್ಲಿ ಅನೇಕ ಮಹರ್ಷಿಗಳು ಅಲ್ಲಿ ನೆರೆದಿದ್ದರು. ಶಿವನು ಲೋಕಗಳಿಗೆಲ್ಲಾ ಶುಭವನ್ನು ನೀಡುವವನಾದ್ದರಿಂದ ಪಾರ್ವತಿದೇವಿಯು ಶಿವನನ್ನು ನೋಡಿ, "ನಾಥ! ಸಕಲಲೋಕನಾಥನಾಗಿ, ಸಕಲಜೀವರಾಶಿಗಳ ಮೇಲೂ ದಯೆಯನ್ನು ತೋರುವವನೇ! ರಹಸ್ಯವಾದ ಒಂದು ಶುಭಕರ ವಾದ ವ್ರತವನ್ನು ನನಗೆ ತಿಳಿಸಿ" ಎಂದು ಲೋಕಕಲ್ಯಾಣಾಕಾಂಕ್ಷೆಯುಳ್ಳ ವಳಾಗಿ ಕೇಳಿದಳು. ಆಗ ಶಿವನು, ಪಾರ್ವತೀ! ನಿನ್ನ ಮನಸ್ಸಿನ ಭಾವನೆ ಯನ್ನು ತಿಳಿದುಕೊಂಡೆ. ಎಲ್ಲಾ ವ್ರತಗಳಲ್ಲೂ ಉತ್ತಮವಾದ ವ್ರತವೊಂದು ಇದೆ. ಅದೇ "ಶ್ರೀ ವರಲಕ್ಷ್ಮೀವ್ರತ"! ಇದನ್ನು ಆಚರಿಸಿದರೆ ಎಲ್ಲಾ ಸಂಪತ್ತು ಗಳೂ ಒದಗಿ ಬರುತ್ತವೆ. ಶೀಘ್ರವಾಗಿ ಉತ್ತಮವಾದ ಸಂತಾನಫಲವು ಸಿದ್ಧಿಸುತ್ತದೆ.

ಈ ಪವಿತ್ರವಾದ ವ್ರತವನ್ನು ಶ್ರಾವಣಮಾಸದಲ್ಲಿ ಹುಣ್ಣಿಮೆಗೆ ಮೊದಲು ಬರುವ ಶುಕ್ರವಾರದಂದು ಆಚರಿಸಬೇಕು. "ಪಾರ್ವತೀ ಈ ವ್ರತವನ್ನು ಆಚರಿಸಿದ ಸ್ತ್ರೀಗೆ ಅತ್ಯಂತ ಪುಣ್ಯವುಂಟಾಗುತ್ತದೆ" ಎಂದು ಹೇಳಿದನು. ಆಗ ಪಾರ್ವತಿಯು ನಾಥ ಈ ವ್ರತವನ್ನು ಮಾಡುವ ವಿಧಾನ ಹೇಗೆ? ಈ ವ್ರತದ ಮೂಲಕ ಯಾವ ದೇವತೆಯನ್ನು ಪೂಜಿಸಬೇಕು? ಈ ವರಲಕ್ಷ್ಮೀದೇವಿಯನ್ನು ಇದಕ್ಕೂ ಮೊದಲು ಯಾರು ಆರಾಧಿಸಿ ದ್ದಾರೆ? ಆ ತಾಯಿಯ ಕೃಪೆಗೆ ಪಾತ್ರರಾದವರು ಯಾರು? ಎಂದು ಕೇಳಿ ದಳು.

ಆಗ ಶಿವನು, "ಪಾರ್ವತಿ! ಪರಮ ಪವಿತ್ರವಾದ ವರಲಕ್ಷ್ಮೀವ್ರತದ ಪ್ರಭಾವ ಎಂತಹುದೆಂದು ತಿಳಿಸುತ್ತೇನೆ ಕೇಳು. ಸಕಲ ಸಂಪತ್ತುಗಳಿಗೆ ನಿಲಯವಾದ 'ಕುಂಡಿನ' ಎಂಬ ಹೆಸರಿನ ಒಂದು ಪಟ್ಟಣವಿದೆ. ಆ ಪಟ್ಟಣದಲ್ಲಿ 'ಚಾರುಮತಿ' ಎಂಬ ಬ್ರಾಹ್ಮಣ ಸ್ತ್ರೀ ಇದ್ದಳು. ಆಕೆ ಮಹಾ ಪತಿವ್ರತೆ! ಆಕೆ ಗಂಡನ ಸೇವೆ ಅತ್ತೆಮಾವಂದಿರ ಸೇವೆಯನ್ನು ಮಾಡು ತ್ತಿದ್ದಳು. ಎಲ್ಲಾ ಕೆಲಸಗಳನ್ನೂ ತಾನೇ ಸ್ವತಾಹಾ ಮಾಡುತ್ತಿದ್ದಳು. ಆಕೆ ವಿದ್ಯಾವತಿಯೂ ಹೌದು! ಸದಾ ಕಿರುನಗೆಯಿಂದ, ಇಂಪಾಗಿ ಮಾತ ನಾಡುತ್ತಿದ್ದಳು. ಆಕೆ ಒಳ್ಳೆಯ ಮನಸ್ಸು, ಭಾವನೆಗಳನ್ನು ಹೊಂದಿದ್ದಳು.

ಆ ಚಾರುಮತೀದೇವಿಗೆ ಒಂದು ದಿನ ಕನಸಿನಲ್ಲಿ ಲಕ್ಷ್ಮೀದೇವಿಯು ಕಾಣಿಸಿಕೊಂಡು " ಓ ಸೌಭಾಗ್ಯವತೀ! ಇಲ್ಲಿ ಬಾ. ನಿನಗೆ ಒಳ್ಳೆಯದಾಗು ತ್ತದೆ. ವರಲಕ್ಷ್ಮೀದೇವಿಯು ಬಂದಿದ್ದಾಳೆ. ಶ್ರಾವಣ ಮಾಸದಲ್ಲಿ ಹುಣ್ಣಿಮೆಗೆ ಮೊದಲು ಬರುವ ಶುಕ್ರವಾರದಂದು ನನ್ನನ್ನು ಪೂಜಿಸು. ನೀನು ಕೋರಿದ ವರಗಳನ್ನು ಪ್ರಸಾದಿಸುತ್ತೇನೆ" ಎಂದು ಅನುಗ್ರಹಿಸಿದಳು. ಕೂಡಲೇ

ಚಾರುಮತಿಯು ಬಹಳ ಸಂತೋಷದಿಂದ "ಅಮ್ಮಾ! ಜಗನ್ಮಾತೇ! ನೀನು ಪುಣ್ಯ ಸ್ವರೂಪಳು. ಶರಣು ಬೇಡಿ ಬಂದವರನ್ನು ಕೈ ಹಿಡಿಯುವವಳು. ಮೂರು ಲೋಕಗಳಲ್ಲೂ ಎಲ್ಲರಿಂದಲೂ ಪೂಜೆಯನ್ನು ಸ್ವೀಕರಿಸುವವಳು. ವಿಷ್ಣು ದೇವನ ವಕ್ಷಃ ಸ್ಥಳದಲ್ಲಿ ನಿವಸಿಸುವವಳು. ನಿನ್ನ ಕೃಪಾದೃಷ್ಟಿ ಯಾರ ಮೇಲೆ ಬೀಳುವುದೋ ಅವರೇ ಧನ್ಯರು! ಅವರೇ ಪುಣ್ಯವಂತರು. ಗುಣವಂತರು, ಧನವಂತರು! ಅಮ್ಮಾ! ಎಷ್ಟೋ ಜನ್ಮಗಳ ಪುಣ್ಯವಿದ್ದರೆ ಮಾತ್ರಾ ನಿನ್ನ ಪಾದ ಪದ್ಮಗಳ ದರ್ಶನವು ಲಭಿಸುತ್ತದೆ." ಎಂದು ಲಕ್ಷ್ಮೀ ದೇವಿಯನ್ನು ಸ್ತುತಿಸುತ್ತಿದ್ದಳು. ಆಕೆಯ ಮಾತಿಗೆ ಲಕ್ಷ್ಮೀ ದೇವಿಯು ಸಂತೋಷಿಸಿ, ಚಾರುಮತಿಗೆ ಅನೇಕ ವರಗಳನ್ನು ನೀಡಿ, ಆಶೀರ್ವದಿಸಿ ಅದೃಶ್ಯಳಾದಳು.

ಚಾರುಮತಿಯು ಕನಸಿನಿಂದ ಎಚ್ಚೆತ್ತುಕೊಂಡು, ಬೆಳಗಾಗುತ್ತಲೇ ತನ್ನ ಕನಸಿನ ವಿಷಯವನ್ನು ಬಂಧುಗಳಿಗೆಲ್ಲಾ ತಿಳಿಸಿದಳು. ಎಲ್ಲರೂ, "ಚಾರುಮತಿ! ನಿನ್ನ ಕನಸು ಚೆನ್ನಾಗಿದೆ. ಒಳ್ಳೆಯದು ಎಲ್ಲರೂ ಆ ತಾಯಿಯು ತಿಳಿಸಿದಂತೆ ವ್ರತವನ್ನು ಆಚರಿಸುತ್ತೇವೆ" ಎಂದು ತಿಳಿಸಿ ಶ್ರಾವಣ ಹುಣ್ಣಿಮೆ ಯಾವಾಗ ಬರುತ್ತದೋ ಎಂದು ನಿರೀಕ್ಷಿಸುತ್ತಿದ್ದರು. ಅವರ ಅದೃಷ್ಟದಿಂದಾಗಿ ವರಲಕ್ಷ್ಮೀವ್ರತದ ದಿನ ಬಂತು ಸ್ತ್ರೀಯರೆಲ್ಲರೂ ನಿರ್ಮಲವಾದ ಮನಸ್ಸಿನಿಂದ ತಲೆಸ್ನಾನ ಮಾಡಿ, ಶುಭ್ರವಾದ ವಸ್ತ್ರಗಳನ್ನು ಧರಿಸಿದರು. ಒಂದು ಕಲಶದಲ್ಲಿ ಅಕ್ಕಿಯನ್ನು ತುಂಬಿ, ಅರಿಶಿನ, ಕುಂಕುಮವನ್ನು ಇರಿಸಿ, ಆ ಕಲಶದಲ್ಲಿ ವರಲಕ್ಷ್ಮೀದೇವಿಯನ್ನು ಆವಾಹನೆಯನ್ನು ಮಾಡಿ ಚಾರುಮತಿ ಮೊದಲಾದವರೆಲ್ಲರೂ ಪೂಜೆಯನ್ನು ಮಾಡಿದರು. ಬಲಗೈಗೆ ಒಂಭತ್ತು ಗಂಟುಗಳಿರುವ ದಾರವನ್ನು ಕಟ್ಟಿಕೊಂಡರು. ತುಪ್ಪದಿಂದ ತಯಾರಿಸಿದ ಭಕ್ಷ್ಯಗಳು, ಸಿಹಿ ಪದಾರ್ಥಗಳು, ಹಣ್ಣುಗಳು, ತೆಂಗಿನಕಾಯಿ, ತಾಂಬೂಲ, ದಕ್ಷಿಣೆಯನ್ನು ಇರಿಸಿ ವಾಯನವನ್ನು ನೀಡಿದರು. ಅಮ್ಮನವರ ಸನ್ನಿಧಿಯಲ್ಲಿ ದೇವಿಗೆ ನೈವೇದ್ಯ ಮಾಡಿದ ಪದಾರ್ಥಗಳನ್ನು ಭಕ್ತಿಯಿಂದ ಆ ದೇವಿಯ ಪ್ರಸಾದವೆಂದು ಸ್ವೀಕರಿಸಿದರು.

ನಂತರ ವರಲಕ್ಷ್ಮೀ ದೇವಿಯ ಪ್ರಭಾವದಿಂದಲೇ ಚಾರುಮತಿ ಮೊದಲಾದ ಸ್ತ್ರೀಯರೆಲ್ಲರೂ ಮುತ್ತು ಮಣಿಗಳ ಹಾರಗಳನ್ನು ಧರಿಸಿದರು. ಕಾಲಿಗೆ ಗೆಜ್ಜೆಗಳು, ರತ್ನಗಳು ಹುದುಗಿಸಿದ ಆಭರಣಗಳನ್ನು ಹೊಂದಿದರು. ಇದೇ ಅಲ್ಲದೇ ಗಂಡುಮಕ್ಕಳು, ಮೊಮ್ಮಕ್ಕಳು ಉಂಟಾಗಿ ಧನ, ಧಾನ್ಯವನ್ನು ಸಮೃದ್ಧಿಯಾಗಿ ಹೊಂದಿದರು. ದಾನ ಧರ್ಮಗಳನ್ನು ಮಾಡುತ್ತಾ ಬಂಧುಗಳೊಂದಿಗೆ ಸಂತೋಷದಿಂದ ಜೀವಿಸಿದರು.



'ಪಾವತೀ! ಆ ನಗರದ ವಾಸಿಗಳೆಲ್ಲರೂ ಚಾರುಮತೀ ದೇವಿಯ ಮೂಲಕ ಈ ಶ್ರೀವರಲಕ್ಷ್ಮೀವ್ರತವನ್ನು ತಿಳಿದು ಕೊಂಡರು. ಅವರೂ ಭಕ್ತಿ ಶ್ರದ್ಧೆಗಳಿಂದ ಈ ವ್ರತವನ್ನು ಆಚರಿಸಿದರು. ಚಾರುಮತಿಯಿಂದಾಗಿ ತಾವೆಲ್ಲರೂ ಧನ್ಯರಾದೆವೆಂದೂ, ಭೋಗ ಭಾಗ್ಯಗಳೊಂದಿಗೆ ಹಾಯಾಗಿದ್ದೇವೆ ಎಂದು ಆನಂದಿಸಿದರು, ಹೌದೂ! ಚಾರುಮತಿ ಎಷ್ಟು ಪುಣ್ಯವಂತಳೋ ಅಲ್ಲವೇ! ಆಕೆ ಎಷ್ಟು ಅದೃಷ್ಟವಂತಳು! ಆಕೆಗೆ ವರಲಕ್ಷ್ಮೀ ದೇವಿಯೇ ಪ್ರತ್ಯಕ್ಷಳಾಗಿ ಈ ವ್ರತವನ್ನು ಉಪದೇಶಿಸಿದಳು ಎನ್ನುತ್ತಾ ಆಕೆಯನ್ನು ಪ್ರಶಂಸಿಸಿದರು.

"ಪಾರ್ವತೀ! ಅಂದಿನಿಂದ ಈ ವ್ರತವು "ಶ್ರೀವರಲಕ್ಷ್ಮೀವ್ರತ" ಎಂದು ಪ್ರಸಿದ್ಧಿಯಾಯಿತು. ಇದು ವ್ರತಗಳೆಲ್ಲದರಲ್ಲೂ ಉತ್ತಮೋತ್ತಮವಾದುದು. ಇದನ್ನು ನಿನಗೆ ವಿವರವಾಗಿ ತಿಳಿಸಿದ್ದೇನೆ. ಈ ವ್ರತವನ್ನು ಯಾರು ಆಚರಿಸಿದರೋ, ವ್ರತಕತೆಯನ್ನು ಯಾರು ಶ್ರವಣ ಮಾಡುತ್ತಾರೋ, ಅಥವಾ ಪಠನ ಮಾಡುತ್ತಾರೋ ಅವರಿಗೆ ಶ್ರೀವರಲಕ್ಷ್ಮೀದೇವಿಯ ಕೃಪೆಯಿಂದ ಎಲ್ಲಾ ಕಾರ್ಯಗಳೂ ಸಿದ್ಧಿಸುತ್ತವೆ" ಎಂದು ತಿಳಿಸಿದನು. ಇದು ಭವಿಷ್ಯೋತ್ತರ ಪುರಾಣದಲ್ಲಿನ ಪಾರ್ವತೀ ಪರಮೇಶ್ವರರ ಸಂವಾದದಿಂದ ಆಯ್ದುಕೊಳ್ಳವಾಗಿದೆ.

**ಶ್ರೀವರಲಕ್ಷ್ಮೀವ್ರತ ಸಂಪೂರ್ಣಂ**

**ಸರ್ವೇಜನಾಃ ಸುಖಿನೋ ಭವಂತು! ಸಮಸ್ತಸನ್ಮಂಗಳಾನಿ ಭವಂತು**

(ಕೈಯಲ್ಲಿರುವ ಅಕ್ಷತೆಗಳು ಮತ್ತು ಹೂವನ್ನು ಅಮ್ಮನವರ ಕಲಶದ ಬಳಿ ಇರಿಸಿ, ನಮಸ್ಕರಿಸಬೇಕು. ನಂತರ ತೀರ್ಥ ಪ್ರಸಾದವನ್ನು ನೀಡಬೇಕು.)

**ತೀರ್ಥ ಮಂತ್ರ**

ಶ್ಲೋ॥ ಅಕಾಲಮೃತ್ಯುಹರಣಂ ಸರ್ವವ್ಯಾಧಿನಿವಾರಣಮ್।;
ಸಮಸ್ತಪಾಪಶಮನಂ ಲಕ್ಷ್ಮೀಪಾದೋದಕಂ ಶುಭಮ್॥

ಶುಭಮಸ್ತು

70

# ಕಾಡನೂರಿನ ಚೆನ್ನಕೇಶವ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886











ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಗ್ರಾಮ ಕಾಡನೂರು. ತಾಲ್ಲೂಕು ಕೇಂದ್ರದಿಂದ 22 ಕಿ.ಮೀ.ದೂರದಲ್ಲಿ ದೊಡ್ಡ ಬಳ್ಳಾಪುರ-ನೆಲಮಂಗಲ ರಸ್ತೆಯ ಸಮೀಪವಿದೆ.

ಕಾಡನೂರಿನಲ್ಲಿ ವಿಜಯನಗರದ ಅರಸರ, ಕಾಲದ ಶಾಸನೋಕ್ತ ಚೆನ್ನ ಕೇಶವ ದೇವಾಲಯವಿದೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ರಾಜಗೋಪುರಗಳನ್ನೊಳಗೊಂಡ ಬೃಹತ್ ರಚನೆಯಾಗಿದೆ. ಕಾಡನೂರಿನ ಚೆನ್ನಕೇಶವ ದೇವಾಲಯವು ವಿಜಯನಗರದ ಅರಸರ ಕಾಲಕ್ಕೆ ಸೇರಿದ್ದರೂ ಗರ್ಭಗುಡಿಯಲ್ಲಿರುವ ಮೂರ್ತಿಯು ಬಹಳ ಪ್ರಾಚೀನವಾಗಿದೆ. ದೇವಾಲಯದ ರಾಜಗೋಪುರ, ಗರ್ಭಗುಡಿಯ ಮೇಲಿನ ಶಿಖರ, ಮುಖಮಂಟಪದ ಮೇಲಿನ ದೇವಕೋಷ್ಠಗಳಲ್ಲಿರುವ ಗಾರೆಯ ಶಿಲ್ಪಗಳು ದೇವಾಲಯವನ್ನು ಜೀರ್ಣೋದ್ಧಾರದ ಸಮಯದಲ್ಲಿ ರಚಿಸಲಾಗಿದೆ.

ಕಾಡನೂರಿನ ಚೆನ್ನಕೇಶವ ದೇವಾಲಯದಲ್ಲಿರುವ ವಿಗ್ರಹವು ಸುಮಾರು ಐದು ಅಡಿ ಎತ್ತರವಿರುವ ಸುಂದರ ವಿಗ್ರಹ. ಚತುರ್ಭುಜಧಾರಿಯಾಗಿರುವ ದೇವನು ಬಲ ಮೇಲಿನ ಕೈಗಳಲ್ಲಿ ಚಕ್ರ, ಶಂಖಗಳನ್ನು ಧರಿಸಿದ್ದಾನೆ. ಕೆಳಗಿನ ಎಡಗೈ ವೆಂಕಟೇಶ್ವರ ದೇವರ ಮೂರ್ತಿಯಂತೆ ಕಟಿ ಹಸ್ತದಲ್ಲಿದೆ. ಬಲಗೈನಲ್ಲಿರುವ ವಸ್ತುವು ಸ್ಪಷ್ಟವಾಗಿ ಗೋಚರಿಸುವುದಿಲ್ಲ.

ವಿಗ್ರಹದ ಮೂರ್ತಿ ಶಿಲ್ಪದ ಲಕ್ಷಣದಿಂದ ಸುಮಾರು ಎಂಟನೆಯ ಶತಮಾನಕ್ಕೆ ಸೇರುವ ಪಲ್ಲವ ಶೈಲಿಯ ವಿಗ್ರಹವಿದೆಂದು ಕೆಳಗಿನ ಕಾರಣಗಳಿಂದ ಗುರ್ತಿಸಬಹುದು.

ದೇವನು ಕೊಳಗದ ರೀತಿ ಕಿರೀಟ ಮಕುಟವನ್ನು ಧರಿಸಿದ್ದು ಅದರಲ್ಲೂ ಚಿತ್ತಾರದ ಕೆತ್ತನೆಯಿದೆ,ಹಸನ್ಮುಖನಾಗಿರುವ ಸ್ವಾಮಿಯು ಕಿವಿಗಳಿಗಿರುವ ಕರ್ಣ ಕುಂಡಲಗಳು ಭುಜದ ಮೇಲೆ ಇಳಿಬಿಟ್ಟಿದೆ. ಯಜ್ಞೋಪವೀತವು ಬಲ ಭುಜದ ಮೇಲಿದೆ.

ಬಲಗೈಯಲ್ಲಿ ಧರಿಸಿರುವ ಚಕ್ರವು ಪ್ರಯೋಗ ಚಕ್ರವಾಗಿದೆ.

ತೋಳಬಂದಿ, ಕೈಗಡಗ, ನಡುಪಟ್ಟಿ ಇಳಿ ವಸ್ತ್ರ, ಕಾಲ್ಕಡಗ ಎಲ್ಲವೂ ಪ್ರಾಚೀನ ವಿಗ್ರಹಗಳ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ.

ಮೂರ್ತಿಯು ಪೂರ್ಣ ಪ್ರಮಾಣದ ಶಿಲ್ಪದಂತಿರದೆ ಉಬ್ಬು ಶಿಲ್ಪವಾಗಿ ರೂಪಗೊಂಡಿದೆ. ಇದೇ ರೀತಿಯ ಲಕ್ಷಣವುಳ್ಳ ವಿಷ್ಣು ಮೂರ್ತಿಗಳು ಚೆನ್ನಪಟ್ಟಣದ ಸಮೀಪದ ಕೂಡ್ಲೂರು, ಮುಳಬಾಗಿಲು ತಾಲ್ಲೂಕಿನ ಉತ್ತನೂರು, ಕೆಮ್ಮಣ್ಣುಗುಂಡಿಯಲ್ಲಿರುವ ಕಲ್ಲತ್ತಗಿರಿ ಜಲಪಾತದಲ್ಲಿರುವ ವೀರಭದ್ರ ದೇವಾಲಯಗಳಲ್ಲಿವೆ. ಇವೆಲ್ಲವೂ ವಿಷ್ಣುವಿನ ಪ್ರಾಚೀನ ಲಕ್ಷಣವನ್ನು ಹೋಲುತ್ತವೆ. ಮೇಲೆ ವಿವರಿಸಿರುವ ವಿವರಣೆಯಿಂದ ಮೂರ್ತಿಯು ಪಲ್ಲವ ಶೈಲಿಯ ಪ್ರಭಾವಕ್ಕೊಳಪಡುವ ಎಂಟನೆಯ ಶತಮಾನಕ್ಕೂ ಹಿಂದಿನ ವಿಗ್ರಹವೆಂದು ನಿರ್ಧ

ರಿಸಬಹುದು. ಪ್ರಸ್ತುತ ವಿಗ್ರಹವನ್ನು ಇಲ್ಲಿ ದೊರೆ ತಿರುವ ಶಾಸನದಲ್ಲಿ ಚೆನ್ನಕೇಶವ ಎಂದು ಕರೆದಿ ರುವರು.

ನವರಂಗದಲ್ಲಿ ಇದೇ ಕಾಲಘಟ್ಟಕ್ಕೆ ಸೇರುವ ಚಿನ್ಮುದ್ರೆಯಲ್ಲಿ ಯೋಗ ಪಟ್ಟಿಯನ್ನು ಹಾಕಿ ಕುಳಿತಿರುವ ದಕ್ಷಿಣಾಮೂರ್ತಿ ಮತ್ತು ಗಣಪತಿಯ ಮೂರ್ತಿಗಳಿವೆ. ನವರಂಗದಲ್ಲಿ ಎಂಟು ಸ್ತಂಭಗಳಿವೆ. ಇಲ್ಲಿ ಮತ್ಸ್ಯ, ಕೂರ್ಮಾದಿಯಾಗಿ ದಶಾವತಾರದ ಮೂರ್ತಿಗಳು, ನವನೀತಕೃಷ್ಣ, ಯೋಗಾ ನರಸಿಂಹ, ಬಾಲಕೃಷ್ಣ, ಕಾಳಿಂಗಮರ್ದನ ಕೃಷ್ಣ, ಉಗ್ರನರಸಿಂಹ ಪ್ರಹ್ಲಾದ, ಬ್ರಹ್ಮ, ಗರುಡ ವಾಮನ ತ್ರಿವಿಕ್ರಮನಾಗಿ ಭೂಮಿಯನ್ನು ಅಳೆಯುತ್ತಿರುವುದು ಮುಂತಾದ ಉಬ್ಬು ಶಿಲ್ಪಗಳು ಸ್ತಂಭಗಳಲ್ಲಿವೆ.

ಈ ದೇವಾಲಯದಲ್ಲಿ ತೆರೆದ ಮುಖಮಂಟಪವು 35 ಕಂಬಗಳ ಬೃಹತ್ ರಚನೆಯಾಗಿದೆ. ಸ್ಥಂಭದ ಮೇಲೆ ಬಾಲಕೃಷ್ಣ ಕಾಳಿಂಗಮರ್ದನ ವೇಣುಗೋಪಾಲ, ಜನಾರ್ದನವಿಠಲ, ಸಂಜೀವ ರಾಯ ಮೊದಲಾದ ದೇವತಾ ಮೂರ್ತಿಗಳನ್ನು ಉಬ್ಬು ಶಿಲ್ಪಗಳಾಗಿ ಬಿಡಿಸಲಾಗಿದೆ.

ಇಲ್ಲಿ ಒಂದು ಬದಿಯ ಶಿಲ್ಪದಲ್ಲಿ ಗೋಪಿಕಾ ಸ್ತ್ರೀಯು ಬೆಣ್ಣೆಯನ್ನು ಕಡೆಯುತ್ತಿದ್ದರೆ ಮತ್ತೊಂದು ಬದಿಯಲ್ಲಿ ಮಡಕೆಯಿಂದ ಬಾಲಕೃಷ್ಣನು ಬೆಣ್ಣೆಯನ್ನು ಕದಿಯುತ್ತಿರುವುದು, ಕೋಲಾಟದಲ್ಲಿ ತೊಡಗಿರುವ ಮಹಿಳೆ ತಂಬೂರಿ ನುಡಿಸುತ್ತಿರುವ ಮಹಿಳೆ, ಚೂರಿ ವರಸೆ, ಕೋಲಾಟದಲ್ಲಿ ನರ್ತಕಿ, ನವಿಲು ಹಂಸ, ಸಿಂಹ ಮುಂತಾದ ಪ್ರಾಣಿಗಳು ಇವೇ ಮೊದಲಾದ ಶಿಲ್ಪಗಳನ್ನು ಸ್ತಂಭಗಳಲ್ಲಿ ಮೂಡಿಸಲಾಗಿದೆ.

ನವರಂಗದ ಪ್ರವೇಶದ್ವಾರದಲ್ಲಿ ವಿಷ್ಣುವಿನ ದ್ವಾರ ಪಾಲಕರಿದ್ದರೆ ಅಂತರಾಳದ ಪ್ರವೇಶದಲ್ಲಿ ಶೈವದ್ವಾರ ಪಾಲಕರಿರುವುದು, ಈ ದೇವಾಲಯದ ವಿಶೇಷತೆ, ಪ್ರವೇಶ ಮಂಟಪದ ಎದುರಿಗೆ ಎತ್ತರ ವಾದ ಪೀಠದ ಮೇಲೆ ಗರುಡ ಸ್ತಂಭವಿದೆ. ಕಾಡನೂರಿನ ಚೆನ್ನಕೇಶವ



ದೇವಾಲಯದಲ್ಲಿ ದೊರೆತಿರುವ ಶಾಸನದಲ್ಲಿ ಕೇಶವ ದೇವಾಲಯದ ಬಗ್ಗೆ ಮಾಹಿತಿ ದೊರೆಯುತ್ತದೆ.

ಕಾಡನೂರು ವಿಜಯನಗರದ ಅರಸರ ಕಾಲದಲ್ಲಿ ಹುಲಕಡಿ ನಾಡಿನ ಹಣಜಿಸೀಮೆಗೆ ಸೇರಿತ್ತು. ಹುಲಕಡಿನಾಡ ಪ್ರಭುಗಳು ದೊಡ್ಡ ಬಳ್ಳಾಪುರ ಸುತ್ತಮುತ್ತ ಆಡಳಿತ ನಡೆಸಿದ್ದರು. ವಿಜಯನಗರದ ದೊರೆ ಅಚ್ಯುತರಾಯನಿಗೆ ಪುಣ್ಯವಾಗಲೆಂದು ಹುಲಕಡಿನಾಯಕ ದಳವಾಯಿ ಸೊಣ್ಣಪ್ಪ ನಾಯಕನ ಮಗ ನಾಗಪ್ಪನಾಯಕನು ಸಾ.ಶ. 1531ರಲ್ಲಿ ತುಂಗಭದ್ರಾ ತೀರದಲ್ಲಿರುವ ವಿರೂಪಾಕ್ಷ ದೇವರ ಸನ್ನಿಧಾನದಲ್ಲಿ ಕಾಡನೂರು ಚೆನ್ನಕೇಶವ ಸೇವಾ ಕಾರ್ಯಕ್ಕೆ ಕಾಡನೂರು ಗ್ರಾಮವನ್ನು ದತ್ತಿ ಬಿಟ್ಟಿರುವನು.

ಕಾಡನೂರಿನಲ್ಲಿ ದೊರೆಯುವ ಪ್ರಮುಖ ಆದಾಯಗಳಾದ ಸುಂಕ, ಸುವರ್ಣಾದಾಯ, ಮನೆ ತರಿಗೆ ಮಗ್ಗಗಳ ಮೇಲೆ ವಿಧಿಸುವ ಮಗ್ಗದೆರೆ ಮುಂತಾದ ವಸ್ತುಗಳ ಮೇಲೆ ಹೇರುವ ತೆರಿಗೆಯಿಂದ ಬಂದ ಹಣವನ್ನು ಚೆನ್ನಕೇಶವ ದೇವರ ಅಮೃತಪಡಿ ನೈವೇದ್ಯ, ಅಂಗರಂಗಭೋಗ ವೈಭವಕ್ಕೆ ವಾರ್ಷಿಕ ರಥೋತ್ಸವಕ್ಕೆ ನೀಡಿರುವನು.

**ಹೀಗೆ ಬನ್ನಿ:**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ಕಾಡನೂರು ದೊಡ್ಡಬಳ್ಳಾಪುರ ನೆಲಮಂಗಲ ರಸ್ತೆಯಲ್ಲಿದೆ. ದೊಡ್ಡ ಬಳ್ಳಾಪುರದಿಂದ ನೆಲಮಂಗದ ಕಡೆಗೆ ಸುಮಾರು ಇಪ್ಪತ್ತು ಕಿ.ಮೀ. ಕ್ರಮಿಸಿ ಕಾಡನೂರು ತಿರುವಿನಲ್ಲಿ ಬಲಕ್ಕೆ ತಿರುಗಿ ಎರಡು ಕಿ.ಮೀ. ದೂರ ವಿರುವ ಕಾಡನೂರನ್ನು ತಲುಪಬಹುದು.

ಹೆಸರಘಟ್ಟದ ಕಡೆಯಿಂದ ಬರುವ ಪ್ರವಾಸಿಗರು ಹೆಸರ ಘಟ್ಟದಿಂದ ಹತ್ತು ಕಿ.ಮೀ.ದೂರದಲ್ಲಿರುವ ರೈಲ್ವೆಗೊಲ್ಲಹಳ್ಳಿಗೆ ಬಂದು ಅದೇ ನೆಲ ಮಂಗಲ-ದೊಡ್ಡಬಳ್ಳಾಪುರ ರಸ್ತೆಯನ್ನು ಸೇರಿ ಬಲಕ್ಕೆ ತಿರುಗಿ ಕಾಡ ನೂರಿನ ತಿರುವಿನ ಮೂಲಕ ಕಾಡನೂರನ್ನು ತಲುಪಬಹುದು.

# ನವತಿರುಪತಿಗಳು - 4

## ತಿರುಕ್ಕುಳಂದೈ

ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್
ಅನುವಾದ : ಸೂರ್ಯವಂಶಿ





ತಿರುನಲ್ವೇಲಿಯಿಂದ ತಿರುಚ್ಚೆಂದೂರಿಗೆ ಹೋಗುವ ಮಾರ್ಗದಲ್ಲಿ ಶ್ರೀವೈಕುಂಠ ದಿವ್ಯದೇಶದಿಂದ 10 ಕಿ.ಮೀ. ದೂರದಲ್ಲಿ ತಾಮ್ರಪರ್ಣಿ ನದೀತೀರದಲ್ಲಿ ಪೆರುಂಕೊಳಮ್, ಆಳ್ವಾರ್ ನಗರ್, ಬಾಲಿಕಾವನ, ತಟಾಕವನ ಎನ್ನುವಂತಹಾ ಹೆಸರಿನಲ್ಲಿ ನೆಲೆಸಿರುವಂತಹಾ ಕ್ಷೇತ್ರವೇ ಈ **'ತಿರುಕ್ಕುಳಂದೈ'** ಎಂಬ ದಿವ್ಯದೇಶ. ಸುಂದರವಾದ ಪ್ರಕೃತಿಯ ನಡುವೆ ಅದ್ಭುತವಾದ ಪ್ರಾಕಾರದೊಂದಿಗೆ ಈ ಪವಿತ್ರಕ್ಷೇತ್ರವು ನೆಲೆಗೊಂಡಿದೆ. ಈ ದಿವ್ಯದೇಶವನ್ನು ಭಕ್ತರೆಲ್ಲರೂ ಆದರಿಂದ "ಪೆರುಂಕೊಳಮ್. **'ಪೆರುಮಾಳ್ ಕೋವಿಲ್'** ಎಂದು ಕರೆಯುತ್ತಿದ್ದಾರೆ. ಈ ಕ್ಷೇತ್ರದಲ್ಲಿ ಮೂಲಮೂರ್ತಿಯಾದ ಶ್ರೀನಿವಾಸನು ನಿಂತಿರುವ ಭಂಗಿಯಲ್ಲಿ, ಹಾಗೇ **'ಅಲಮೇಲುಮಂಗೈ,ಕುಳಂದವಲ್ಲಿ ತಾಯಾರ್'** ಎಂಬ ದೇವಿಯರು ಭಗವಂತನೊಂದಿಗೆ ನೆಲೆಸಿ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ.

ಈ ಸ್ಥಳದಲ್ಲಿ ಅಮ್ಮನವರಿಗೆ ಪ್ರತ್ಯೇಕವಾದ ಸನ್ನಿಧಿಯಿಲ್ಲ. ಉತ್ಸವಮೂರ್ತಿ ಹಾಗೇ ಉಭಯ ದೇವಿಯರೊಂದಿಗೆ ಹಾಗೇ ಶ್ರೀವಿಲ್ಲಿಪುತ್ತೂರಿನಲ್ಲಿ ಇರುವ ರೀತಿಯಲ್ಲೇ ಗರುಡಾಳ್ವಾರ್ ಉತ್ಸವ ಮೂರ್ತಿಯೊಂದಿಗೆ **'ಮಾಯಕೂತ್ತನ್ ಪೆರುಮಾಳ್'** ಎಂಬ ಅದ್ಭುತವಾದ ದಿವ್ಯನಾಮದೊಂದಿಗೆ ಕರೆಯಲ್ಪಡುತ್ತಾರೆ. ಭಕ್ತರನ್ನು ಕರುಣಿಸುತ್ತಿದ್ದಾರೆ. ಆನಂದನಿಲಯ ವಿಮಾನ, ಬೃಹತ್ ತಟಾಕ ತೀರ್ಥವು ಈ ಕ್ಷೇತ್ರದಲ್ಲಿದೆ. ದೇವ ಗುರುವಾದ ಬೃಹಸ್ಪತಿ ಈ ದಿವ್ಯದೇಶದಲ್ಲಿ ತಪಸ್ಸು ಮಾಡಿ ಭಗವಂತನ ಅನುಗ್ರಹವನ್ನು ಪಡೆದಂತೆ ಪುರಾಣವು ತಿಳಿಸುತ್ತಿದೆ. ವೇದಗಳನ್ನು ಅಭ್ಯಸಿಸುವುದೇ ಅಲ್ಲದೇ, ವೇದಗಳಲ್ಲಿ ತಿಳಿಸಲ್ಪಡುತ್ತಿರುವ ಧರ್ಮಗಳನ್ನು ನೆರವೇರಿಸುವುದೇ ಬಹಳ ಮುಖ್ಯವೆಂದು ಈ ದಿವ್ಯದೇಶದ ಮೂರ್ತಿಯಾದ ಶ್ರೀನಿವಾಸನು ಬೃಹಸ್ಪತಿಗೆ ಉಪದೇಶಿಸಿದಂತೆ ನಮಗೆ ತಿಳಿದು ಬರುತ್ತಿದೆ.

**ಸ್ಥಳಪುರಾಣ :**

ನಮ್ಮಾಳ್ವಾರರು ನಾಯಕಿಯ ಭಾವದೊಂದಿಗೆ ಈ ಸ್ವಾಮಿಯನ್ನು ಸ್ಮರಿಸಿ ಧನ್ಯರಾದರು. ಪುರಾಣಕಾಲದಲ್ಲಿ ಈ ದಿವ್ಯದೇಶವನ್ನು ತಟಾಕವನ ಎಂದು ಕರೆಯುತ್ತಿದ್ದರು. ಈ ಪ್ರದೇಶದಲ್ಲಿ ವೇದಸಾರನೆಂಬ ಭಾಗವತೋತ್ತಮನು ಕುಮುದವಲ್ಲಿಯೊಂದಿಗೆ ನಿವಸಿಸುತ್ತಿದ್ದರು. ಇವರಿಬ್ಬರೂ ಶ್ರಿಯಃಪತಿಯ ದಿವ್ಯಪಾದಾರವಿಂದಗಳಲ್ಲಿ ಅಚಂಚಲವಾದ ಭಕ್ತಿ ವಿಶ್ವಾಸಗಳನ್ನು ಹೊಂದಿದ್ದರು. ಆದರೆ ಬಹಳ ವರ್ಷಗಳಾದರೂ ಅವರಿಗೆ ಸಂತಾನವಾಗಲಿಲ್ಲ.

ಈ ಕೊರತೆಯನ್ನು ನೀಗಿಸಬೇಕೆಂದು ಆ ದಂಪತಿಗಳು ಈ ತಿರುಕ್ಕುಳಂದೈ ಸ್ವಾಮಿಯನ್ನು ಸ್ಮರಿಸುತ್ತಾ, ಈ ತಟಾಕದಲ್ಲಿ ಸ್ನಾನವನ್ನು ಆಚರಿಸಿ ಪ್ರತಿದಿನವೂ ಈ ಸ್ವಾಮಿಯನ್ನು ಆರಾಧಿಸುತ್ತಿದ್ದರು. ಭಗವಂತನು ಅವರಿಬ್ಬರ ಭಕ್ತಿಗೆ ಮೆಚ್ಚಿ ಒಂದು ಶುಭ ಮುಹೂರ್ತದಲ್ಲಿ ಅವರಿಗೆ ರೂಪವತಿಯಾದ, ಅಂದವಾದ ಓರ್ವ ಪುತ್ರಿಯನ್ನು ಪ್ರಸಾದಿಸಿದನು. ಅದರಿಂದ ಅವರಿಬ್ಬರೂ ಬಹಳ ಸಂತೋಷಗೊಂಡು ಆ ಹುಡುಗಿಗೆ **'ಕಮಲಾವತಿ'** ಎಂದು ನಾಮಕರಣ ಮಾಡಿದರು.

ಕೆಲವು ದಿನಗಳ ನಂತರ ಕಮಲಾವತಿಯು ಯುಕ್ತ ವಯಸ್ಸಿಗೆ ಬಂದಾಗ ಆಕೆಗೆ ಮದುವೆಯನ್ನು ಮಾಡಬೇಕೆಂದು ಸಂಕಲ್ಪಿಸಿ ವರನನ್ನು ಹುಡುಕಲಾರಂಭಿಸಿದರು. ತಂದೆತಾಯಿಗಳ ಈ ನಿರ್ಧಾರರನ್ನು ತಿರಸ್ಕರಿಸದೇ ಕಮಲಾವತಿಯು ಒಂದೇ ಒಂದು ನಿಬಂಧನೆಯನ್ನು ತಿಳಿಯಪಡಿಸಿದಳು. ಮಾನವ ಮಾತ್ರರನ್ನು ವಿವಾಹ ಮಾಡಿಕೊಳ್ಳಲಾರೆ. ಶ್ರೀ

## ವಿಶೇಷಾಂಶಗಳು :

**ಮೂಲಮೂರ್ತಿ :** ಶ್ರೀನಿವಾಸ

**ಉತ್ಸವ ಮೂರ್ತಿಗಳು :** ಮಯಾಕೂತ್ತನ್

**ಅಮ್ಮನವರು :** ಅಲಮೇಲುಮಂಗೈ, ಕುಳಂದವಲ್ಲಿತಾಯಾರ್

**ತೀರ್ಥಗಳು :** ಪೆರುಂಕುಳ ತೀರ್ಥ, ಬೃಹತ್ ತಟಾಕತೀರ್ಥ

**ಪ್ರತ್ಯಕ್ಷ :** ವೇದಸಾರ, ಬೃಹಸ್ಪತಿ, ಕುಮುದವಲ್ಲಿ, ಕಮಲಾಪತಿ

**ವಿಮಾನ :** ಆನಂದನಿಲಯವಿಮಾನ

**ಮಂಗಳಾಶಾಸನ :** ನಮ್ಮಾಳ್ವಾರರು

**ಆಗಮಶಾಸ್ತ್ರ :** ವೈಖಾನಸ ಆಗಮ

ಮನ್ನಾರಾಯಣನೇ ನನ್ನ ಪತಿಯಾಗಿ ಬರಬೇಕು. ಆತನೊಂದಿಗೆ ವಿವಾಹವನ್ನು ನೆರವೇರಿಸಿ''ಎಂದು ಬೇಡಿಕೊಂಡಳು. ಹಾಗೆ ಹೇಳಿದ ನಂತರ ಆ ದಂಪತಿಗಳಿಗೆ ಏನು ಮಾಡಬೇಕೆಂದು ದಿಕ್ಕು ತೋಚದೇ ಇರುವಾಗ, ಕಮಲಾವತಿಯು,''ಯಾವ ಭಗವಂತನ ಆಶೀರ್ವಾದದೊಂದಿಗೆ ನನ್ನನ್ನು ಪಡೆದರೋ ಅದೇ ರೀತಿ ನಾನೂ ತಪಸ್ಸು ಮಾಡಿ ಆ ಪರಮಾತ್ಮನ ಧರ್ಮ ಪತ್ನಿಯಾಗಿ ಹೋಗುತ್ತೇನೆ'' ಎಂದು ದೃಢವಾಗಿ ತಿಳಿಸಿ ದೀರ್ಘವಾದ ತಪಸ್ಸು ಮಾಡಿದಳು.

ನಾರಾಯಣನ ನಾಮವನ್ನೇಧಾರಣೆ, ಪೋಷಣೆ, ಭೋಜ್ಯಗಳೆಂದು ಭಾವಿಸಿದಳು. ಕಮಲಾವತಿಯ ಅಚಂಚಲವಾದ ಭಕ್ತಿ ವಿಶ್ವಾಸಗಳಿಗೆ ಭಗವಂತನು ಸಾಕ್ಷಾತ್ಕರಿಸಿ ಆಕೆಯ ತಪಸ್ಸಿಗೆ ಕಾರಣವೇನೆಂದು ಕೇಳಿದನು.

ನಂತರ ದೇವದೇವನು ತಾನು ಧರಿಸಿರುವಂತಹಾ ಕೌಸ್ತುಭ ಮಾಲೆಯನ್ನು ನೋಡಿ ಆ ಮಾಲೆಯೊಂದಿಗೆ "ನಿನಗೆ ಸಹಾಯವಾಗಿ ನನ್ನ ವಕ್ಷಃಸ್ಥಳದಲ್ಲಿ ಅಲಂಕರಿಸಿಕೊಳ್ಳುವುದಕ್ಕಾಗಿ ಒಬ್ಬ ಭಕ್ತೆ ಬರಲಿದ್ದಾಳೆ "ಆಕೆಯನ್ನು ನಿನ್ನಂತೆಯೇ ನಾನು ನನ್ನ ವಕ್ಷಃಸ್ಥಳದಲ್ಲಿ ಅಲಂಕರಿಸಿಕೊಳ್ಳಲಿದ್ದೇನೆ" ಎಂದು ಹೇಳಿದ ನಂತರ ಕೌಸ್ತುಭಮಣಿಮಾಲೆಯೂ ಆ ಕಮಲಾವತಿಯನ್ನು ಆಹ್ವಾನಿಸಿ ಅದೇ ರೀತಿಯಲ್ಲಿ ಆಕೆಯನ್ನು ಸ್ವಾಮಿಯ ವಕ್ಷಃಸ್ಥಳದಲ್ಲಿ ಅಲಂಕರಿಸಿತು. ತಂದೆ-ತಾಯಿಗಳು ಬಹಳ ಸಂತೋಷಗೊಂಡರು.

ಬಹಳ ಕಾಲದ ನಂತರ ಭಗವಂತನಿಗೆ ಅಶ್ಮಸಾರನೆಂಬ ಒಬ್ಬ ರಾಕ್ಷಸನು ವೇದಸಾರನ ಪತ್ನಿಯಾದ ಕುಮುದವಲ್ಲಿಯನ್ನು ಅಪಹರಿಸಿದನು. ಇದರಿಂದ ಧರ್ಮಪತ್ನಿಯೊಂದಿಗೆ ಮಾಡಬೇಕಾದ ಭಗವಂತನ ಸೇವೆಯನ್ನು ಆ ರಾಕ್ಷಸನಿಂದ ನಿಂತುಹೋಯಿತೆಂದು ಆ ವಿಪ್ರನು ಬಹಳ ದುಃಖಿಸಿದ. ಆತ ಪುನಃ ಶ್ರೀಮನ್ನಾರಾಯಣನನ್ನು ಬೇಡಿಕೊಂಡ.

ತನ್ನ ಧರ್ಮಪತ್ನಿಯನ್ನು ಹೇಗಾದರೂ ನೀವು ರಕ್ಷಿಸಿ ನನ್ನನ್ನು ಕಾಪಾಡಬೇಕೆಂದು ತಮಿಳರ 'ತೈ' ತಿಂಗಳಿನಲ್ಲಿ ಪುಷ್ಯಮಿ ನಕ್ಷತ್ರದಲ್ಲಿ ಹುಣ್ಣಿಮೆಯ ತಿಥಿಯಲ್ಲಿ ತಿರುಕ್ಕುಳಂದೈ ಭಗವಂತನಿಗೆ ಅಭಿಷೇಕವನ್ನು ಮಾಡಿ ವೇದಸಾರನು ಅತ್ಯಂತ ಭಕ್ತಿ ವಿಶ್ವಾಸದೊಂದಿಗೆ ಪ್ರಾರ್ಥಿಸಿದಾಗ, ಕೂಡಲೇ ದೇವದೇವನು ಗರುಡಾರೂಢರಾಗಿ ಆ ಅಸುರನ ನಿವಾಸವನ್ನು ತಿಳಿದುಕೊಂಡು ಕುಮುದವಲ್ಲಿಯನ್ನು ಅವನ ಬಂಧನದಿಂದ ಬಿಡಿಸಿ ವೇದಸಾರನಿಗೆ ಒಪ್ಪಿಸಿದ.

ತಾನು ಇಲ್ಲದಿರುವಾಗ ಭಗವಂತನು ಬಂದು ತಾನು ಅಪಹರಿಸಿದ್ದ ಆ ಕುಮುದವಲ್ಲಿಯನ್ನು ಕರೆದುಕೊಂಡು ಹೋದನೆಂದು ಬಹಳ ಕೋಪಗೊಂಡು ಆ ಅಶ್ಮಸಾರನು ಕೂಡಲೇ ಈ ತಿರುಕ್ಕುಳಂದೈಗೆ ಬಂದು ಭಗವಂತನೊಂದಿಗೆ ಹೋರಾಡಲಾರಂಭಿಸಿದ.

ಭಗವಂತನು ತನ್ನ ಆಶ್ರಿತರಿಗೆ ಉಂಟಾದ ದುಃಖವನ್ನು ನೋಡಿ ಆ ಅಸುರನ ಕಾಲುಗಳನ್ನು ಹಿಡಿದುಕೊಂಡು ನೆಲದ ಮೇಲೆ ಒಗೆದು, ಅವನ ಮೇಲೆ ನಾಟ್ಯ ಮಾಡಿದನಂತೆ. ಭಗವಂತನು ಮಾಯಾವಿಯಾದ್ದರಿಂದ ಮಾಯಾಕೂತ್ತನ್ ಎಂಬ ನಾಮಕರಣವನ್ನು ಪಡೆದ 'ಮಾಯಾಕೂತ್ತನ್ ಎಂದರೆ ಆ ಮಾಯಾವಿಯಾದ ರಾಕ್ಷಸನ ಮೇಲೆ ನಾಟ್ಯವನ್ನು ಮಾಡಿದವನು ಎಂದರ್ಥ! ಸಂಸ್ಕೃತದಲ್ಲಿ 'ಚೋರನೃತ್ಯ' ಎಂದು ವ್ಯವಹರಿಸುತ್ತಾರೆ.

ಭಕ್ತನಾದ ವೇದಸಾರನ ಸಕಲ ದುಃಖವನ್ನು ಭಗವಂತನು ಗರುಡನೊಂದಿಗೆ ಇದ್ದುಕೊಂಡು ಸಹಾಯ ಮಾಡಿದನು. ಆದ್ದರಿಂದ ಗರ್ಭಗುಡಿಯಲ್ಲಿ ಅರ್ಚಾರೂಪಿಯಾಗಿ ಗರುಡನನ್ನು ಭಗವಂತನು ಸ್ವೀಕರಿಸಿದನು ಎಂದು ಸ್ಥಳಪುರಾಣದಲ್ಲಿದೆ. ಆದ್ದರಿಂದ ಪ್ರತಿ ಒಬ್ಬರೂ ಈ ತಿರುಕ್ಕುಳಂದೈಸ್ವಾಮಿಯನ್ನು ದರ್ಶಿಸಿಕೊಂಡು ಸಕಲ ಪಾಪಗಳಿಂದ ವಿಮುಕ್ತಿಯನ್ನು ಹೊಂದಿ ಅಂತಿಮವಾಗಿ ಭಗವತ್ಪಾದಾರವಿಂದಗಳನ್ನು ಆಶ್ರಯಿಸಿ ಧನ್ಯರಾಗೋಣ.

ಶ್ರಿಮತ್ಕುಳಂದ ನಗರೇ ತು ಪೆರುಂಕೊಳಾಖ್ಯ
ತೀರ್ಥೇ ಕುಳಂದ ಲತಿಕಾ ನಯನಾ ಽಬ್ಜ ಭೃಂಗಃ।
ಪ್ರಾಗಾಸನ ಸ್ಥಿತಿರಸೌ ಗುರುಸೇವಿತಾಂಗಃ
ಶ್ರೀಮತ್ಪರಾಂಕುಶ ಮುನೀಂದ್ರ ಪರಿಸ್ತುತಾತ್ಮಾ।



# ಆಳ್ವಾರುಗಳು ಕಂಡ ತಿರುವೇಂಗಡ

– ಎಂ. ಆರ್. ನರಸಿಂಹನ್

**ಕಳೆದ ಸಂಚಿಕೆಯಿಂದ**

ಇಂತಹ ಹೀನ ಪರಿಸ್ಥಿತಿಯನ್ನು ಕಂಡರೆ ಮರುಕ ವಾಗುತ್ತದೆ. ಭ್ರಮರಗಳು **'ಮರುಕ್ಕಳ್'** ಎನ್ನುವ ದಿವ್ಯಗಾಯನ ದಿಂದ ಹಾಡುವ ವೇಂಗಡದಲ್ಲಿ ದೇಗುಲ ಮಾಡಿಕೊಂಡು ನೆಲಸಿ ಆಗಸದಲ್ಲಿ ತಿರುಗುತ್ತಿರುವ ಸೂರ್ಯಮಂಡಲದ ಮಧ್ಯವರ್ತಿಯಾದ ಸ್ವಾಮಿಗೆ ಕೈಂಕರ್ಯವೆಸಗುವಂತೆ ಮಾಡಿದೆಯಲ್ಲವೇ? ಅವನು ಅತಿ ದುರ್ಲಭನು ಎನ್ನುವ ದುರ್ವಾದ ಮಾಡುವುದೂ, ನಿಕೃಷ್ಟ ಮನುಷ್ಯಜನ್ಮದಲ್ಲಿ ಜನ್ಮ ವೆತ್ತಿದನು ಎಂಬುದಾಗಿ ವಾದ ಮಾಡುವುದೂ, ಕೈಗೆ ಸಿಕ್ಕದ ವನನ್ನು ಹೇಗೆ ಆರಾಧಿಸುವಿರಿ ಎಂಬುದಾಗಿ ವಾದ ಮಾಡುವಿ ರಲ್ಲಾ! ನನ್ನ ಹೃದಯವೇ, ಅವರಿಗೆ ಏನು ಹೇಳುವುದು? ನನಗೇನೂ ಹೇಳದೆ ಬಿದಿರುಗಳು ದಟ್ಟವಾಗಿ ಬೆಳೆದು ಬಿಳಿ ಮುತ್ತಿನ ಗೊಂಡೆಯನ್ನು ಎತ್ತಿ ಹಿಡಿದ ವೇಂಗಡದಲ್ಲಿ ದೇಗುಲ ಹೊಂದಿದ ಗೊಲ್ಲರ ಅರಸನಿಗೆ ಈ ದಿನ ದಾಸನಾಗಿ ಇರು ವಂತೆ ಮಾಡಿದೆಯಲ್ಲ, ಅದೇ ಸಾಕು. ಬೇರೇನೂ ಬೇಕಾ ಗಿಲ್ಲ. ಮನುಷ್ಯರ ಜೊತೆಗೂಡಿ ಅವರು ಯಾವ ವಿಷಯಾಂತ ರಗಳಲ್ಲಿ ತೊಳಲಿದರೋ ಅದರಲ್ಲಿಯೇ ನೀನೂ ತೊಳಲಿ, ಅವರೆಂದಂತೆಯೇ ನೀನೂ ಹೇಳುತ್ತ ಬಂದೆ ಯಲ್ಲವೆ? ನನ್ನ ಮನಸ್ಸೇ, ಹೇಳು ಈಗ ನಾನು ಹೇಳುವುದನ್ನು ಕೇಳಿಕೋ. ಎಷ್ಟೋ ಜನರು ಕೀರ್ತಿಸಿ, ನರ್ತಿಸಿ, ನಮಸ್ಕರಿಸಿ, ಸ್ತುತಿಸಿ ಸಾಕ್ಷಾತ್ಕರಿಸಿಕೊಂಡ ಜಯಶೀಲನೂ, ತಾಮರೆಯಲ್ಲಿ ಜನಿ ಸಿದ ಚತುರ್ಮುಖನೂ, ಈಶ್ವರನೂ, ದೇವೇಂದ್ರನೂ ಎದುರಿಗೆ ನಿಂತು ಹಾಡುವ ವೇಂಗಡದಲ್ಲಿ, ನೃತ್ಯ ವಟವೂ ಬಾಲಕೃಷ್ಣ ರೂಪಿಯೂ ಆದ ವೇಂಗಡದೊಡೆಯನಿಗೆ ಈಗ ಕೈಂಕರ್ಯ ವೆಸಗುವ ದಾಸ್ಯ ವೃತ್ತಿಯನ್ನು ನೀಡಿದೆಯಲ್ಲವೆ? ಹೊಳೆಯುವ ಮಿಂಚುಳ್ಳ ದೊಡ್ಡ ಕಾರ್ಮುಗಿಲುಗಳು ದಟ್ಟಯಿಸುವ ತಿರು ವೇಂಗಡದ ಮೇಲೆ ದೇಗುಲಗೊಂಡ,ಹಂಸವಾಗಿ ಅವತರಿ ಸಿದ ನಿತ್ಯಸೂರಿಗಳಿಗೆ ದೊರೆಯೆನಿಸಿದವನನ್ನು ಕುರಿತು, ಹಿರಿ ದಾದ ಸುದೃಢ ಪ್ರಾಕಾರದ ತಿರುಮಂಗೈನಾಡಿನಲ್ಲಿನ ಆಳ್ವಾ ರ್‌ರು ಹೇಳಿದ ಸುಂದರ ತಮಿಳಿನ ವೇದಕ್ಕಿಂತ ಇನಿದಾದ ಈ ಹಾಡುಗಳನ್ನು ಬಲ್ಲವರಿಗೆ ಪರಮ ಪದವೇ ವಾಸಸ್ಥಳವಾ ಗುವುದು, ಇದು ನಿಶ್ಚಯ!

ತಿರುಮಂಗೈಆಳ್ವಾರ್ ಶೈಲಿ ತೆರ. ಇದು ವರ್ಣನೆಯಿಂದಲೂ, ಭಕ್ತಿಯಿಂದಲೂ ಸಂಮಿಶ್ರಿತಗೊಂಡ ವೈಖರಿ. ಪರಮಾತ್ಮನಲ್ಲಿ ಭಕ್ತಿ ಭಾವದಿಂದ ತಾವು ಮೈಮರೆಯುತ್ತಾರೆ. ನಮ್ಮನ್ನೂ ಆ ಭಾವುಕ ಪ್ರಪಂಚಕ್ಕೆ ಕೊಂಡೊಯ್ಯುತ್ತಾರೆ. ನಮ್ಮಾಳ್ವಾರ್‌ರ ಭಕ್ತಿಮಾರ್ಗ ಒಂದು ತೆರನದು, ಇವರದ್ದು ಮತ್ತೊಂದು ತೆರನಾದದ್ದು.

ನಮ್ಮಾಳ್ವಾರ್ ಗಂಭೀರರಾಗಿ ಚಿಂತನಾ ಮನಸ್ಕರಾಗಿ ನಮ್ಮನ್ನು ಪರಮಾತ್ಮನಿರುವ ಬೆಟ್ಟದ ಮೇಲಕ್ಕೆ ಕೊಂಡೊಯ್ದರೆ, ತಿರುಮಂಗೈ ಆಳ್ವಾರ್ ಪರಮಾತ್ಮನ ಲೀಲೆಗಳನ್ನು ಸ್ವಾರಸ್ಯವಾಗಿ ವರ್ಣಿಸುತ್ತಾ ದಾರಿಯಲ್ಲಿನ ಪ್ರಕೃತಿ ಚಿತ್ರವನ್ನು ತೋರಿಸುತ್ತಾ ಅವುಗಳ ಸೊಬಗನ್ನು ಉಣಬಡಿಸಿ ಮೇಲಿನ ಪರಮಾತ್ಮನ ಆಲಯಕ್ಕೆ ಕೊಂಡೊಯ್ಯುತ್ತಾರೆ. ತಿರುಮಂಗೈ ಆಳ್ವಾರ್ ಪಾಶುರಗಳಲ್ಲಿ ಪ್ರಕೃತಿ ವರ್ಣನೆ ಅಲ್ಲಲ್ಲಿ ಕಂಡು ಬರುತ್ತದೆ. ಮೊದಲಾಳ್ವಾರ್ ಮತ್ತು ತಿರುಮಳಿಶೈ ಆಳ್ವಾರ್ ಪಾಶುರಗಳಿಗೆ ಮುಗಿದಿದ್ದ ಆ ವರ್ಣನೆಗಳು ಮತ್ತೆ ತಿರುಮಂಗೈ ಆಳ್ವಾರ್ ಪಾಶುರಗಳಲ್ಲಿ ಕಾಣಿಸುತ್ತದೆ.

ಬೇಡರು ತಿರುವೇಂಗಡದಲ್ಲಿ ವಾಸವಾಗಿರುವುದು. ಬಿದಿರು ಮೆಳೆಗಳು ಬೆಳೆದಿರುವುದು, ಸುಂದರವಾದ ಉದ್ಯಾನ, ಕಾಲುವೆ ಜಲಪಾತಗಳ ದೃಶ್ಯ, ಸುಂದರವಾದ ಕುರವ ಸ್ತ್ರೀಯರು ತೆನೆಯಿಂದ ಕಂಗೊಳಿಸುವ ಹೊಲಗಳಲ್ಲಿ ಅಟ್ಟಣಿಗೆಯಲ್ಲಿ ನಿಂತು ಹಕ್ಕಿಯನ್ನು ಓಡಿಸುವ ದೃಶ್ಯ. ಬಿದಿರು ತೆನೆಗಳಿಂದ ಮುತ್ತು, ರತ್ನಗಳು ಬಿರಿದು ಚೆಲ್ಲಾಡುವ ದೃಶ್ಯ ಮೇಘದಿಂದ ಆವೃತವಾದ ಬೆಟ್ಟದ ದಾರಿಗಳು, ಆನೆಗಳು ಓಡಾಡುವ ದೃಶ್ಯ, ಶಿಖರದ ಅಡ್ಡ ಬರುವಿಕೆಯಿಂದಾಗಿ ಸೂರ್ಯ, ಚಂದ್ರರು ಅದರ ಅಚೀಚೆಗೆ ಸರಿದು ಮುಂದುರಿಯುವುದು, ಬಿಲ್ಲುಗಾರ ಬೇಡರು ಮತ್ತು ಕುರವ ಸ್ತ್ರೀಯರು ದೇವರನ್ನು ಪೂಜಿಸಿ 'ಆಗಿಲ್' ಎಂಬ ಗುಗ್ಗುಳದ ಧೂಪವನ್ನು ಉರಿಸುವುದು-ಈ ಎಲ್ಲವೂ ಹಿಂದೆ ನಾವು ಕಂಡ ದೃಶ್ಯಗಳೇ ಬೇರೆ ರೀತಿಯಲ್ಲಿ ಇಲ್ಲಿ ವಿವರಣೆಗೊಂಡಿದೆ. ಅಂತೂ ಒಂದು ವಿಚಾರವನ್ನು ನಾವು ನಿರ್ಧರಿಸಬಹುದು. ಈ ಕುರವರು, ಬೇಡರು ತಿರುಮಂಗೈ ಆಳ್ವಾರ್ ಅವರ ಕಾಲದಲ್ಲೂ ಇದ್ದರು. ತಿರುಮಂಗೈ ಆಳ್ವಾರ್ ಕಡೆಯ ಆಳ್ವಾರ್‌ರು. ಇವರ ಕಾಲ ಕ್ರಿ.ಶ. 8 ರಿಂದ 9 ನೇ ಶತಮಾನ.

ಕ್ರಿ.ಶ. 3-4-5 ನೇ ಶತಮಾನದಲ್ಲಿ ಮೊದಲಾಳ್ವಾರ್ ಕಂಡ ಬೇಡರೇ, ಬೇಡ ಸ್ತ್ರೀಯರೇ ಈಗಲೂ ನೆಲಸಿದ್ದಾರೆ. ಅವರು ಹೊಲ ಕಾಯುತ್ತಿದ್ದರು. ಈಗಲೂ ಕಾಯುತ್ತಿದ್ದಾರೆ. ಅವರ ಹೆಂಗಸರು ಆಗಲೂ ಪೂಜೆ ನಡೆಸುತ್ತಿದ್ದರು ಈಗಲೂ ನಡೆಸುತ್ತಿದ್ದಾರೆ ಎಂದರೆ ತಿರುಪತಿಯ ದೇವರು ಎಲ್ಲರಿಂದಲೂ ಪೂಜೆಗೊಳ್ಳುತ್ತಿದ್ದಂತೆ ಕುರವ ಬೇಡರಿಂದ ಪೂಜೆಗೊಳ್ಳುತ್ತಿದ್ದಾನೆ. ಅವನು ರಾಮಚಂದ್ರರಾಯರು ಹೇಳಿದಂತೆ ಕುರವರಿಗೂ ಬೇಡರಿಗೂ ಮಾತ್ರ ಸ್ವಂತವಾದ ದೇವರಲ್ಲ. ಈಗಲೂ ಬಿದಿರು ಮಳೆ ತುಂಬಿದ್ದುವು, ಆಗಿನ ಕಾಲಕ್ಕೂ ಬಿದಿರು ಗಿಡಗಳು ಇದ್ದುವು. ನಮ್ಮಾಳ್ವಾರ್ ಅವರೂ ಬಿದಿರು ಮೆಳೆಗಳನ್ನು ವರ್ಣಿಸಿದ್ದಾರೆ ಎಂದಾಗ ಬೆಟ್ಟ ಪೂರ್ತಿ ಬಿದಿರು ಮಳೆಗಳಿಂದಲೇ ತುಂಬಿ ಕಾಡಾಗಿರಲಿಲ್ಲ.

ಊರಿದ್ದ ಜಾಗದಲ್ಲಿ ಇವು ಇರಲಿಲ್ಲ. ಊರಿನ ಹೊರಗೆ ಕಾಡಿನಲ್ಲಿ ಇವು ಹೇರಳವಾಗಿದ್ದಿತು ಎಂದು ಅರ್ಥ ಮಾಡಬಾರದೇಕೆ? ಊರು,ಊರ ಹೊರಗೆ ಹೊಲ, ಹೊಲದಿಂದಾಚೆಗೆ ಹೊಳೆ, ನದಿ, ಝರಿ ನಂತರ ಕಾಡು ಈ ಚಿತ್ರ ಇರಕೂಡದೇಕೆ? ಬೆಟ್ಟದ ಕೆಳಗೆ ಇದ್ದ ಊರಿನಿಂದ ಜನ ಬಂದು ಪೂಜೆ ಮಾಡುತ್ತಿದ್ದರು, ಹಿಂತಿರುಗುತ್ತಿದ್ದರು. ಏತಕ್ಕೆಂದರೆ ಬೆಟ್ಟದ ಮೇಲೆ ತಂಗಲು ವ್ಯವಸ್ಥೆ ಇರಲಿಲ್ಲ ಎಂದೇಕೆ ರಾಯರು ಹೇಳುವಂತೆ ತೀರ್ಮಾನಿಸಬೇಕು? ಕೇವಲ ಬಿದಿರುಮಳೆ, ಕುರವರು, ಬೇಡರು, ಇವರಿಂದಲೇ ತಿರುವೇಂಗಡವು ಒಂದು ಹಿಂದು ಆದ ಜಾಗವಾಗಿತ್ತು ಎಂದು ತೀರ್ಮಾನಿಸುವುದು ತಪ್ಪಾದ ಕಲ್ಪನೆ ಆದೀತು ಅಷ್ಟೇ !

ಈ ಆಳ್ವಾರ್ ಮತ್ತೆ ಒಂದೆರಡು ಹೊಸ ವಿಚಾರವನ್ನು ತಿಳಿಸುತ್ತಾರೆ. ಬೆಟ್ಟದ ಮೇಲೆ ಬೌದ್ಧ ಜೈನರು ತಮ್ಮ ತಮ್ಮ ದೇವಾಲಯಗಳೊಂದಿಗೆ ವಿಜೃಂಭಿಸುತ್ತಾ ಸ್ವೇಚ್ಛೆಯಾಗಿ ಪುಂಡಾಟಿಕೆ ನಡೆಸುತ್ತಾ, ಕಂಡ ಕಂಡವರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುತ್ತಾ ಹಿಂದೂ ಧಾರ್ಮಿಕ ವಿಧಿಗಳನ್ನು ಹಿಯ್ಯಾಳಿಸುತ್ತಾ, ನಿಮ್ಮ ದೇವರು ಕರೆದರೂ ಬರುವುದಿಲ್ಲ. ಇಂತಹ ಕಾಣದ ದೇವರಿಗೆ ಪೂಜೆಯೇಕೆ? ಎಂದೆಲ್ಲಾ ನಾಸ್ತಿಕ ವಾದವನ್ನು ಬಿತ್ತುತ್ತಾ, ತಿಂದು ತೇಗಿ ಮೈಮರೆತಿದ್ದರು. ಆಳ್ವಾರ್ ಇವರನ್ನು ಅಪಹಾಸ್ಯ ಮಾಡುವುದರ ಜೊತೆಗೆ ಅವರ ನೆಲೆಯೇ ಇಲ್ಲದ ಒಂದು ಗುರಿಯಿಲ್ಲದ ಜೀವನವನ್ನು ಸಾಗಿಸುವ ರೀತಿಗೆ ಪರಿತಾಪಪಡುತ್ತಾರೆ. ದೇವರಿದ್ದಾನೆಂದು ತಗ್ಗಿ ಬಗ್ಗಿದಾಗಲೇ ಮಾನವನದಲ್ಲಿ ಒಂದು ಸಂಸ್ಕೃತಿ ಏರ್ಪಡುವುದು.

**- ಮುಂದುವರೆಯುತ್ತದೆ.**

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

– ಮೂಲ : ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
– ಅನುವಾದ : ಶ್ರೀಮತಿ

ಎಂದು ವಿಧಿಸಿದ ಬಳಿಕ ಸ್ವಾಮಿ ಸನ್ನಿಧಿಗೆ ಜನರು ಸೇವಿಸುವುದು ಆರಂಭಗೊಂಡು ಭಗವಂತನು ಸಾಕಷ್ಟು ಸಂತುಷ್ಟನಾಗಿ ಅರ್ಚನ ಮುಖೇನ ತೀರ್ಥವನ್ನು, ಶೇಷ ವಸ್ತ್ರವನ್ನು ತಿರುಮಾಲೆಯನ್ನು ಅನುಗ್ರಹಿಸಲು ಶ್ರೀಶೈಲ ಪೂರ್ಣರ ಪುರುಷಕಾರದಲ್ಲಿ ಭಗವಂತನಿಗೆ ದಕ್ಷಿಣ ವಾಸಸ್ಥಾನವಾದ ನೆಲೆ (ಶ್ರೀರಂಗಕ್ಕೆ) ಹೋಗುವುದಕ್ಕೆ ಊರುಗೋಲು ಕೊಡಲು, ನಂತರ ಭಗವದ್ರಾಮಾನುಜರು ಕಣ್ಣೀರು ಸ್ಮುರಿಸುತ್ತಾ, ನಮ್ಮ ಕೈಂಕರ್ಯಕ್ಕೆ ನಮ್ಮ ಶಠಕೋಪನ್ (ಜಿಯ್ಯರ್) ರಿಂದ ಬಿಡುಗಡೆ ಹೊಂದುತ್ತಿದ್ದೇನೆಂದು ವಿನಂತಿಸಿಕೊಂಡು. ಬೆಟ್ಟವಿಳಿದು ಬರಲು, ಶ್ರೀ ಶೈಲಪೂರ್ಣರು ಗೋವಿಂದಭಟ್ಟರನ್ನು (ಎಂಬಾರ್)ಕರೆದುಕೊಂಡು ಬಂದು ಭಗವದ್ರಾಮಾನುಜರ ಕೈಯಿಂದ ಧಾರಾಪೂರ್ವಕವಾಗಿ ಕರವಿರಿಸಿ ಮರಳಿ ವೇಂಕಟಾದ್ರಿಗೆ ಹೋದರು. ಭಗವದ್ರಾಮಾನುಜರು ಗೋವಿಂದಭಟ್ಟರನ್ನು ಹಿಂದಿಟ್ಟುಕೊಂಡು ಶ್ರೀರಂಗಕ್ಕೆ ಪ್ರಸ್ಥಾವಿಸಿದರು.

ಅನಂತರ ಶಠಕೋಪ ಜಿಯ್ಯರು ನಲವತ್ತೈದು ಸಂವತ್ಸರಗಳ ಕೈಂಕರ್ಯಗಳನ್ನು ನೆರವೇರಿಸಿ ಜಯ ಸಂವತ್ಸರವೂ ತಮಗೆ ಆಚಾರ ವೃತ್ತಿಯನ್ನು ಕೊಟ್ಟು ಪ್ರತಿನಿಧಿಯಾಗಿ ಕೈಂಕರ್ಯಗಳನ್ನು ಗಮನಿಸುವುದರ ಜವಬ್ದಾರಿಯನ್ನು ನೀಡಿರಲು ತಮಗೆ ಯುವರಾಜನಾಗಿ ಅಳಗಿಯ ಮಣವಾಳ ಜಿಯ್ಯರನ್ನು ನಿಯಮಿಸಿ ಸಿಂಹಾಸನವನ್ನು ಪ್ರಸಾದಿಸಿ, ಶ್ರೀರಾಮಚಂದ್ರ ಮೂರ್ತಿಯನ್ನು ತೋರಿಸಿ, ಭಾಷ್ಯಕಾರ ಮುದ್ರೆಯನ್ನು ಸಹಾ ಕೊಟ್ಟು ಬಿಟ್ಟರು. ತಮಗೆ ಯುವ ಪ್ರತಿನಿಧಿಯಾದ ಅಳಗಿಯ ಮಣವಾಳ ಜಿಯ್ಯರು ತಾವಿಬ್ಬರು ಅನೋನ್ಯವಾಗಿ (ಪರಸ್ಪರ ಸಹಕಾರದಿಂದ) ಸ್ವಾಮಿ ಸನ್ನಿಧಿಯಲ್ಲಿ ಸ್ವಾಮಿ ಕೈಂಕರ್ಯವನ್ನು ಮಾಡಿಕೊಂಡಿದ್ದರು.

ಆ ದಿನಗಳಲ್ಲಿ ಗಂಗೈಕೊಂಡ ಚೋಳಪುರದಲ್ಲಿ ರಾಜನಾದ ಚಕ್ರವರ್ತಿಯಾದ ಕೋನೇರಿ ರಾಜು, ಆತನ ಭಾತೃವಾದ ಸದಾಶಿವ ಮಹಾರಾಜನು ಸಕುಟುಂಬ ತಿರುಮಲೆಗೆ ಹೋಗಿ ಶ್ರೀ ವೇಂಕಟರಮಣನನ್ನು ಸೇವಿಸಿ ಭಗವದ್ರಾಮಾನುಜರ ಏರ್ಪಾಟುಗಳ ಉದಾತ್ತ ತನವನ್ನು ನೋಡಿ, ಅರ್ಚಾವತಾರ ರೂಪಿಯಾದ ಭಗವದ್ರಾಮಾನುಜರ ದಿವ್ಯ ವಿಗ್ರಹವನ್ನು ಸೇವಿಸಿ, ಸಂತೋಷ ನಿಮಗ್ನರಾಗಿರಲು, ಭಗವದ್ರಾಮಾನುಜರು ತಮ್ಮ ದಿವ್ಯಸಿಂಹಾಸನದಲ್ಲಿ ನೇಮಿಸಿದಂತೆ ಶಠಕೋಪ ಜಿಯ್ಯರು, ಅವರ ಪ್ರತಿನಿಧಿಯಾದ ಅಳಗಿಯ ಮಣವಾಳ ಜಿಯ್ಯರನ್ನು ಸಹಾ ಸೇವಿಸಿ,



ದೇವಾಲಯದಲ್ಲಿ ಶ್ರೀ ಭಗವದ್ರಾಮಾನುಜರ ಆಣತಿ ಮೇರೆಗೆ ಅವರಿಬ್ಬರು ಅನ್ಯೋನ್ಯರಾಗಿದ್ದುಕೊಂಡು ಮಾಡುತ್ತಿರುವ ಕೈಂಕರ್ಯ ವಿಧಾನಗಳನ್ನು ಕಂಡು ಅವರ ಪಾದ ಕಮಲಗಳಲ್ಲಿ ಅತ್ಯಂತ ವಿನೀತ ನಾಗಿ ಜಿಯರ್ ಸನ್ನಿಧಿ ಮಠಗಳಿಗೆ ಅವರಿಬ್ಬರು ಬಂದು, ಮಠಾಲಯ ಗಳಿಗೆ ಕುಲಧನವಾದ ಚಕ್ರವರ್ತಿ ತನಿಯನನ್ನು (ಶ್ರೀರಾಮಚಂದ್ರನ), ಅಳಗಿಯ ಮಣವಾಳ ಜಿಯ್ಯರಿಗೆ ಕೊಟ್ಟಿರುವ ಶ್ರೀವೇಂಕಟಾಚಲಪತಿ ಯನ್ನು ಸೇವಿಸಿ, ಜಿಯ್ಯರುಗಳ ವಿಷಯದಲ್ಲಿ ಅತ್ಯಂತ ಭಕ್ತಿಯುತರಾಗಿ ಅಪರೂಪದ ಆದರದಿಂದ ಗದ್ಗದಸ್ವರ (ಬಿಕ್ಕುತ್ತ) ತೊದಲು ಮಾತಿನಿಂದ ಆ ರಾಜನು ''ಸಕುಟುಂಬರಾಗಿ ನಮಗೆ ಸಮಾಶ್ರವಣವನ್ನು (ಚಕ್ರಾಂಕಿತ) ಅನುಗ್ರಹಿಸಬೇಕೆಂದು ಪ್ರಾರ್ಥಿಸಲು ಕೂಡಲೇ ಶಠೋಪ ಜಿಯ್ಯರು ತಮಗೆ ಯುವರಾಜರಾದ ಅಳಗಿಯ ಮಣಿವಾಳ ಜಿಯ್ಯರೊಂದಿಗೆ ರಾಜರ ಕೋರಿಕೆ ತೀರಿಸಲು ಸಕುಂಟುಬರಾಗಿ ಸಮಾಶ್ರಯಣವನ್ನು ಜರುಗಿಸುವಂತೆ ಆಣತಿ ಕೊಡಲು ಅಳಗಿಯ ಮಣಿವಾಳಜಿಯ್ಯರು ಆಚಾರ್ಯರ ಆಜ್ಞೆ ಮೇರೆಗೆ ಶುಭದಿನದಲ್ಲಿ ಶಕೆಯಲ್ಲಿ ಸಂವತ್ಸರದಲ್ಲಿ ಶುಕ್ಲಪಕ್ಷ ದ್ವಾದಶಿ ಶ್ರವಣ ನಕ್ಷತ್ರದಲ್ಲಿ ಚಕ್ರವರ್ತಿ ಕುಮಾರನನ್ನು ಅನುಗ್ರಹಿಸುವ ಭಾವನೆಯಿಂದ ಸಪರಿವಾರನಾಗಿರುವ ರಾಜನಿಗೆ ಕನಕಾಭಿಷೇಕವನ್ನು ಮಾಡಿಸಿ ದಿವ್ಯಾ ಭರಣಗಳನ್ನು ಸಮರ್ಪಿಸಿ ಶ್ರೀರಾಮಚಂದ್ರ ಮೂರ್ತಿಗೆ 'ವೀರವರ' ಎಂಬ ಗ್ರಾಮದಲ್ಲಿ ಶ್ರೀ ಅಳಗಿಯ ಮಣವಾಳ ಜಿಯ್ಯರಿಗೆ ಆಚಾರ್ಯಾಭಿಮಾನದೊಂದಿಗೆ ಗೌತಮ ಅಂಗೇಶ್ವರದ ಸಮೀಪವಿರುವ ತನ್ನ ಸಹೋದರ ನಾದ ಸದಾಶಿವ ಮಹಾರಾಜನ ಅಧೀನದಲ್ಲಿದ್ದ 'ಅರಸು ವೇಲಂ' ಎಂಬ ಭೂಪ್ರದೇಶವನ್ನು ನಂತರ ಮರದಲ್ಲಿನ ಚಕ್ರವರ್ತಿ ಕುಮಾರನಿಗೆ ಶ್ರೀವೇಂಕಟಾಚಲಪತಿಗೆ ಅಖಂಡ ದೀಪವನ್ನು ಇಡುವ ಸಲುವಾಗಿ ಒಂದು 'ಓಣಿ' ಯನ್ನು (ಗ್ರಾಮವನ್ನು) ತಿರುಪತಿಯಲ್ಲಿ ತಮ್ಮ ಆರಾಧನೆ ಗಾಗಿ ಒಂದು ತೋಟವನ್ನು ಸಮರ್ಪಿಸಿದರು. ಅನಂತರ ಆ ರಾಜನು ಅವರಿಬ್ಬರನ್ನು ಗೋಪುರದ ಶ್ರೀಪ್ರಾಕಾರ ಕೈಂಕರ್ಯಕ್ಕಾಗಿ ಇರಿಸಿ, ವಾಹನಗಳನ್ನು ನಿರ್ಮಿಸಿ, ಹಿಂದೆ ನಿಂತು ಉತ್ಸವಗಳನ್ನೆಲ್ಲವನ್ನು ಜರುಗಿಸಿ ಮಠಕ್ಕೆ ಬೇಕಾದ ಸಾಮಾಗ್ರಿಗಳೆಲ್ಲವನ್ನು ಶೇಖರಿಸಿಕೊಟ್ಟು ಸ್ವಲ್ಪ ಕಾಲದವರೆಗೆ ರಾಜ್ಯಭಾರ ಮಾಡುತ್ತಲಿದ್ದನು.

ತದನಂತರ ಜಿಯ್ಯರು, ಶಿಷ್ಯರು ಅರಣ್ಯವನ್ನು ಕಡಿದು ಗ್ರಾಮವನ್ನಾಗಿ ಮಾಡಿ ಜಿಯ್ಯರಪಾಳ್ಯವೆಂದು ಹೆಸರಿಟ್ಟರು. ಆಮೇಲೆ ಪ್ರಥಮ ಅಂಗೇಶ್ವರದ ಸಮೀಪ ವಿರುವ ಅಳಗಿಯ ಮಣಿವಾಳಜಿಯ್ಯರಿಗಾಗಿ ಸಮರ್ಪಿ ಸಿದ 'ಅರಸುವೇಲಂ' ಎಂಬ ಗ್ರಾಮವನ್ನು ದತ್ತಿಗೊಟ್ಟು ಅದನ್ನು ಉತ್ತಮವಾಗಿ ನಿರ್ಮಿಸಿ ''ಅಳಗಿಯ ಪಾಳ್ಯ'' ವೆಂದು ಹೆಸರಿಟ್ಟು. ತಿರುಮಲೆ ಬೆಟ್ಟವನ್ನೇರಿ ಶ್ರೀವೇಂಕ ಟಾಚಲಪತಿಗೆ ಸ್ವಲ್ಪ ಕಾಲ ಕೈಂಕರ್ಯಗಳನ್ನು ಮಾಡಿ, ತಮಗೆ ಅಂತಿಮದೆಸೆ ಸನ್ನಿಹಿತವಾದುದನ್ನು ಗ್ರಹಿಸಿ, ಅಳ ಗಿಯ ಮಣಿವಾಳ ಜಿಯ್ಯರನ್ನು ತಮ್ಮ ದಿವ್ಯ ಸಿಂಹಾಸನದ ಮೇಲೆ ಕೂರಿಸಿ ಅವರು ಜಯ ಸಂವತ್ಸರದ ಮೇಷ ಮಾಸದಲ್ಲಿ ಪರಪದಕ್ಕೆ ಪ್ರಸ್ಥಾವಿಸಿದರು.

(ಮುಂದುವರೆಯುತ್ತದೆ)


## ಜೀಯರ್ ಮಠದ ಇತಿಹಾಸ


01. ಸ್ವರ್ಣಭೂಮಿ
02. ಮೊದಲಕಲ್ ಶೇಷದಾಸರು
03. ಮಧುರಕವಿ
04. ವೈಶಾಖ
05. ಶಂಕರಾಚಾರ್ಯರ
06. ಪಿತೃಪಕ್ಷ
07. ಚಿನ್ನಾಜಿದೇವಿ ಹಾಗೂ ತಿರುಮಲದೇವಿ
08. ಪ್ರಹ್ಲಾದ ಮಂಟಪ
09. ವೇಣುಗೋಪಾಲ ದೇವಾಲಯ
10. ಐದು
11. ಗರುಡ ನದಿ
12. ತಿರುವೇಂಗಡನನ್ನು
13. ಲಕ್ಷ್ಮೀ ದೇವಿ
14. ಶಿವನ
15. ಮಹಾ ತಪಸ್ವಿ

ಶ್ರೀ ರಮಣವಿಭವನು ಶೇಷಾದ್ರಿಯಲ್ಲಿ ನೆಲಸಿ, ವಿನೋದಗಳಲ್ಲಿ ಮುಳುಗಿ ಒಬ್ಬ ರಾಜಕುಮಾರಿಯನ್ನು ನೋಡಿ, ಮೋಹಗೊಂಡು ಎಲ್ಲಾ ದೇವತೆಗಳ ಮುಂದೆ ಅವಳನ್ನು ಮದುವೆಯಾದನು ಎಂದು ಸೂತರು ಹೇಳುತ್ತಿದ್ದಂತೆ ಶೌನಕಾದಿಯರು ಆ ವೃತ್ತಾಂತವನ್ನು ಹೇಳುವಂತೆ ಕೇಳಿಕೊಂಡರು.

ರಮಾಪತಿಗೆ ಸೂಕ್ತ ಕನ್ಯೆ ಯಾರು? ಅವಳು ಎಲ್ಲಿ ಜನಿಸಿದಳು? ಆ ಕನ್ಯೆಯ ಪೋಷಕರು ಮತ್ತು ಸಹೋದರರು ಯಾರು? ಅವನು ಅವಳನ್ನು ಈ ವೃತ್ತಾಂತವನ್ನು ಹೇಳುವಂತೆ ಕೇಳಿದರು. ಸರಿ ಎಂದು ವೃತ್ತಾಂತವನ್ನು ಪ್ರಾರಂಭಿಸಿದರು.

28ನೇ ದ್ವಾಪರಾಂತ್ಯದಲ್ಲಿ ಕಲಿಯುಗದ ಆರಂಭದಲ್ಲಿ ವಿಕ್ರಮಾರ್ಕ ಮೊದಲಾದವರು ಭೂಮಿಯನ್ನು ಆಳಿದ ಶೂರರು ಮತ್ತು ಜನರ ಕಲ್ಯಾಣಕ್ಕಾಗಿ ಶ್ರಮಿಸಿ ರಾಜ್ಯವಾಳಿದವರು. ಅವರ ನಂತರ ಚಂದ್ರ



ಕುಲಜರಾದ ಪಾಂಡವರು ಅಶ್ವಿಕೆಯನ್ನು ಮುಂದುವರೆಸಿದರು. ಅವರಲ್ಲಿ ಒಬ್ಬರು ಸಿಂಹಾಸನವನ್ನು ತಮ್ಮ ಮಗ ಸುಧರ್ಮನಿಗೆ ಹಸ್ತಾಂತರಿಸಿ ಸದ್ಗತಿ ಪಡೆದರು. ಈ ಸುಧರ್ಮವನು ರಾಜ್ಯವನ್ನು ಆಳುತ್ತಿದ್ದಾಗ, ಅವನಿಗೆ ಆಕಾಶ ರಾಜನು ಜನಿಸಿದನು.

ಆತ ಬೇರಾರೂ ಅಲ್ಲ, ಮಾಧವನಾಮಕನು. ಪಾಪಗಳನ್ನು ಎಸಗಿ, ಕೊನೆಗೆ ಶೇಷಾದ್ರಿಗೆ ಬಂದು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನ ಮಾಡಿ, ದೇಹವನ್ನು ತ್ಯಜಿಸಿದನು. ಆತನೇ ಸುಧರ್ಮನ ಮಗನಾಗಿ ಜನಿಸಿದನು. ಅದೇ ರೀತಿ, ಪೂರ್ವ ಜನ್ಮದಲ್ಲಿ ಮಾಧವನ ಪತ್ನಿಯಾಗಿದ್ದ ಚಂದ್ರರೇಖಾ, ಪತಿ ಸ್ಮರಣೆ ಮಾಡುತ್ತಾ ದೇಹ ತ್ಯಜಿಸಿ ಧರಣಿದೇವಿಯಾಗಿ ಜನಿಸಿದಳು. ಸುಧರ್ಮನು ಅವಳನ್ನು ಆಕಾಶರಾಜನಿಗೆ ಮದುವೆ ಮಾಡಿದನು.

ಒಂದು ದಿನ, ಸುಧರ್ಮ ರಾಜನು ಭೇಟೆಯಾಡಲು ಕಾಡಿಗೆ ಹೋದನು. ಬೇಟೆಯಾಡಿ ಬಹಳ ಬಳಲಿದ್ದನು. ಶ್ರಮವಹಿಸಿ ಒಂದು ಕೊಳವನ್ನು ತಲುಪಿದನು. ಅಲ್ಲಿ ಒಬ್ಬ ನಾಗ ಕನ್ಯೆಯನ್ನು ನೋಡಿ, ಅವಳ ಸೌಂದರ್ಯಕ್ಕೆ ಆಕರ್ಷಿತನಾದನು, ಮೋಹಗೊಂಡನು, ಮದುವೆ ಆಗುವಂತೆ ಕೇಳಿಕೊಂಡನು. ಆದರೆ ಆ ನಾಗಕನ್ಯೆಯು, ರಾಜ! ನೀನು ಒಬ್ಬ ಮನುಷ್ಯ, ನಾನು ನಾಗಕನ್ಯೆ ನಮ್ಮಿಬ್ಬರಿಗೆ ದಾಂಪತ್ಯ ಹೊಂದುವುದಿಲ್ಲ. ನಿನ್ನ ದಾರಿಯಲ್ಲಿ ನೀ ಸಾಗು, ಎಂದು ಗದರಿಸಿದಳು. ಆದರೆ, ಸುಧರ್ಮ ಅವಳನ್ನು ಹಿಂಬಾಲಿಸಿದನು. ಅವನ ಪ್ರೀತಿಯನ್ನು ಗ್ರಹಿಸಿದ ನಾಗಕನ್ಯೆ ನೀನು ಯಾರು? ನಿನ್ನ ಜಾತಿ ಮತ್ತು ಕುಲ ಯಾವುದು? ಎಂದು ಕೇಳಿದಳು. ಕೊನೆಗೆ ಅವಳು ರಾಜನಿಗೆ ಹೀಗೆಂದಳು.

"ಓ ರಾಜ!ನನ್ನನ್ನು ಮದುವೆಯಾದರೆ, ನಿನ್ನ ಸಂತಾನ ನಾಗ ಲೋಕದಲ್ಲಿರುತ್ತಾರೆ. ತಂದೆ ಯಾರು ಎಂದು ಅವರು ಕೇಳಿದರೆ, ಅವರಿಗೆ ಏನು ಹೇಳಬೇಕು?" ಎಂದು ಹಿಂಜರಿಕೆಯಿಂದ ಕೇಳಿದಳು. "ನಿನಗೆ ಮಗನಾದರೆ, ಅವನು ತಂದೆ ಯಾರು ಎಂದು ಕೇಳಿದರೆ, ನನ್ನ ಹೆಸರನ್ನು ಹೇಳಿ ನನ್ನ ಬಳಿಗೆ ಕಳುಹಿಸು. ನಾನು ಅವನಿಗೆ ಅರ್ಧ ರಾಜ್ಯವನ್ನು ಕೊಡುತ್ತೇನೆ"

# ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ ಎಸ್. ಪಾರ್ವತಿ

ಎಂದು ಸುಧರ್ಮ ಹೇಳುತ್ತಾ ನಾಗಕನ್ಯೆಗೆ ಪ್ರೀತಿಯ ಸಂಕೇತವಾಗಿ ಉಂಗುರವನ್ನು ಕೊಟ್ಟು ಅವಳೊಂದಿಗೆ ಲೈಂಗಿಕ ಸಂಬಂಧ ಹೊಂದಿದನು. ನಾಗಕನ್ಯೆ ರಾಜನಿಗೆ ವಿದಾಯ ಹೇಳಿ ಹೊರಟು ಹೋದಳು. ರಾಜನು ತನ್ನ ನಗರಕ್ಕೆ ಹಿಂತಿರುಗಿದನು.

ನಾಗಕನ್ಯೆ ಗರ್ಭಿಣಿಯಾದಳು. ಅವಳು ನಾಗ ಲೋಕವನ್ನು ತಲುಪಿದಳು. ಆದರೆ, ನಾಗರಾಜನು ತನ್ನ ಮಗಳಿಗೆ ಒಂದು ಮಾತನ್ನೂ ಹೇಳಲಿಲ್ಲ ಎಲ್ಲವನ್ನೂ ತಿಳಿದಿದ್ದರೂ ಅವನು ಅಜ್ಞಾನಿಯಂತೆ ನಟಿಸಿದನು. ನಾಗಕನ್ಯೆಯು ಮಗನಿಗೆ ಜನ್ಮ ನೀಡಿದಳು. ಅವನಲ್ಲಿ ಚಕ್ರವರ್ತಿಯ ಲಕ್ಷಣಗಳು ಗೋಚರಿಸುತ್ತಿದ್ದವು. ಮಗು ತುಂಬಾ ಸುಂದರವಾಗಿತ್ತು. ಅದು ಎಲ್ಲರ ಕಣ್ಮಣಿಯಾಗಿತ್ತು.

ಮಗ ಬೆಳೆದು ಒಂದು ದಿನ ತನ್ನ ತಾಯಿಯನ್ನು ನನ್ನ ತಂದೆ ಯಾರು? ಎಂದು ಕೇಳಿದನು. ನಾಗಕನ್ಯೆಯು ನಿನ್ನ ತಂದೆ ಸಾಮಾನ್ಯ ವ್ಯಕ್ತಿಯಲ್ಲ. ರಾಜ ಸುಧರ್ಮ. ಭೂಲೋಕ ಪಾಲಕ. ನಿರ್ಭಯವಾಗಿ ಅವನ ಬಳಿಗೆ ಹೋಗು. ಅದಲ್ಲದೆ ತನ್ನ ರಾಜ್ಯದ ಅರ್ಧವನ್ನು ನಿನಗೆ ಕೊಡುತ್ತಾನೆ.

ಆ ರಾಜಾಧಿಕಾರದಿಂದ ರಾಜ್ಯವನ್ನು ಸಂತೋಷದಿಂದ ಆಳು. ನೀನು ಇಲ್ಲಿ ಏಕೆ ಇರುವೆ ಎಂದು ಅವನನ್ನು ಭೂಲೋಕಕ್ಕೆ ಕಳುಹಿಸಿದಳು. ಸುಧರ್ಮನು ತನಗೆ ಕೊಟ್ಟಿದ್ದ ಉಂಗುರವನ್ನು ಬಾಲಕನಿಗೆ ಕೊಟ್ಟಳು. ಬಾಲಕನು ತನ್ನ ತಾಯಿಗೆ ನಮಸ್ಕರಿಸಿದನು. ತಾಯಿಯು, ಪುತ್ರನೇ ! ದೀರ್ಘಾಯುಷ್ಯನಾಗಿ, ಹರಿ ಭಕ್ತನಾಗಿ, ಚಕ್ರವರ್ತಿಯಾಗಿ ಬಾಳು, ಎಂದು ಹೇಳಿದಳು. ಪುತ್ರನ ಅಗಲಿಕೆಯಿಂದ ದುಃಖತಪ್ತಳಾಗಿ ನಾಗಲೋಕವನ್ನು ತಲುಪಿದಳು.

ಆ ಬಾಲಕನು ರಾಜ ಸುಧರ್ಮ ರಾಜನ ಬಳಿಗೆ ಹೋಗಿ ನಮಸ್ಕರಿಸಿದನು. ಮುದ್ದುಬಾಲಕಾ! ನನಗೆ ಏಕೆ ನಮಸ್ಕರಿಸುತ್ತಿರುವೆ? ನೀನು ಯಾರು? ನಿನ್ನ ತಂದೆ - ತಾಯಿ ಯಾರು? ಎಂದು ಕೇಳಿದಾಗ, ಆ ಹುಡುಗು ಧೈರ್ಯದಿಂದ "ನರನಾಥ! ನನ್ನ ತಾಯಿನಾಗಕನ್ಯೆ, ಮತ್ತು ನನ್ನ ತಂದೆ ಸುಧರ್ಮ ಪ್ರಭು" ಎಂದು ತನ್ನನ್ನು ಪರಿಚಯಿಸಿಕೊಂಡು ಕೈಯಲ್ಲಿರುವ ಮುತ್ತಿನ ಉಂಗುರವನ್ನು ತೋರಿಸಿದನು. ಎಲ್ಲವನ್ನೂ ತಿಳಿದ ರಾಜನು ಆ ಹುಡುಗನನ್ನು ತನ್ನ ಆಪ್ತ ಸಂಬಂಧಿಕರು ಮತ್ತು ಸ್ನೇಹಿತರಿಗೆ ಪರಿಚಯಿಸಿ, ತಾನು ಈ ಹಿಂದೆ ನಾಗಕನ್ಯೆಯೊಂದಿಗೆ ಮದುವೆಯಾಗಿ, ಅವಳಿಗೆ ನೀಡಿದ್ದ ಉಂಗುರದ ವೃತ್ತಾಂತವನ್ನು ವಿವರಿಸಿ, ಅವನಿಗೆ ತೊಂಡಮಾನ ಚಕ್ರವರ್ತಿ ಎಂದು ಹೆಸರಿಸಿದನು. ನಂತರ ಅವನಿಗೆ ಉಪನಯನ, ವಿವಾಹಾದಿಗಳನ್ನು ಮಾಡಿದನು ಮತ್ತು ತನ್ನ ಇಬ್ಬರು ಪುತ್ರರೊಂದಿಗೆ ಸಂತೋಷದಿಂದ ತನ್ನ ಕಾಲ ಕಳೆಯುತ್ತಿದ್ದನು. ನಂತರ ಆಕಾಶರಾಜನಿಗೆ ಪಟ್ಟಾಭಿಷೇಕ ಮಾಡಿ, ತೊಂಡಮಾನ್ ಅನ್ನು ಯುವರಾಜನಾಗಿ ಮಾಡಿ ಸ್ವಲ್ಪ ಸಮಯದ ನಂತರ, ನಿಧನ ನಾದನು.

ಆಕಾಶರಾಜ ಮತ್ತು ತೊಂಡಮಾನನ ತಾಯಂದಿರು ಬೇರೇ ಬೇರೆಯಾಗಿದ್ದರೂ ಒಂದೇ ಗರ್ಭದಿಂದ ಜನಿಸಿದ ಮಕ್ಕಳಂತೆ ಅನ್ಯೋನ್ಯವಾಗಿ ಜೀವಿಸಿದರು. ಅವರಲ್ಲಿ ಹಿರಿಯನಾದ ಆಕಾಶರಾಜನಿಗೆ ಮಕ್ಕಳಾಗದ ಕಾರಣ ಬಾದೆಪಡುತ್ತಿದ್ದಾಗ ಒಂದು ದಿನ, ಬೃಹಸ್ಪತಿಯನ್ನು ಬೇಡಿಕೊಂಡನು, ಸದ್ಗುರು ನನಗೆ ಇನ್ನೊ ಮಕ್ಕಳ ಭಾಗ್ಯ ಸಿಕ್ಕಿಲ್ಲ. ನಾನು ಯಾವ ಪಾಪ ಕಾರ್ಯಗಳನ್ನು ಮಾಡಿದ್ದೇನೆಂದು ನನಗೆ ತಿಳಿದಿಲ್ಲ.

"ಓ ರಾಜ! ನಿನ್ನ ಎಲ್ಲಾ ಪಾಪಗಳಿಗೆ ಪ್ರಾಯಶ್ಚಿತ್ತವಾಗಿ, ಪುತ್ರ ಕಾಮೇಷ್ಟಿಯಜ್ಞವನ್ನು ಚಿತ್ತ ಶುದ್ಧಿಯಿಂದ ಮಾಡು ! ನಿನಗೆ ಸಂತಾನವಾಗುತ್ತದೆ" ಎಂದನು. ಆಕಾಶರಾಜನು ಪುತ್ರ ಕಾಮೇಷ್ಟಿ ಯಜ್ಞವನ್ನು ಮಾಡಲು ಸಿದ್ಧನಾದನು. ಚಿನ್ನದ ನೇಗಿಲಿನಿಂದ ಭೂಮಿಯನ್ನು ಉಳುಮೆ ಮಾಡುವಾಗ ಸಹಸ್ರದಳ ಕಮಲವೊಂದು ಹೊರಹೊಮ್ಮಿತು. ಇದೇನು ಕಮಲದ ಹೂವು ಎಂದು ರಾಜನು ಆಶ್ಚರ್ಯಪಡುತ್ತಿದ್ದಂತೆ ಕಮಲದಳಗಳ ನಡುವೆ ಒಂದು ಮಗುವನ್ನು ನೋಡಿದನು.

ರಾಜನುದಿಗ್ಭ್ರಾಂತನಾಗಿ ಊರಿನ ಎಲ್ಲಾ ಹಿರಿಯರನ್ನು ಕರೆಯಿಸಿದನು. ಪದ್ಮೋದ್ಭವಳಾದ ಬಾಲೆಯನ್ನು ತೋರಿಸಿದನು. ಅದೇ ಸಮಯದಲ್ಲಿ ಅಶರೀರವಾಣಿಯೊಂದು, "ರಾಜ! ಈ ಬಾಲೆಯನ್ನು ಬೆಳೆಸು. ನಿನಗೆ ಎಲ್ಲಾ ರೀತಿಯಲ್ಲಿ ಒಳ್ಳೆಯದಾಗುತ್ತದೆ." ಎಂದು ಆದೇಶಿಸಿತು. ಅದರಂತೆ ರಾಜನು ಆ ಬಾಲೆಯ ಲಾಲನೆಪಾಲನೆಗಳ ಕುರಿತು ಗಮನಹರಿಸಿದನು. ದೇವರು ತಮಗೆ ಹೆಣ್ಣು ಮಗುವನ್ನು ಅನುಗ್ರಹಿಸಿದ್ದಾನೆಂದು ಅವನ ಪತ್ನಿ ಧರಣಿದೇವಿ ಸಂತೋಷಪಟ್ಟಳು. ಆ ಮಗು ಅಂತಃಪುರವನ್ನು ತಲುಪಿದ ಪರಿಣಾಮವಾಗಿ, ಧರಣಿದೇವಿ ಗರ್ಭಿಣಿಯಾದಳು.

(ಮುಂದುವರೆಯುತ್ತದೆ)



# ಆಗಸ್ಟ್ 2026 ತಿಂಗಳ ರಾಶಿ ಫಲಗಳು



ಶ್ರೀಮಾತಾ ಅನುಗ್ರಹ



**ಮೇಷ**

ವ್ಯವಹಾರಗಳಲ್ಲಿ ಗೆಲ್ಲುವಿರಿ. ಸಹೋದರರಿಂದ ಲಾಭ. ಸಹೋದ್ಯೋಗಿಗಳಿಂದಲೂ ಅನುಕೂಲವಾಗುವುದು. ವಿದ್ಯಾರ್ಥಿಗಳಿಗೆ ಪ್ರಗತಿ. ತಾಯಿಯೊಂದಿಗೆ ಉತ್ತಮ ಬಾಂಧವ್ಯ. ಕೌಟುಂಬಿಕ ಜೀವನ ಚೆನ್ನಾಗಿರುವುದು. ಹನುಮಂತನ ದೇವಾಲಯಕ್ಕೆ ಭೇಟಿ ಕೂಡಿ.



**ವೃಷಭ**

ದಾನ ಧರ್ಮಗಳನ್ನು ಮಾಡುವಿರಿ. ಆರೋಗ್ಯದಲ್ಲಿ ಸುಧಾರಣೆ. ಸಾಲ ತೀರಿಸುವಿರಿ. ಹೋರಾಟದಲ್ಲಿ ಜಯ ಕಾಣುವಿರಿ. ನೌಕರಿಯಲ್ಲಿ ಪ್ರಗತಿ. ಆಕಸ್ಮಿಕ ಧನಾಗಮನ. ಕೃಷಿಕರಿಗೆ ಲಾಭದಾಯಕ. ಮಕ್ಕಳಿಗೆ ಅಭ್ಯುದಯ. ತಾಯಿಯ ಆರೋಗ್ಯದಲ್ಲಿ ಏರುಪೇರು. ಲಕ್ಷ್ಮೀನರಸಿಂಹ ಸ್ವಾಮಿಯ ದರ್ಶನ ಮಾಡಿ.



**ಮಿಥುನ**

ನಿಮ್ಮ ಆಸೆ ಆಕಾಂಕ್ಷೆಗಳು ಈಡೇರುವ ಸಮಯ. ಅನೇಕ ಮೂಲಗಳಿಂದ ಧನ ಲಾಭವಾಗುವುದು. ಬಂಧು ಬಾಂಧವರಿಂದ ಸಹಾಯ ಸಿಗುವುದು. ಎಲ್ಲರಿಂದಲೂ ಪ್ರಶಂಸೆಗೆ ಒಳಗಾಗುವಿರಿ. ಮನೆಯಲ್ಲಿ ಶುಭ ಕಾರ್ಯಗಳು ನಡೆಯುವುದು. ಕುಜ ಶಾಂತಿ ಮಂತ್ರವನ್ನು ಪಠಿಸುವುದು ಒಳ್ಳೆಯದು.



**ಕರ್ಕಾಟಕ**

ಹೊಸ ಗೆಳೆಯರು ಸಿಗುವರು. ಹಣಕಾಸಿಗೆ ಕೊರತೆ ಇರುವುದಿಲ್ಲ. ಕೆಲಸಗಾರರು ವಿಧೇಯರಾಗಿರುವರು. ಸರ್ಕಾರದಿಂದ ಸನ್ಮಾನ. ಹೊಸ ವಸ್ತ್ರ ಖರೀದಿಸುವಿರಿ. ಮಾತಿನಲ್ಲಿ ನಿಯಂತ್ರಣವಿರಲಿ. ನವಗ್ರಹ ಶಾಂತಿ ಮಂತ್ರವನ್ನು ಪಠಿಸಿಕೊಳ್ಳುವುದು ಉತ್ತಮ.



**ಸಿಂಹ**

ಆರೋಗ್ಯದಲ್ಲಿ ಸುಧಾರಣೆ. ಹಣಕಾಸಿನ ಸ್ಥಿತಿಗತಿ ಉತ್ತಮವಾಗಿರುತ್ತದೆ. ಭೂಮಿಯಿಂದ ಲಾಭ. ಸಹೋದರರಿಂದ ಸಹಾಯ ದೊರೆಯುತ್ತದೆ. ಕೈ ಹಾಕಿದ ಕೆಲಸ ಕಾರ್ಯಗಳು ಕೈಗೊಡುತ್ತವೆ. ವಿದ್ಯಾರ್ಥಿಗಳಿಗೆ ವಿದ್ಯೆಯಲ್ಲಿ ಪ್ರಗತಿ ಉಂಟಾಗುವುದು. ಸೂರ್ಯ ನಮಸ್ಕಾರ ಮಾಡುವುದು ಶುಭಕರ.



**ಕನ್ಯೆ**

ಸರ್ಕಾರಿ ಕೆಲಸ ಕಾರ್ಯಗಳು ನೆರವೇರುವುದು. ಹಣಕಾಸು ಸಮೃದ್ಧಿ. ಕುಟುಂಬ ದವರೊಂದಿಗೆ ಸಂತೋಷದಿಂದ ಕಾಲ ಕಳೆಯುವಿರಿ. ವಿದ್ಯಾವಂತ ಸ್ನೇಹಿತರು ಸಿಗುವರು. ಕೈ ಹಾಕಿದ ಕೆಲಸ ಕಾರ್ಯಗಳು ಕೈ ಹಾಕಿದ ಕೆಲಸ ಕಾರ್ಯ ಕೈಗೂಡುವುವು. ದಾನ ಧರ್ಮ ಮಾಡುವ ಮನಸ್ಸು ಮಾಡುವಿರಿ. ಭೋಗ ಭಾಗ್ಯಗಳು ಲಭಿಸುವುದು.



**ತುಲಾ**

ವ್ಯಾಪಾರದಲ್ಲಿ ಅಭಿವೃದ್ಧಿ ಇರುವುದು. ಆರೋಗ್ಯ ಉತ್ತಮವಾಗಿರುವುದು. ಉನ್ನತಾಧಿಕಾರಿಗಳಿಂದ ಲಾಭ. ಉದ್ಯೋಗದಲ್ಲಿ ಬಡ್ತಿ. ಕ್ಲಿಷ್ಟ ಕಾರ್ಯಗಳನ್ನು ಯಶಸ್ವಿಯಾಗಿ ಪೂರೈಸುವಿರಿ. ವಿದ್ಯಾರ್ಥಿಗಳಿಗೆ ವಿದ್ಯೆಯಲ್ಲಿ ಪ್ರಗತಿ. ಪ್ರಯಾಣ ಬೆಳೆಸುವಿರಿ.



**ವೃಶ್ಚಿಕ**

ಮನೆಯಲ್ಲಿ ಶುಭಕಾರ್ಯಗಳು ನೆರವೇರುವುದು. ಹಣವನ್ನು ಸಾಕಷ್ಟು ಸಂಗ್ರಹಿಸುವಿರಿ. ಕೈ ಹಾಕಿದ ಕೆಲಸಗಳು ಕೈಗೂಡುವುದು. ಒಳ್ಳೆಯ ಆಹಾರ, ಮಿತ್ರರಿಂದ ಸಹಕಾರ, ಲಲಿತ ಕಲೆಗಳಲ್ಲಿ ಆಸಕ್ತಿ ಮುಂತಾದ ಶುಭ ಫಲಗಳು ಉಂಟಾಗುವುದು.



**ಧನಸ್ಸು**

ಮಗನಿಂದ ಸಂತೋಷ ಉಂಟಾಗುತ್ತದೆ. ಶತ್ರುಗಳು ಸೋಲುತ್ತಾರೆ. ಪ್ರಯಾಣದಿಂದ ಪ್ರಯೋಜನವಿದೆ. ತೀರ್ಥಯಾತ್ರೆಗೆ ಹೋಗುವಿರಿ. ಅಕ್ಕಪಕ್ಕದವರಿಂದ ಸಹಾಯ ಸಿಗುತ್ತದೆ. ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿ ವಹಿಸುವಿರಿ.



**ಮಕರ**

ಮನೆಯಲ್ಲಿ ಶುಭಕಾರ್ಯಗಳು ಜರುಗುವುದು. ಕೃಷಿಕರಿಗೆ ಲಾಭದಾಯಕ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ತಲ್ಲೀನತೆ. ಅತಿಯಾದ ಶಿಸ್ತನ್ನು ಪಾಲಿಸುವಿರಿ. ಪರಿಶ್ರಮದಿಂದ ಕೆಲಸ ಮಾಡುವಿರಿ. ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ಧಿ.




**ಕುಂಭ**

ಕೈಕೊಂಡ ಕೆಲಸ ಕಾರ್ಯಗಳು ನೆರವೇರುತ್ತದೆ. ಮನೆಗೆ ಹೊಸ ವಸ್ತುಗಳನ್ನು ಕೊಂಡು ತರುವಿರಿ. ಆರೋಗ್ಯ ಸುಧಾರಿಸುವುದು. ಮೇಲಧಿಕಾರಿಗಳಿಂದ ಅನುಕೂಲವಾಗುವುದು. ವ್ಯಾಪಾರದಲ್ಲಿ ಅಭಿವೃದ್ಧಿ ಕಾಣುವಿರಿ. ಹಲವಾರು ಮೂಲದಿಂದ ಧನಾಗಮನವಾಗಿ ಹಣಕಾಸು ಸ್ಥಿತಿಗತಿ ಉತ್ತಮವಾಗುತ್ತದೆ.



**ಮೀನ**

ನಿಮ್ಮ ವಾಕ್ಚತುರ್ಯಕ್ಕಾಗಿ ಹೆಸರು ಮಾಡುವಿರಿ. ಅನೇಕ ಮೂಲಗಳಿಂದ ಆದಾಯ ಬರುತ್ತದೆ. ಮನೆಯಲ್ಲಿ ಶುಭ ಕಾರ್ಯಗಳು ಜರುಗುವುದು. ಅವಿವಾಹಿತರಿಗೆ ವಿವಾಹ ಯೋಗ, ಕಾರ್ಯನಿಮಿತ್ತ ವಿದೇಶ ಪ್ರಯಾಣ ಯೋಗವಿದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

**1. ಆಂಜನೇಯನಿಗೆ ವೀಳ್ಯೆದೆಲೆ ಹಾರ ಯಾಕೆ ಪ್ರಿಯ?**

ಉತ್ತರ : ಶ್ರೀರಾಮ ಸೀತಾ ಲಕ್ಷ್ಮಣ ಸಮೇತ ವನವಾಸಕ್ಕೆ ಹೋದಾಗ ರಾವಣ ಸೀತೆಯನ್ನು ಅಪಹರಿಸಿ ಅಶೋಕವನದಲ್ಲಿ ಇಡುತ್ತಾನೆ. ಹನುಮಂತ ಲಂಕಾನಗರಕ್ಕೆ ಬಂದು ಸೀತೆಯನ್ನು ಹುಡುಕಿ ಆಕೆ ಹೆದರಬಹುದು ಎಂದು ಮೊದಲು ಮರದ ಮೇಲೆ ಕುಳಿತು ರಾಮನ ಗುಣಗಾಣದ ಹಾಡನ್ನು ಹೇಳಿ, ಅವಳು ನಂಬಿದ ಮೇಲೆ ತನ್ನ ಗಾತ್ರವನ್ನು ಕಿರಿದಾಗಿಸಿ ಸೀತೆಗೆ ಕಾಣಿಸಿಕೊಂಡು ನಮಸ್ಕರಿಸಿ, ತಾನು ರಾಮನ ಭಂಟ ಹನುಮಂತ ಎಂದು ಪರಿಚಯಿಸಿಕೊಂಡು, ರಾಮನು ಕೊಟ್ಟ ರಾಮ ಮುದ್ರಿಕೆ ಉಂಗುರ ಸೀತೆಗೆ ಕೊಡುತ್ತಾನೆ. ಸೀತೆಗೆ ಸಂತೋಷವಾಯಿತು ಹಾಗೇ ರಾಮ ತನ್ನನ್ನು ಹುಡುಕಲು ಹತ್ತಿರವೇ ಬಂದಿದ್ದಾನೆಂದು ತಿಳಿದು ಅವಳ ಆತ್ಮಸ್ಥೈರ್ಯ ಹೆಚ್ಚುತ್ತದೆ. ಹನುಮಂತ ಅವಳೊಂದಿಗೆ ಮಾತಾನಾಡಿ ಲಂಕಾನಗರದ ಬಹಳಷ್ಟು ಭಾಗ ದಹನ ಮಾಡಿ ಹೊರಡುವ ಮುನ್ನ ಸೀತೆಗೆ ನಮಸ್ಕರಿಸಿ ಆಶೀರ್ವಾದ ಬೇಡುತ್ತಾನೆ. ಹನುಮಂತನ ಮೇಲಿನ ಅಭಿಮಾನ-ಪ್ರೀತಿ-ಪುತ್ರ ವಾತ್ಸಲ್ಯದಿಂದ ಅವನಿಗೆ ಆಶೀರ್ವಾದ ಮಾಡಿ ಏನು ಕೊಡಲಿ ಎಂದು ಸೀತೆಗೆ ತಿಳಿಯಲಿಲ್ಲ. ಆಗ ಕಂಡಿದ್ದೆ ಅಶೋಕವನದಲ್ಲಿ ಸೊಂಪಾಗಿ ಬೆಳೆದಿದ್ದ ವೀಳ್ಯೆದೆಲೆ ಬಳ್ಳಿ ಅವಳು ಎಲೆಗಳನ್ನು ಕೊಯ್ದು ಹಾರ ಮಾಡಿ ಹನುಮಂತನಿಗೆ ಹಾಕುತ್ತಾಳೆ.

ಸೀತಾ ಮಾತೆ ಆಶೀರ್ವದಿಸಿ ಹಾಕಿದ ಹಾರ ಹನುಮಂತನಿಗೆ ಪಾರಿತೋಷಕ ಪಡೆದಷ್ಟೇ ಸಂತೋಷವಾಗಿ ಸೀತೆಯಿಂದ ಬೀಳ್ಕೊಂಡನು. ಆ ದಿನದಿಂದಲೇ ಭಕ್ತರಿಗಾಗಿ ಆಂಜನೇಯ ಒಂದು ವರ ಕೊಟ್ಟನು. ಮುಂದೆ ಯಾರೇ ಭಕ್ತರು ತಮ್ಮ ಇಷ್ಟಾರ್ಥಗಳನ್ನು ಬೇಡಿಕೊಂಡು ನನಗೆ ವೀಳ್ಯೆದೆಲೆ ಹಾರವನ್ನು ಹಾಕಿ ಪ್ರಾರ್ಥಿಸಿದರೆ ಅವರಿಗೆ ಅನುಗ್ರಹಿಸುವೆ ಎಂದು ವಚನ ಕೊಡುತ್ತಾನೆ.

ಇದೇ ಕಾರಣದಿಂದ ಭಕ್ತರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಮಂಗಳವಾರ ಅಥವಾ ಶನಿವಾರ ಆಂಜನೇಯನನ್ನು ಪ್ರಾರ್ಥಿಸಿ ಚಿಗುರು ವೀಳ್ಯೆದೆಲೆ ಹಾರವನ್ನು ಭಕ್ತಿಯಿಂದ ಅರ್ಪಿಸಿ ಬೇಡಿಕೊಳ್ಳುತ್ತಾರೆ. 16, 48 ಅಥವಾ 108 ವೀಳ್ಯೆದೆಲೆ ಹಾರವನ್ನು ಕಟ್ಟಿ ಆಂಜನೇಯನಿಗೆ ಅರ್ಪಿಸಬೇಕು. ಮನೆಯಲ್ಲಿಯೂ ಹಾಕಿ ಪೂಜಿಸಬಹುದು. ನಂತರ ಎಲೆಗಳನ್ನು ಮನೆಯವರೇ ಸೇವಿಸಬೇಕು. ಅಥವಾ ಮುತ್ತೈದೆ ಬ್ರಾಹ್ಮಣನಿಗೆ ಅಡಿಕೆ-ದಕ್ಷಿಣೆ ಸಹಿತ ಕೊಡಬೇಕು. ತಿನ್ನುವವರಿಗೆ ಎಲೆ ಜೊತೆ ಅಡಿಕೆ ಇಟ್ಟು ಕೊಡಬೇಕು. ವೀಳ್ಯೆದೆಲೆ ಹಾರ ಹಾಕುವುದರಿಂದ ದೋಷಗಳ ನಿವಾರಣೆಯಾಗುತ್ತದೆ. ಮಾಟ- ಮಂತ್ರ-ದೋಷ ಅನುಮಾನಗಳಿದ್ದರೆ ಅವುಗಳ ಪ್ರಭಾವ ನಾಶವಾಗುತ್ತದೆ. ಮನೆಯಲ್ಲಿ ಶಾಂತಿ ನೆಲಸಿ ಶುಭಕಾರ್ಯಗಳು ನೆರವೇರುತ್ತದೆ. ಹಾಗೇ ವೀಳ್ಯೆದೆಲೆ ಮೇಲೆ ಹರಿಶಿನ-ಕುಂಕುಮ ಹಾಕಿ 2 ತುಪ್ಪದ ದೀಪ ಹಚ್ಚಿಟ್ಟರೆ ಬೇಗ ಕಂಕಣ ಭಾಗ್ಯ ಕೂಡಿ ಬರುತ್ತದೆ. ಮಕ್ಕಳಿಗೆ ಬಾಲಗ್ರಹ, ಬೆದರುವುದು, ಬೆಚ್ಚುವುದು, ದೃಷ್ಟಿದೋಷ, ಭಯ ಮುಂತಾದ ಸಮಸ್ಯೆಗಳು ನಿವಾರಣೆಯಾಗುತ್ತದೆ. ವೀಳ್ಯೆದೆಲೆ ಹಾರ ಹಾಕುವುದರಿಂದ ಕಷ್ಟ ನಿವಾರಣೆ, ಶುಭ ಸಂಕೇತ.

**2. ವೀಳ್ಯೆದೆಲೆಯ ಮಹತ್ವವೇನು?**

ಉತ್ತರ : ವೀಳ್ಯೆದೆಲೆ ಲಕ್ಷ್ಮಿಯ ವಾಸಸ್ಥಾನ. ಕುಂಕುಮಾರ್ಚನೆ ಮಾಡುವಾಗ ಎರಡು ವೀಳ್ಯೆದೆಲೆ ಅಡಿಕೆ ಒಂದು ನಾಣ್ಯ ಇಟ್ಟು, ಇದರ ಮೇಲೆ ಕುಂಕುಮ ಹಾಕಿ ಒಂದೊಂದು ನಾಮಕ್ಕೂ ಅರ್ಚನೆ ಮಾಡುತ್ತಾರೆ. ಹಣ, ಚಿನ್ನದಷ್ಟೆ ವೀಳ್ಯೆದೆಲೆ ಪವಿತ್ರವಾದದ್ದು ಎಲ್ಲ ದೇವಾನುದೇವತೆಗಳು ಇದ್ದು ಬಲದಲ್ಲಿ ಬ್ರಹ್ಮ, ಮಧ್ಯೆ ಸರಸ್ವತೀ ಎಡಕ್ಕೆ ಪಾರ್ವತಿ, ಕೊನೆಯಲ್ಲಿ ಗೌರಿ, ದಂಟಿನಲ್ಲಿ ವಿಷ್ಣು, ಹಿಂದೆ ಚಂದ್ರ, ಎಲ್ಲಾ ಮೂಲೆಯಲ್ಲೂ ಪರಮೇಶ್ವರ ಇದ್ದಾನೆ. ಮೃದು ಮಧ್ಯದಲ್ಲಿ ಮನ್ಮಥನಿದ್ದಾನೆ. ಈಗಾಗಿ ವಿದ್ಯಾರ್ಥಿಗಳು ವೀಳ್ಯೆದೆಲೆ ತಿನ್ನಬಾರದು. ಮದುವೆಯಾದ ದಂಪತಿಗಳು ತಾಂಬೂಲ ಸೇವನೆ ಮಾಡಬೇಕು. ವೀಳ್ಯೆದೆಲೆ ತುದಿಯಲ್ಲಿ ಮೃತ್ಯುದೇವತೆ ಇರುತ್ತಾಳೆ. ಆದ್ದರಿಂದ ತುದಿಯನ್ನು ಕಿತ್ತು ಬಿಸಾಕುತ್ತಾರೆ. ಜ್ಯೇಷ್ಠಾಲಕ್ಷ್ಮೀ, ಅಹಂಕಾರ ದೇವತೆ ಇರುವ ತುಟ್ಟನ್ನು ಮುರಿದು ಹಾಕುತ್ತಾರೆ.




# ಗಜೇಂದ್ರನ ಭಕ್ತಿಗೆ ಒಲಿದು ಮೋಕ್ಷ ನೀಡಿದ ಶ್ರೀಹರಿ

– ಎ, ಆರ್. ರಘುರಾಮ
9916138436

ಭಾಗವತದಲ್ಲಿ ಬರುವ ಒಂದು ಕಥೆ. ಇಂದ್ರದ್ಯುಮ್ನ ಎಂಬಾತ ಪಾಂಡ್ಯ ರಾಜ್ಯ ಆಳುತ್ತಿದ್ದ. ಇವನು ಪರಮ ವಿಷ್ಣು ಭಕ್ತನಾಗಿದ್ದ. ಧರ್ಮ ಅರಿತು ಪ್ರಜೆಗಳ ಪರಿಪಾಲನೆ ಮಾಡುತ್ತಿದ್ದ. ರಾಜ್ಯದ ಜನರಿಗೆ ತಂದೆ-ತಾಯಿಯ ಪ್ರೀತಿ ನೀಡಿದ್ದ. ತ್ರಿಕೂಟಾಚಲ ಎಂಬ ಕಣಿವೆಗೆ ತೆರಳಿ ತಪಸ್ಸಿಗೆ ಕುಳಿತ. ವಿಷ್ಣುವಿನ ಕುರಿತೇ ಧ್ಯಾನ ಮಗ್ನನಾದ. ಅದೇ ಕಾಲಕ್ಕೆ ಅಗಸ್ತ್ಯ ಮುನಿಗಳು ತಮ್ಮ ಪರಿವಾರದೊಂದಿಗೆ ಈ ತಾಣಕ್ಕೆ ಬಂದರು. ರಾಜನು ಧ್ಯಾನದಲ್ಲಿ ಮುಳುಗಿದ್ದ. ಅವನಿಗೆ ಪ್ರಪಂಚದ ಪರಿವೇ ಇರಲಿಲ್ಲ.

ರಾಜನು ಇನ್ನೇನು ಎದ್ದು ನಮ್ಮನ್ನು ಉಪಚರಿಸುತ್ತಾನೆ ಎಂದು ಅಗಸ್ತ್ಯರು ಬಹಳ ಕಾಲ ಕಾದರು. ಊಹುಂ. ರಾಜ ಇಂದ್ರದ್ಯುಮ್ನನ ತಪಸ್ಸು ಮುಂದುವರಿದಿತ್ತು. ಸರಿ. ಋಷಿಗಳಿಗೆ ಕೋಪ ಬಂತು. ನೀನು ಇದೇ ಸ್ಥಳದಲ್ಲಿ ಆನೆ ಆಗಿ ಜನಿಸು ಎಂದು ಶಾಪ ಕೊಟ್ಟುಬಿಟ್ಟರು. ರಾಜನು ಆನೆಯಾಗಿ ಜನಿಸಿದ. ಇಂದ್ರದ್ಯುಮ್ನನ ಎಲ್ಲ ಗುಣಗಳೂ ಆನೆಯಲ್ಲಿತ್ತು. ಸರಿ. ತ್ರಿಕೂಟಾಚಲ ಪ್ರದೇಶದಲ್ಲಿದ್ದ ಆನೆಗಳಿಗೆಲ್ಲಾ ಒಡೆಯನಾದ. ಇವನಿಗೆ ಗಜಗಳ ಇಂದ್ರ-ಗಜೇಂದ್ರ ಎಂಬ ಹೆಸರು ಬಂತು. ತ್ರಿಕೂಟಾಚಲವು ಋಷಿಗಳು, ಯಕ್ಷರು ಮತ್ತು ದೇವತೆಗಳ ತಪೋಭೂಮಿ ಆಗಿದ್ದರಿಂದ ಗಜೇಂದ್ರನು ಶಾಪಗ್ರಸ್ಥನಾಗಿದ್ದರೂ ನೆಮ್ಮದಿಯಾಗಿಯೇ ಇದ್ದ. ಸಮೀಪದ ಕೊಳಕ್ಕೆ ಎಂದಿನಂತೆ ನೀರು ಕುಡಿಯಲು ಮತ್ತು ಜಲ ಕ್ರೀಡೆಯಾಡಲು ಬಳಗದವರೊಂದಿಗೆ ಗಜೇಂದ್ರ ಬಂದ. ಅಲ್ಲಿ ಒಂದು ಮೊಸಳೆ ಅದರ ಕಾಲನ್ನು ಭದ್ರವಾಗಿ ಹಿಡಿಯಿತು. ಕಾಲನ್ನು ಹೊರೆ ತೆಗೆಯಲು ಗಜೇಂದ್ರನಿಗೆ ಆಗಲೇ ಇಲ್ಲ.


ಜೋರಾಗಿ ಘೀಳಿಟ್ಟ. ಇತರ ಆನೆಗಳೂ ತಮ್ಮ ರಾಜನನ್ನು ಮೊಸಳೆಯ ಬಾಯಿಂದ ಬಿಡಿಸಲು ತುಂಬಾ ಯತ್ನಿಸಿದುವು. ಊಹುಂ. ಆಗಲೇ ಇಲ್ಲ. ಗಜೇಂದ್ರನಿಗೆ ಪೂರ್ವಜನ್ಮದ ಸ್ಮರಣೆ ಫಲವಾಗಿ ವಿಷ್ಣುವಿನ ನೆನಪಾಯಿತು. ಕಡೆಗೆ ಅವನೇ ಗತಿ ಎಂದು ಭಕ್ತಿಯಿಂದ ಹರಿಧ್ಯಾನ ಮಾಡಿತು. ನೀನೇ ಅನಾಥ ಬಂಧು. ನನ್ನನ್ನು ಮೊಸಳೆ ಹಿಡಿತದಿಂದ ಮುಕ್ತಗೊಳಿಸಲು ಎಂದು ಬೇಡಿತು. ಶ್ರೀಹರೀ ಎಂದು ಮೊರೆ ಇಟ್ಟಿತು. ವೈಕುಂಠದಲ್ಲಿದ್ದ ವಿಷ್ಣುವಿಗೆ ಗಜೇಂದ್ರನ ಕೂಗು ಮುಟ್ಟಿತು. ಮೊದಲೇ ಇಂದ್ರದ್ಯುಮ್ನ ತಪಸ್ಸು ಮಾಡಿದ್ದ. ಆತ ತನ್ನ ಭಕ್ತನೆಂಬದು ಶ್ರೀ ಹರಿಗೆ ತಿಳಿದಿತ್ತು.

ಭಕ್ತ ಪಾಲಕನಾದ ಆತ ಲಕ್ಷ್ಮೀದೇವಿಗೆ ತಿಳಿಸಿ ಅಲ್ಲಿಂದ ಎದ್ದು ಹೊರಟೇಬಿಟ್ಟ. ಗರುಡನ ಮೇಲೆ ಕುಳಿತು ತ್ರಿಕೂಟಾಚಲ ಕಣಿವೆಗೆ ಬಂದ. ಗಜೇಂದ್ರನಿಗೆ ಆನಂದವೋ ಆನಂದ. ತಪಸ್ಸಿನ ವೇಳೆ ದರ್ಶನ ನೀಡ ಬೇಕಿದ್ದ ಶ್ರೀಹರಿ ಈಗಲಾದರೂ ಕಂಡನಲ್ಲಾ ಎಂಬ ಧನ್ಯತೆ. ತನ್ನ ಸೊಂಡಿಲನ್ನು ಮೇಲೆತ್ತಿ ಭಕ್ತಿಯಿಂದ ನಮಿಸಿದ. ಶ್ರೀಹರಿಯು ತನ್ನ ಕೈಯಲ್ಲಿದ್ದ ಸುದರ್ಶನ ಚಕ್ರವನ್ನು ಕಳಿಸಿದ. ಅದು ಮೊಸಳೆಯನ್ನು ಕತ್ತರಿಸಿ ಹಾಕಿತು. ಮೊಸಳೆಯು ಜೀವ ಬಿಟ್ಟಿತು. ಅವನೊಬ್ಬ ಗಂಧರ್ವನಾದ. ಹೂ ಹೂ ಎಂಬ ಹೆಸರಿನ ಗಂಧರ್ವನು ದೇವಲ ಮಹರ್ಷಿ ಶಾಪದಿಂದ ಮೊಸಳೆಯಾಗಿ ಜನಿಸಿದ್ದ. ಅವನಿಗೂ ಶ್ರೀ ಹರಿಯಿಂದ ಮುಕ್ತಿ ದೊರಕಿತು. ಶ್ರೀ ಹರಿ ಮತ್ತು ಗಜೇಂದ್ರನಿಗೆ ವಂದಿಸಿ ಆತ ಗಂಧರ್ವ ಲೋಕಕ್ಕೆ ಹೋದ. ಇತ್ತ ಗಜೇಂದ್ರನು ಶ್ರೀ ಹರಿಯನ್ನು ಅನಂತವಾಗಿ ಸ್ತುತಿ ಮಾಡಿದ. ಪೂರ್ವ ಜನ್ಮದ ಸ್ಮರಣೆಯೂ ಆತನಿಗೆ ಬಂದು ಇನ್ನಷ್ಟು ಆತ್ಮಾನಂದ ಹೊಂದಿದ. ಅನನ್ಯ ಹರಿಭಕ್ತಿ ಇರುವ ಗಜೇಂದ್ರನಿಗೆ ಶ್ರೀ ಹರಿಯು ದೇವ ಸ್ವರೂಪ ನೀಡಿದ. ಈ ಕತೆ ಗಜೇಂದ್ರ ಮೋಕ್ಷ ಎಂದೇ ಪ್ರಸಿದ್ಧಿಯಾಗಿದೆ. ಇದರ ಸಂದೇಶವೆಂದರೆ ಸಂಪೂರ್ಣ ಶರಣಾಗತಿ. ಭಗವಂತನ ಮೇಲಿನ ಅಚಲ ಭಕ್ತಿ ಇದ್ದರೆ ಯಾವ ಕಷ್ಟ ಕಾಲದಲ್ಲೂ ದೇವರ ಸಹಾಯ ನಮಗೆ ಒದಗುತ್ತದೆ. ಗಜೇಂದ್ರ ಆನೆ ತನ್ನ ಬಲ ಮತ್ತು ಪರಿವಾರದ ಮೇಲೆ ಅಪಾರ ನಂಬಿಕೆಯಿಟ್ಟು ಹೋರಾಡಿದರೂ ಸೋಲುತ್ತದೆ. ಅಹಂಕಾರವನ್ನು ಬಿಟ್ಟು ದೇವರಿಗೆ ಶರಣಾಗುತ್ತದೆ. ಸಕಾಲಿಕ ಪ್ರಾರ್ಥನೆಯಿಂದ ನೇರವಾಗಿ ನಾವು ದೇವರ ಮೊರೆ ಹೋಗಬೇಕು. ಪ್ರಾರ್ಥಿಸುವ ಜೀವ ಯಾವುದಾದರೂ ಸರಿ. ಭಗವಂತನು ಭೇದವಿಲ್ಲದೆ ರಕ್ಷಿಸಲು ಓಡೋಡಿ ಬರುತ್ತಾನೆ. ಸಂಕಷ್ಟ ಪರಿಹರಿಸುತ್ತಾನೆ.






ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.





ಬಣ್ಣವನ್ನು ತುಂಬಿರಿ.



ಇಲ್ಲಿರುವ ಸುಬ್ರಮಣ್ಯ ಸ್ವಾಮಿಯವರು ಅಮ್ಮ ಪಾರ್ವತಿಯ ಬಳಿಯಿರುವ ತ್ರಿಶೂಲವನ್ನು ಪಡೆಯಲು ಯಾವ ಹಾದಿಯಲ್ಲಿ ಹೋಗಿ ತ್ರಿಶೂಲವನ್ನು ಪಡೆಯುತ್ತಾರೆ ಎಂದು ಕಂಡು ಹಿಡಿಯಿರಿ ಮಕ್ಕಳೇ ನೋಡೋಣ !



ಮಾರ್ಗಶೋಧನೆ







## ಗೊಂಬೆಯನ್ನು ಗಮನಿಸಿ

ಈ ಚಿತ್ರದಲ್ಲಿರುವ ಗಾಯಿತ್ರಿ ದೇವಿಗೆ ಯಾವ ಮಂತ್ರವನ್ನು ಹೇಳುತ್ತಾರೆ ಕಂಡು ಹಿಡಿಯಿರಿ ನೋಡೋಣ ಮಕ್ಕಳೇ!

ॐ ಭೂರ್ಭುವಸ್ವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ ॥

:ಉತ್ತರ



ತಿರುಮಲೆ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

## ರಸ ಪ್ರಶ್ನೆಗಳು

01.ಇಷ್ಟಗಳನ್ನು ಈಡೇರಿಸುವ ತಾಯಿ ಯಾರು?.....

02.ಆಷಾಢಮಾಸದ ಕೊನೆಯ ಅಮಾವಾಸ್ಯೆ ಯಾವ ವ್ರತವನ್ನು ಆಚರಿಸುತ್ತಾರೆ?.....

03.ಜಯತೀರ್ಥರು ಎಂದು ಬೃಂದಾವನಸ್ಥರಾದರು? .....

04.ಯಾವ ರಾಜ್ಯದಲ್ಲಿ ಗಮ್ಹಪೂರ್ಣಿಮೆಯನ್ನು ಆಚರಿಸುತ್ತಾರೆ?..... .....

05.ಯಾವ ಮಾಸದಲ್ಲಿ ಉಪಾಕರ್ಮವನ್ನು ಆಚರಿಸುತ್ತಾರೆ?. .....

06.ಭಗವಂತ ಯಾವ ರೂಪದಿಂದ ಇರುತ್ತಾನೆ? .....

07.ಯಾರ ಅನುಗ್ರಹದಿಂದ ಎಲ್ಲಾ ರೋಗಗಳು ನಯವಾಗುತ್ತವೆ? ..... .....

08.ಆಳ್ವಾರ್ ಎಂಬ ಶಬ್ದದ ಅರ್ಥವೇನು?..... .....

09.ಕಾಡನೂರಿನಲ್ಲಿ ಯಾವ ಅರಸರ ಕಾಲದ ಶಾಸನೋಕ್ತ ದೇವಾಲಯವಿದೆ?.....

10.ಯಾವ ನದಿ ತೀರದಲ್ಲಿ ಪೆರುಂಕೊಳಮ್ ಇದೆ? .....

11.ಯಾರು ತಿರುವೇಂಗಡದಲ್ಲಿ ವಾಸವಾಗಿದ್ದರು?.....

12.ಗಂಗೈಕೊಂಡದ ರಾಜ ಯಾರು?..... .....

13.ಯಾರು ಬೇಟೆಯಾಡಲು ಕಾಡಿಗೆ ಹೋದರು?. .....

14.ವೀಳ್ಯೆದೆಲೆ ಎಷ್ಟು ಪವಿತ್ರವಾದುದು? .....

15.ಗಜೇಂದ್ರನಿಗೆ ಯಾರ ನೆನಪಾಯಿತು?.....

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.


**50 ಕ್ವಿಜ್**

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

**ಪ್ರಧಾನ ಸಂಪಾದಕರು**
**ಸಪ್ತಗಿರಿ ಮಾಸಪ್ರತಿಕೆ**
**ತಿ.ತಿ.ದೇ. ಪ್ರೆಸ್,**
**2 ನೇ ಅಂತಸ್ತು**
**ಕೆ.ಟಿ. ರಸ್ತೆ,**
**ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ : |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ.




1) ಗರುಡ ಪಂಚಮಿ 2) ನಾಗ ಪಂಚಮಿ 3) ಉಪಾಕರ್ಮ 4) ರಾಖಿ 5) ವರಮಹಾಲಕ್ಷ್ಮಿ 6) ಆಂಡಾಳ್ ಜಯಂತಿ 7) ಗಾಯತ್ರೀ ಜಪ 8) ರಾಮ ಜಪ

ಮಕ್ಕಳೇ! ಈ ಚಿತ್ರದಲ್ಲಿರುವ ಹಬ್ಬಗಳ ಹೆಸರುಗಳು ಯಾವುದಕ್ಕೆ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ!



1) 6 2) 3 3) 5 4) 7
5) 2 6) 1 7) 4







ಮಕ್ಕಳೇ ಇಲ್ಲಿರುವ ಹೂವಿನ ಹಾರ, ಗಿಳಿ ಮತ್ತು ತುಳಸಿ ಬೃಂದಾವನ ಇವೆಲ್ಲವೂ ಆಳ್ವಾರರಲ್ಲಿ ಒಬ್ಬರಿಗೆ ಸಂಬಂಧಿಸಿದ್ದು ಅದು ಯಾರೆಂದು ಕಂಡು ಹಿಡಿಯಿರಿ ನೋಡೋಣ.


**ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!**


ಕುಲಶೇಖರ

ಚಿತ್ರಕಥೆ


# ಶತ್ರುಗಳೊಂದಿಗೆ ಸ್ನೇಹ ಮಿತಿಯಲ್ಲಿರಬೇಕು

ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ







ಬಲೆಯನ್ನು ಕಡಿದ ಮೇಲೆ ನೀನು ಏನು ಯೋಚಿಸುವೆಯೋ ಯಾರಿಗೆ ಗೊತ್ತು? ಶತ್ರುತ್ವ ಇರುವ ಕಡೇ ಸಂಧಿ ಮಾಡಿಕೊಂಡರೂ ಪೂರ್ತಿಯಾಗಿ ನಂಬಲಾಗದು.
ಅಯ್ಯೋ ಮೂಷಿಕಾ! ನಾನು ನಿನಗೆ ಕೇಡು ಎಸಗುವುದಿಲ್ಲ. ನನ್ನನ್ನು ನಂಬು ನನ್ನ ಬಲೆಯ ಹಗ್ಗವನ್ನು ಬೇಗ ಬೇಗ ಕಡಿದು ಹಾಕು.
ಭಯಪಡಬೇಡ ಈ ಬಲೆಯ ಹಗ್ಗವನ್ನು ಈಗಲೇ ಕಡಿದು ಹಾಕುತ್ತೇನೆ.
ಇಲಿಯು ಬೇಗ ಬೇಗ ಬಲೆಯ ಹಗ್ಗವನ್ನು ಕಡಿಯಿತು ಬೆಕ್ಕು ವೇಗವಾಗಿ ಮರದ ಮೇಲೆ ಏರಿತು.
ಓ ಮೂಷಿಕಾ ! ನಾವು ಇಬ್ಬರೂ ಸ್ನೇಹಿತರು ಆಪತ್ತಿನಲ್ಲಿ ಒಬ್ಬರನ್ನೊಬ್ಬರು ಕಾಪಾಡಿಕೊಂಡಿದ್ದೇವೆ. ಇಬ್ಬರೂ ಸ್ನೇಹದಿಂದಿರೋಣ ನನ್ನನ್ನು ನೋಡಿ ಭಯಪಡಬೇಡ.
ಮಾರ್ಜಾಲಾ ! ನನ್ನ ಮಾತು ಕೇಳು ಯಾರು ಮಿತ್ರರೋ ಯಾರು ಶತ್ರುಗಳೋ ಹೇಳುವುದು ಕಷ್ಟ.ನಿನ್ನ ಮನಸ್ಸು ಯಾವಾಗ ಹೇಗೆ ಬದಲಾಗುವುದೋ ಯಾರಿಗೆ ಗೊತ್ತು.
ಅಯ್ಯೋ ಆ ರೀತಿ ಹೇಳುವುದು ಧರ್ಮವೇ? ನನ್ನನ್ನು ಕಾಪಾಡಿರುವೆ ಆದ್ದರಿಂದ ನಿನ್ನನ್ನು ನಾನು ತಿನ್ನುವುದಿಲ್ಲ.
ಇಲ್ಲ ಮಾರ್ಜಾಲಾ ಇಲ್ಲ! ನಿನ್ನಿಂದ ನಾನು ಬದುಕಿದೆ. ನನ್ನಿಂದ ನೀನು ಬಲೆಯಿಂದ ಹೊರಬಂದೆ. ನಮ್ಮ ಸ್ನೇಹ ಇಷ್ಟೇ ಇದ್ದರೆ ಒಳ್ಳೆಯದು. ಇದಕ್ಕಿಂತಲೂ ನಾನು ನಿನಗೆ ಹತ್ತಿರವಾಗಿ ಬರುವುದಿಲ್ಲ. ಏಕೆಂದರೆ ನಾನು ನಿನಗೆ ಆಹಾರವಲ್ಲವೇ!
53
ಮೂಷಿಕ ಹೇಳಿದ್ದು ನಿಜವೇ ಅಲ್ಲವೇ! ಅದು ನನಗೆ ಆಹಾರ. ಯಾವ ಸಮಯದಲ್ಲಿ ನನ್ನ ಬುದ್ಧಿ ಹೇಗೆ ಬದಲಾಗುತ್ತದೋ ಅಲ್ಲವೇ?
ನೀತಿ : ಶತ್ರುಗಳಿಗೆ ಅಗತ್ಯವಿದ್ದಾಗ ಸಹಾಯ ಮಾಡಬಹುದು, ಆದರೆ ಶತ್ರುಗಳನ್ನು ಪೂರ್ತಿಯಾಗಿ ನಂಬಬಾರದು.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ
(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :
(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್‌ಕೋಡ್ ತಪ್ಪದೇನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :
☐ ಕನ್ನಡ ☐ ತೆಲುಗು ☐ ತಮಿಳು
☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- ( 12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :
(ಅ) ಚಂದಾ ನಂಬರು :
(ಆ) ಭಾಷೆ :

7. ಸಲ್ಲಿಸಿದ ಹಣ :
ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :
ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

## ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಅಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಅಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and Published by Dr. V. G. Chokkalingam, M.A.,Ph.D.,PG.Dip In JMC on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.,Dip In JMC



ತಿರುಮಲೆ ಸ್ವಾಮಿಯವರನ್ನು 11-06-2026 ರಂದು ಆಂಧ್ರಪ್ರದೇಶದ ರಾಜ್ಯಪಾಲರಾದ ಗೌ॥ ಶ್ರೀ ಎಸ್. ಅಬ್ದುಲ್ ನಜೀರ್ ಕುಟುಂಬ ಸಮೇತರಾಗಿ ದರ್ಶನ ಪಡೆದರು. ಈ ಸಂದರ್ಭವಾಗಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ರವಿಚಂದ್ರ ಐ.ಎ.ಎಸ್., ರವರು ಮತ್ತು ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ. ಹೆಚ್. ವೆಂಕಯ್ಯ ಚೌದರಿ ಐ.ಆರ್.ಎಸ್., ರವರು ರಾಜ್ಯಪಾಲರಿಗೆ ಸ್ವಾಮಿಯವರ ತೀರ್ಥ ಪ್ರಸಾದಗಳನ್ನು ನೀಡಿದರು.



12-06-2026 ರಂದು ಆಂಧ್ರಪ್ರದೇಶದ ಹೈಕೋರ್ಟ್ ಪ್ರಧಾನ ನ್ಯಾಯಮೂರ್ತಿ ಜಸ್ಟಿಸ್ ಅಸಾ ಗಿಲ್ ರವರು ಕುಟುಂಬ ಸಮೇತರಾಗಿ ತಿರುಮಲೆ ಸ್ವಾಮಿಯವರ ದರ್ಶನ ಪಡೆದರು.
















ಅಂತರಾಷ್ಟ್ರೀಯ ಯೋಗಾದಿನೋತ್ಸವವನ್ನು (21-06-2026) ಆಚರಿಸುತ್ತಿರುವ ತಿ.ತಿ.ದೇ., 07-06-2026 ರಿಂದ 21-06-2026 ರ ವರೆಗೆ "ಯೋಗ ತಿ.ತಿ.ದೇ., ಆರೋಗ್ಯಾನಂದ" ಎಂಬ ಹೆಸರಿನಿಂದ ನಿರ್ವಹಿಸಿದ ವಿವಿಧ ಯೋಗಾ ಸಂಬಂಧಿತ ಕಾರ್ಯಕ್ರಮಗಳು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ರವಿಚಂದ್ರ ಐ.ಎ.ಎಸ್., ರವರು ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಡಾ॥ ಎ. ಶರತ್ ಐ.ಎ.ಎಸ್., (ನಿವೃತ್ತಿ) ರವರು ಪಾಲ್ಗೊಂಡರು.

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-07–2026 and Posting at Tirupati RMS.Regd. with the Registrar of News papers for India under RNI.No.APKAN/2021/80589. Postal Regd.No.TRP/156/2024-2026 "Licenced to Post Without Prepayment No. PMGK/RNP/WPP-04(6)/ 2024-2026" Posting on 1st of Every Month

